ಸೋಮವಾರ, ಮಾರ್ಚ್ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 81 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಎಂಬಿಎ ಮತ್ತು ಪಿಜಿಡಿಎಂ ಬಗ್ಗೆ ಗೊಂದಲಕ್ಕೆ ಒಳಗಾಗುವುದಕ್ಕಿಂತ ಈ ಎರಡರ ನಡುವಿನ ಸಾಮ್ಯತೆ ಹಾಗೂ ವ್ಯತ್ಯಾಸಗಳ ಬಗ್ಗೆ ಸಂಪೂರ್ಣವಾಗಿ ತಿಳಿಯುವುದು ಒಳಿತು.



ಕೋವಿಡ್ ಪರಿಣಾಮ: ಮಕ್ಕಳಲ್ಲಿ ಬೊಜ್ಜು ಹೆಚ್ಚಳ 3A
‘ಕಾವೇರಿ ಕೂಗು’ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್
ವಿಶ್ವ ಜಲ ದಿನ ವಿಶೇಷ 7
ವನ್ಯಜೀವಿ ರಕ್ಷಣೆಗೆ ಲಿಡಾರ್ ತಂತ್ರಜ್ಞಾನ ಬಳಕೆ 8

ಒಂದೇ ಕಂತಿನಲ್ಲಿ ಅನುದಾನ ಬಿಡುಗಡೆ ● ಪ್ರಭಾವಿ ಮಠಗಳು, ಸಮುದಾಯಗಳಿಗೆ ಮಣೆ

ಮಠ, ಮಂದಿರಗಳಿಗೆ ₹ 80 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿದ್ದ ಅನುದಾನದ ಮೊತ್ತವನ್ನು ಕೋವಿಡ್ ಕಾರಣದಿಂದ ಕಡಿತಗೊಳಿಸಿದ್ದ ರಾಜ್ಯ ಸರ್ಕಾರ, ಅಭಿವೃದ್ಧಿ ಕಾಮಗಾರಿಗಳಿಗೂ ತಡೆ ವಿಧಿಸಿತ್ತು. ಆದರೆ, ಆರ್ಥಿಕ ವರ್ಷದ ಕೊನೆಯಲ್ಲಿ ವಿವಿಧ ಮಠ, ಮಂದಿರಗಳು ಮತ್ತು ಜಾತಿವಾರು ಸಂಘ ಸಂಸ್ಥೆಗಳಿಗೆ ಒಂದೇ ಕಂತಿನಲ್ಲಿ ₹ 80.25 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಧಾರ್ಮಿಕ ದತ್ತಿ ಇಲಾಖೆಯ ಮೂಲಕ ಮಾರ್ಚ್ 19ರಂದು ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ. ರಾಜ್ಯದಾದ್ಯಂತ 436 ಮಠ, ಮಂದಿರ, ದೇವಸ್ಥಾನ ಹಾಗೂ ಜಾತಿ ಕೇಂದ್ರಿತ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ. ಮಂಜೂರಾಗಿರುವ ಅನುದಾನವನ್ನು ತಕ್ಷಣವೇ ಆಯಾ ಜಿಲ್ಲಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡುವಂತೆ ಖಜಾನೆ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

ಲೋಕಸಭಾ ಕ್ಷೇತ್ರದ ಉಪ ಚುನಾವಣೆ ನಡೆಯುತ್ತಿರುವ ಬೆಳಗಾವಿ ಜಿಲ್ಲೆಗೆ ₹ 7.7 ಕೋಟಿ ಮತ್ತು ಉಪ ಚುನಾವಣೆಯ ಕಣವಾಗಿರುವ ಬಸವಕಲ್ಯಾಣ ಕ್ಷೇತ್ರದ ಹಾವಗಿಲಿಂಗೇಶ್ವರ ಹಿರೇಮಠಕ್ಕೆ ₹ 10 ಲಕ್ಷ ನೀಡಿದ್ದರೆ, ಸಿಂದಗಿ ಕ್ಷೇತ್ರದ ಎರಡು ಮಠಗಳಿಗೆ ಒಟ್ಟು ₹ 25 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ರಾಯಚೂರು ಜಿಲ್ಲೆಯ ಮಸ್ಕಿ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಅನುದಾನ ನೀಡಿಲ್ಲ. ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯೂ ದಿಢೀರ್ ಅನುದಾನ ಬಿಡುಗಡೆಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಶಿವಮೊಗ್ಗಕ್ಕೆ ಸಿಂಹಪಾಲು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿನಿಧಿಸುವ ಶಿವಮೊಗ್ಗ ಜಿಲ್ಲೆಗೆ ಅತ್ಯಧಿಕ (₹15.33 ಕೋಟಿ) ಅನುದಾನ ಬಿಡುಗಡೆ ಮಾಡಲಾಗಿದೆ. ₹ 2 ಲಕ್ಷದಿಂದ ₹ 1 ಕೋಟಿಯವರೆಗೆ 146 ದೇವಸ್ಥಾನ, ಮಠ, ಮಂದಿರ, ಸಂಘ ಸಂಸ್ಥೆಗಳಿಗೆ ಅನುದಾನ ನೀಡಲಾಗಿದೆ. ಈ ಪೈಕಿ ಮುಖ್ಯಮಂತ್ರಿ ಪ್ರತಿನಿಧಿಸುವ ಶಿಕಾರಿಪುರ ವಿಧಾನಸಭಾ ಕ್ಷೇತ್ರಕ್ಕೆ ₹ 2.5 ಕೋಟಿ ಒದಗಿಸಲಾಗಿದೆ. ಬಿಜೆಪಿ ಸರ್ಕಾರದ ಜತೆ ಸಂಘರ್ಷಕ್ಕೆ ಇಳಿದಿರುವ ಕಾಂಗ್ರೆಸ್ ಶಾಸಕ ಸಂಗಮೇಶ್ವರ್ ಪ್ರತಿನಿಧಿಸುವ ಭದ್ರಾವತಿ ಕ್ಷೇತ್ರಕ್ಕೆ ಅತ್ಯಲ್ಪ ಮೊತ್ತ ನೀಡಲಾಗಿದೆ.

ಮಂಡ್ಯ (₹ 8ಕೋಟಿ), ಬೆಳಗಾವಿ (₹ 7.78 ಕೋಟಿ), ತುಮಕೂರು (₹5.40 ಕೋಟಿ), ಉಡುಪಿ (₹5.25 ಕೋಟಿ), ಚಿತ್ರದುರ್ಗ (₹ 4 ಕೋಟಿ), ಮೈಸೂರು (₹ 3.83 ಕೋಟಿ) ಜಿಲ್ಲೆಗಳಿಗೆ ಹೆಚ್ಚಿನ ಅನುದಾನ ದೊರಕಿದೆ. ಚಿಕ್ಕಬಳ್ಳಾಪುರ ಜಿಲ್ಲೆಗೆ ಕೇವಲ ₹ 2 ಲಕ್ಷ ದೊರಕಿದ್ದರೆ, ಬೆಂಗಳೂರು ಗ್ರಾಮಾಂತರ, ಗದಗ, ಕೊಡಗು ಮತ್ತು ಕೋಲಾರ ಜಿಲ್ಲೆಗಳಿಗೆ ತಲಾ ₹ 20 ಲಕ್ಷ ನೀಡಲಾಗಿದೆ. ಕೊಪ್ಪಳ ಜಿಲ್ಲೆಗೆ ₹ 25 ಲಕ್ಷ ನೀಡಿದ್ದರೆ, ಬೆಂಗಳೂರು ನಗರ ಜಿಲ್ಲೆಗೆ ₹ 40 ಲಕ್ಷ ಮಂಜೂರು ಮಾಡಲಾಗಿದೆ.

ಕೆಲವರಿಗೆ ಪ್ರಾಶಸ್ತ್ಯ: ಮಂಡ್ಯ ಜಿಲ್ಲೆಗೆ ನೀಡಿರುವ ₹ 8 ಕೋಟಿ ಮೊತ್ತದಲ್ಲಿ ₹ 7.05 ಕೋಟಿಯಷ್ಟು ಸಚಿವ ಕೆ.ಸಿ. ನಾರಾಯಣಗೌಡ ಪ್ರತಿನಿಧಿಸುವ ಕೆ.ಆರ್. ಪೇಟೆ ಕ್ಷೇತ್ರದ ಪಾಲಾಗಿದೆ. ದಾವಣಗೆರೆ ಜಿಲ್ಲೆಗೆ ಮಂಜೂರಾಗಿರುವ ₹ 2.89 ಕೋಟಿ ಅನುದಾನದಲ್ಲಿ ₹ 2.64 ಕೋಟಿಯನ್ನು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಪ್ರತಿನಿಧಿಸುವ ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿದೆ. ಇತ್ತೀಚೆಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ರಮೇಶ ಜಾರಕಿಹೊಳಿ ಪ್ರತಿನಿಧಿಸುವ ಗೋಕಾಕ ವಿಧಾನಸಭಾ ಕ್ಷೇತ್ರಕ್ಕೆ ₹ 2 ಕೋಟಿಯಷ್ಟು ಅನುದಾನ ಮಂಜೂರು ಮಾಡಲಾಗಿದೆ. ವಿಜಯಪುರ ಜಿಲ್ಲೆಗೆ ₹ 2.02 ಕೋಟಿ ಅನುದಾನ ಒದಗಿಸಿದ್ದು, ಬಸನಗೌಡ ಪಾಟೀಲ ಯತ್ನಾಳ ಅವರ ಕ್ಷೇತ್ರಕ್ಕೆ ₹ 1 ಕೋಟಿ ನೀಡಲಾಗಿದೆ.

ಜೆಡಿಎಸ್ ಶಾಸಕಿ ಅನಿತಾ ಕುಮಾರಸ್ವಾಮಿ ಪ್ರತಿನಿಧಿಸುವ ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ನಿರ್ದಿಷ್ಟ ಕಾಮಗಾರಿಗಳ ಪಟ್ಟಿ ಇಲ್ಲದೆ ₹ 1 ಕೋಟಿ ಒದಗಿಸಲಾಗಿದೆ. ಹಾಸನ ಜಿಲ್ಲೆಗೆ ₹ 2.31 ಕೋಟಿ ಒದಗಿಸಿದ್ದರೂ, ಎಚ್.ಡಿ. ರೇವಣ್ಣ ಅವರ ಕ್ಷೇತ್ರಕ್ಕೆ ಯಾವುದೇ ಅನುದಾನ ನೀಡಿಲ್ಲ. ಬಾಗಲಕೋಟೆ ಜಿಲ್ಲೆಗೆ ₹ 1.05 ಕೋಟಿ ಅನುದಾನ ಮಂಜೂರಾಗಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿನಿಧಿಸುವ ಬಾದಾಮಿ ಕ್ಷೇತ್ರಕ್ಕೆ ₹ 5 ಲಕ್ಷ ಮಾತ್ರ ಒದಗಿಸಲಾಗಿದೆ.

‘ಯಾವ ಲೋಪವೂ ಆಗಿಲ್ಲ’

‘ಶಾಸಕರು, ಸಂಸದರು, ಸಾಧು ಸಂತರ ಮನವಿ ಆಧರಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಠ, ಮಂದಿರಗಳಿಗೆ ಅನುದಾನ ಬಿಡುಗಡೆ ಮಾಡಿದ್ದಾರೆ.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಲಭ್ಯವಿದ್ದ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ ಯಾವ ಲೋಪವೂ ಆಗಿಲ್ಲ’ ಎಂದು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಪ್ರತಿಕ್ರಿಯಿಸಿದರು.

ಮನವಿಗಳ ಆಧಾರದಲ್ಲಿ ಹಣ ಬಿಡುಗಡೆ ಆಗಿದೆ. ರಾಜಕೀಯ ಮತ್ತಿತರ ಕಾರಣಗಳಿಂದ ತಾರತಮ್ಯ ಮಾಡುವ ಪ್ರಶ್ನೆಯೇ ಇಲ್ಲ ಎಂದರು.

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಒಳ ಪುಟ
‘ಸಾರಿಗೆ ನೌಕರರಿಗೆ ಶೀಘ್ರ 6ನೇ ವೇತನ ಆಯೋಗದ ಸೌಲಭ್ಯ’ 4

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋವಿಡ್: ಮುಖ್ಯಮಂತ್ರಿಗೆ ಆರೋಗ್ಯ ಸಚಿವರ ಮನವಿ

‘ಸರ್ವಪಕ್ಷಗಳ ಸಭೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಅದರ ನಿಯಂತ್ರಣಕ್ಕೆ ಸಲಹೆ ಪಡೆಯಲು ಸರ್ವಪಕ್ಷಗಳ ಸಭೆ ಕರೆಯುವುದು ಅಗತ್ಯವಿದೆ. ಈ ಸಂಬಂಧ ಮುಖ್ಯಮಂತ್ರಿಗೆ ಮನವಿ ಮಾಡುತ್ತೇನೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಒಂದು ವೇಳೆ ಸರ್ಕಾರದ ಪ್ರಯತ್ನದ ನಡುವೆಯೂ ಪ್ರಕರಣಗಳ ಸಂಖ್ಯೆ ಹೆಚ್ಚಾದರೆ, ಸರ್ಕಾರ ವಿಫಲವಾಗಿದೆ ಎಂದು ಟೀಕಿಸುತ್ತಾರೆ ಎಂದು ಹೇಳಿದರು.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗುವುದೇ ಎಂಬ ಪ್ರಶ್ನೆಗೆ, ಈಗಾಗಲೇ ಶಾಲಾ–ಕಾಲೇಜುಗಳ ತರಗತಿಗಳು ಆರಂಭವಾಗಿವೆ. ವಿದ್ಯಾರ್ಥಿಗಳ ಯೋಗಕ್ಷೇಮವೂ ಮುಖ್ಯ. ಇದೊಂದು ಸೂಕ್ಷ್ಮ ವಿಷಯ ಆಗಿರುವುದರಿಂದ ಈ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು ಎಂದರು.

ಕೋವಿಡ್ ಸೋಂಕಿತರ ಸಂಖ್ಯೆ ಪುನಃ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಸರ್ಕಾರದ ಮಾರ್ಗ ಸೂಚಿಯ ಪ್ರಕಾರ ನಡೆದುಕೊಳ್ಳದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಸಾವಿರ ದಾಟಿದೆ. ಶನಿವಾರ ಒಂದೇ ದಿನ ಏಳು ಜನ ಮೃತಪಟ್ಟಿದ್ದಾರೆ. ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಒಪ್ಪಿಕೊಳ್ಳಲೇಬೇಕು. ಸರ್ಕಾರ ಲಸಿಕೆ ನೀಡುತ್ತಿದೆ. ಆದರೆ, ಸಾರ್ವಜನಿಕರೂ ಕೂಡಾ ಜವಾಬ್ದಾರಿಯಿಂದ ವರ್ತಿಸಬೇಕು. ಸೋಂಕು ಹೆಚ್ಚುತ್ತಾ ಹೋದರೆ ಸರ್ಕಾರವೂ ಏನು ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಗಡಿ ಭಾಗದಿಂದ ಬರುವವರು ನೆಗೆಟಿವ್ ಪ್ರಮಾಣಪತ್ರ ತರಬೇಕು. ಆಗ ಮಾತ್ರ ಅನುಮತಿ ನೀಡಲಾಗುವುದು ಎಂದು ಸುಧಾಕರ್ ಹೇಳಿದರು.

ಒಂದೇ ದಿನ 43,846 ಪ್ರಕರಣಗಳು

ನವದೆಹಲಿ (ಪಿಟಿಐ): ದೇಶದಲ್ಲಿ ಭಾನುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ 43,846 ಕೋವಿಡ್–19 ಪ್ರಕರಣಗಳು ದೃಢವಾಗಿದ್ದು, 188 ಜನರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ದೇಶದಲ್ಲಿ ಈ ವರ್ಷ ಒಂದೇ ದಿನ ದಾಖಲಾದ ಅತ್ಯಧಿಕ ಪ್ರಕರಣ ಇದು. ಮಹಾರಾಷ್ಟ್ರ, ಕೇರಳ, ಪಂಜಾಬ್, ಕರ್ನಾಟಕ, ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಹೊಸ ಸೋಂಕು ಪ್ರಕರಣಗಳು ಶೇ 83.14 ರಷ್ಟಿವೆ.

ರಾಜಸ್ಥಾನದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಜೈಪುರ, ಅಜ್ಮೀರ್, ಕೋಟಾ, ಉದಯಪುರ ಸೇರಿದಂತೆ ಎಂಟು ನಗರಗಳಲ್ಲಿ ಸೋಮವಾರದಿಂದ ರಾತ್ರಿ ಕರ್ಫ್ಯೂ ಜಾರಿಗೊಳಿಸಿ ರಾಜಸ್ಥಾನ ಸರ್ಕಾರ ಆದೇಶಿಸಿದೆ.

ಸ್ಪೀಕರ್ ಓಂ ಬಿರ್ಲಾಗೆ ಕೋವಿಡ್

ನವದೆಹಲಿ: ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದ್ದು, ಅವರನ್ನು ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.‘ಓಂ ಬಿರ್ಲಾ ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ಏಮ್ಸ್ ಆಸ್ಪತ್ರೆ ಭಾನುವಾರ ಹೇಳಿಕೆ ಬಿಡುಗಡೆ ಮಾಡಿದೆ.

ಆರೋಗ್ಯ ವಿಮೆ: ಇನ್ನಷ್ಟು ಪಾರದರ್ಶಕಕ್ಕೆ ಪ್ರಾಧಿಕಾರ ಸೂಚನೆ

ನವದೆಹಲಿ (ಪಿಟಿಐ): ವಿಮಾ ಕಂಪನಿಗಳು ಆರೋಗ್ಯ ವಿಮೆಗೆ ಸಂಬಂಧಿಸಿದ ಕ್ಲೇಮ್‌ಗಳನ್ನು ಇತ್ಯರ್ಥ ಮಾಡುವಾಗ ಇನ್ನಷ್ಟು ಪಾರದರ್ಶಕವಾಗಿ ನಡೆದು-ಕೊಳ್ಳಬೇಕು ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಸೂಚಿಸಿದೆ.

ಅಲ್ಲದೆ, ಪಾಲಿಸಿ ಹೊಂದಿರುವವರು ಸಲ್ಲಿಸಿದ ಕ್ಲೇಮ್ ಅರ್ಜಿ ತಿರಸ್ಕೃತ ಆದಲ್ಲಿ, ಹಾಗೆ ಆಗಿದ್ದು ಏಕೆ ಎಂಬುದನ್ನು ವಿಮಾ ಕಂಪನಿಗಳು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಬೇಕು ಎಂದೂ ಪ್ರಾಧಿಕಾರ ತಾಕೀತು ಮಾಡಿದೆ.

10ನೇ ಪುಟ ನೋಡಿ

ಗಮನ ಬೇರೆಡೆಗೆ ಸೆಳೆಯುವ ಷಡ್ಯಂತ್ರ: ಆರೋಪ

‘ದೇಶಮುಖ್ ರಾಜೀನಾಮೆ ಇಲ್ಲ’

ನವದೆಹಲಿ: ಮಹಾರಾಷ್ಟ್ರದ ಗೃಹ ಸಚಿವ ಅನಿಲ್ ದೇಶಮುಖ್ ಅವರ ರಾಜೀನಾಮೆ ಸಾಧ್ಯತೆಯ ಬಗ್ಗೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸುಳಿವು ನೀಡಿದ ಗಂಟೆಯೊಳಗೆ ಪಕ್ಷವು ತನ್ನ ನಿಲುವು ಬದಲಿಸಿದ್ದು, ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದೆ.

ಅನಿಲ್ ದೇಶಮುಖ್

ಭ್ರಷ್ಟಾಚಾರ ಆರೋಪದಿಂದ ಬೇಸರಗೊಂಡಂತಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸೋಮವಾರ ಈ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಭಾನುವಾರ ಹೇಳಿದ್ದರು. ಆದರೆ ರಾತ್ರಿ ಪಕ್ಷದ ರಾಜ್ಯ ವರಿಷ್ಠ ಜಯಂತ್ ಪಾಟೀಲ್ ಹೇಳಿಕೆ ನೀಡಿ, ಉದ್ಯಮಿ ಮನ್‌ಸುಖ್ ಹಿರೇನ್ ನಿಗೂಢ ಸಾವು ಮತ್ತು ಉದ್ಯಮಿ ಮುಕೇಶ್ ಅಂಬಾನಿ ಮನೆಯ ಬಳಿ ಸ್ಫೋಟಕ ಪತ್ತೆ ಪ್ರಕರಣದಿಂದ ಗಮನ ಬೇರೆಡೆಗೆ ಸೆಳೆಯಲು ಈ ತಂತ್ರ ಹೂಡಲಾಗಿದೆ ಎಂದು ಆರೋಪಿಸಿದರು.

ಮುಂಬೈಯ ಮಾಜಿ ಪೊಲೀಸ್ ಆಯುಕ್ತರ ಹೇಳಿಕೆಯನ್ನೇ ಮುಂದಿಟ್ಟುಕೊಂಡು ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್, ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಒತ್ತಡ ಹಾಕುತ್ತಿದ್ದಂತೆ ಎನ್‌ಸಿಪಿ ಪಾಳಯದಲ್ಲೂ ಬಿರುಸಿನ ಚರ್ಚೆ ನಡೆದಿತ್ತು.

ಇನ್ನಷ್ಟು ಸುದ್ದಿಗಳು 10

ಲೇಖನಿ, ಕ್ಯಾಮೆರಾಗಳನ್ನು ಮೋದಿ ಬಂದೂಕಿನ ತುದಿಯಲ್ಲಿ ನಿಯಂತ್ರಿಸುತ್ತಿದ್ದಾರೆ

‘ಸಂಸತ್ ಚುನಾವಣೆವರೆಗೂ ಹೋರಾಟ’

● ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

ರಾಕೇಶ್ ಟಿಕಾಯತ್

ಶಿವಮೊಗ್ಗ: ‘ಇಂದು ನಡೆಯುತ್ತಿರುವ ರೈತರ ಹೋರಾಟ ಕೇವಲ ಕೇಂದ್ರ ಸರ್ಕಾರದ ವಿರುದ್ಧವಲ್ಲ, ಸರ್ಕಾರವನ್ನು ಪರೋಕ್ಷವಾಗಿ ನಡೆಸುತ್ತಿರುವ ಅದಾನಿ, ಅಂಬಾನಿಯಂತಹ ವ್ಯಕ್ತಿಗಳ ವಿರುದ್ಧವೂ ಆಗಿದೆ. ಹೌದು. ಬೇಡಿಕೆ ಈಡೇರದಿದ್ದರೆ ಮುಂದಿನ ಲೋಕಸಭಾ ಚುನಾವಣೆಯವರೆಗೂ ಸಾಗಲು ಸಿದ್ಧರಿದ್ದೇವೆ. ಈಗಷ್ಟೆ ಹೋರಾಟದ ಬೀಜ ಬಿತ್ತಿದ್ದೇವೆ. 10 ವರ್ಷವಾದರೂ ಗೊಬ್ಬರ ಹಾಕುತ್ತಲೇ ಇರುತ್ತೇವೆ’–ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ನಡೆಯುತ್ತಿರುವ ಹೋರಾಟದ ನಾಯಕತ್ವ ವಹಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ ನಾಯಕರಲ್ಲಿ ಪ್ರಮುಖರಾದ ರಾಕೇಶ್ ಟಿಕಾಯತ್ ಎಚ್ಚರಿಕೆ ನೀಡಿದ ಪರಿ ಇದು.

ಅವರೊಂದಿಗೆ ‘ಪ್ರಜಾವಾಣಿ’ ನಡೆಸಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

● ಹೋರಾಟ ಇಷ್ಟೊಂದು ದೀರ್ಘಾವಧಿ ತೆಗೆದುಕೊಳ್ಳುತ್ತದೆ ಎಂಬ ಸುಳಿವಿತ್ತೆ?

ರೈತ ಸಂಕುಲಕ್ಕೆ ಮಾರಕವಾದ ಕೃಷಿ ಕಾಯ್ದೆಗಳ ವಿರುದ್ಧ ಎಲ್ಲ ರೈತರು ಸಂಘಟಿತವಾಗಿ ಹೋರಾಟ ಮಾಡಿದರೆ ಯಶಸ್ಸು ಸಿಗುತ್ತದೆ ಎಂದು ನಂಬಿದ್ದೆವು. ಅದಕ್ಕಾಗಿ ಎಲ್ಲ ರೈತ ಮುಖಂಡರೂ ಭಿನ್ನಾಭಿಪ್ರಾಯ ಮರೆತು ಒಂದೇ ವೇದಿಕೆಯಡಿ ಹೋರಾಟ ಆರಂಭಿಸಲು ನಿರ್ಧರಿಸಿದೆವು. ಹಂತ ಹಂತವಾಗಿ ನಡೆದ ಚಳವಳಿ ದೆಹಲಿ ಗಡಿ ತಲುಪಿತು. ಕೇಂದ್ರ ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸಲಿಲ್ಲ. ಸಂಧಾನ ಮಾತುಕತೆಗಳಲ್ಲಿ ಕಾಯ್ದೆ ರದ್ದುಪಡಿಸುವ ವಿಷಯ ತೆಗೆದುಕೊಳ್ಳಲೇ ಇಲ್ಲ. ನಾವೂ ನಮ್ಮ ಪಟ್ಟು ಸಡಿಸಲಿಲ್ಲ. ಆಗಲೇ ಈ ಹೋರಾಟವನ್ನು ಸುದೀರ್ಘ ಚಳವಳಿಯಾಗಿ ಪರಿವರ್ತಿಸುವ ನಿರ್ಧಾರ ಮಾಡಿದೆವು.

● ದೀರ್ಘ ಹೋರಾಟಕ್ಕೆ ರೈತರು ಮಾನಸಿಕವಾಗಿ ಸಿದ್ಧರಿದ್ದರೇ?

ಕೇಂದ್ರ ಸರ್ಕಾರದ ನಡೆ, ಹಠಮಾರಿ ಧೋರಣೆ ಬಲ್ಲ ಎಲ್ಲರಿಗೂ ಇದು ಬೇಗ ಬಗೆಹರಿಯುವ ಹೋರಾಟವಲ್ಲ ಎನ್ನುವ ಅರಿವಿತ್ತು. ದೆಹಲಿ ಗಡಿಗೆ ತೆರಳುವ ಮುನ್ನವೇ ಬೇಡಿಕೆ ಈಡೇರದೆ ಮನೆಗೆ ಮರಳ ಬಾರದು ಎನ್ನುವ ಸಂಕಲ್ಪ ಮಾಡಿದ್ದೆವು. ಅದಕ್ಕೆ ಸಿದ್ಧರಾಗೇ ಹೊರಟೆವು. ಸೂಕ್ತ ಕಾರ್ಯತಂತ್ರ ರಚಿಸಿಕೊಂಡು ಸಾಗಿದೆವು.

● ಹಿಂದಿನ ಚಳವಳಿಗಳಿಗಿಂತ ಈ ಹೋರಾಟ ಹೇಗೆ ಭಿನ್ನ?

ಹಿಂದಿನ ಚಳವಳಿಗಳು ಸರ್ಕಾರಗಳ ವಿರುದ್ಧ ನಡೆಯುತ್ತಿದ್ದವು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂತಹ ಸರ್ಕಾರಗಳು ಪಕ್ಷ ಆಧಾರಿತ ವ್ಯವಸ್ಥೆಯ ಮೇಲೆ ಆಡಳಿತ ನಡೆಸುತ್ತಿದ್ದವು. ಇಂದು ನಡೆಯುತ್ತಿರುವ ಹೋರಾಟ ಕೇವಲ ಕೇಂದ್ರ ಸರ್ಕಾರದ ವಿರುದ್ಧವಲ್ಲ; ಸರ್ಕಾರವನ್ನು ಪರೋಕ್ಷವಾಗಿ ನಡೆಸುತ್ತಿರುವ ಅದಾನಿ, ಅಂಬಾನಿಯಂತಹ ವ್ಯಕ್ತಿಗಳ ವಿರುದ್ಧವೂ ಆಗಿದೆ. ಇಂದು ಕೇಂದ್ರ ಸರ್ಕಾರ ಎಂದರೆ ಖಾಸಗಿ ಕಂಪನಿಗಳಿಗೆ ಮಾರಾಟವಾದ ಸಂಸ್ಥೆಯಂತಿದೆ.

4ನೇ ಪುಟ ನೋಡಿ

● ತಂಡದ ಒಗ್ಗಟ್ಟು ಈ ಹೋರಾಟದ ನಂತರವೂ ಇರುತ್ತದಾ?

ಹಾಗೆ ಹೇಳಲು ನಾನು ಜ್ಯೋತಿಷಿ ಅಲ್ಲ. ಈ ಕುರಿತು ಯಾವ ಯೋಚನೆಯನ್ನೂ ಮಾಡಿಲ್ಲ. ಈ ಹೋರಾಟಕ್ಕೆ ತಾರ್ಕಿಕ ಅಂತ್ಯ ನೀಡುವುದಷ್ಟೇ ನಮ್ಮ ಮುಂದಿರುವ ಗುರಿ.

ಬಲಿಷ್ಠ ಸೇನೆ: ಭಾರತಕ್ಕೆ ನಾಲ್ಕನೇ ಸ್ಥಾನ

ನವದೆಹಲಿ (ಪಿಟಿಐ): ಜಗತ್ತಿನಲ್ಲೇ ಚೀನಾ ಅತ್ಯಂತ ಬಲಿಷ್ಠ ಮಿಲಿಟರಿ ಪಡೆಯನ್ನು ಹೊಂದುವ ಮೂಲಕ ಮೊದಲ ಸ್ಥಾನದಲ್ಲಿದೆ ಎಂದು 'ಮಿಲಿಟರಿ ಡೈರೆಕ್ಟ್' ವೆಬ್‌ಸೈಟ್ ಬಿಡುಗಡೆ ಮಾಡಿರುವ ಅಧ್ಯಯನ ವರದಿ ತಿಳಿಸಿದೆ. ಅಮೆರಿಕ ಎರಡನೇ ಸ್ಥಾನ, ರಷ್ಯಾ ಮೂರನೇ ಹಾಗೂ ಭಾರತ ನಾಲ್ಕನೇ ಸ್ಥಾನದಲ್ಲಿದೆ ಎಂದು ತಿಳಿಸಿದೆ.

ನೇತಾಜಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
ನಂ. 569/ಎ, ಶ್ರೀ ಎಂ.ಬಿ. ರಾಜಶೇಖರ್ ಅಡ್ಡರಸ್ತೆ, ಶ್ರೀ ಜಿ. ರಾಮಯ್ಯ ಮುಖ್ಯರಸ್ತೆ, ಮತ್ತಿಕೆರೆ, ಬೆಂಗಳೂರು-54. ಫೋನ್: 23601273

ಚುನಾವಣಾ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೆ,
ಸಂಘದ ಆಡಳಿತ ಮಂಡಳಿ ಸದಸ್ಯರನ್ನು ಚುನಾಯಿಸಲು ಚುನಾವಣೆಯನ್ನು ದಿನಾಂಕ: 04-04-2021ನೇ ಭಾನುವಾರದಂದು ಜ್ಞಾನತೇಜ ಶಾಲೆ, ನಂ. 8, 9ನೇ ಮುಖ್ಯರಸ್ತೆ, ಮತ್ತಿಕೆರೆ, ಬೆಂಗಳೂರು-54, ಇಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಅರ್ಹ ಸದಸ್ಯರಿಗೆ ಚುನಾವಣಾ ಸೂಚನಾ ಪತ್ರವನ್ನು ಅಂಚೆಯ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದೇ ಇರುವ ಅರ್ಹ ಸದಸ್ಯರು ಈ ಜಾಹೀರಾತನ್ನೇ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ಇಂತಿ
ಎನ್. ಆನಂದ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬೆಂಗಳೂರು: ಕೆರೆಗಳ ಜೀರ್ಣೋದ್ಧಾರ
ಪ್ರಗತಿ ಪರಿಶೀಲನೆಗೆ ಪ್ರತಿ ತಿಂಗಳು ಸಭೆ: ಎನ್‌ಜಿಟಿ ಸೂಚನೆ

ನವದೆಹಲಿ: ಬೆಂಗಳೂರಿನಲ್ಲಿರುವ ಬೆಳ್ಳಂದೂರು, ಅಗರ ಹಾಗೂ ವರ್ತೂರು ಕೆರೆಗಳ ಜೀರ್ಣೋದ್ಧಾರ ಕಾಮಗಾರಿಗಳ ಪ್ರಗತಿ ಪರಿಶೀಲಿಸಲು ಪ್ರತಿ ತಿಂಗಳು ಸಭೆ ನಡೆಸುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕರ್ನಾಟಕದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

ಕೆರೆಗಳ ಪುನಶ್ಚೇತನಕ್ಕಾಗಿ ಕೈಗೊಂಡ ಕ್ರಮಗಳ ಕುರಿತು ಜಲಶಕ್ತಿ ಹಾಗೂ ನ್ಯಾಷನಲ್ ವೆಟ್‌ಲ್ಯಾಂಡ್ಸ್ ಅಥಾರಿಟಿಗೆ ತ್ರೈಮಾಸಿಕವಾಗಿ ವರದಿ ಸಲ್ಲಿಸುವಂತೆಯೂ ಎನ್‌ಜಿಟಿ ಸೂಚಿಸಿ, ಅರ್ಜಿ ವಿಲೇವಾರಿ ಮಾಡಿತು.

ವಿವಿಧ ತ್ಯಾಜ್ಯಗಳು ಕೆರೆಗಳನ್ನು ಸೇರುವುದನ್ನು ತಡೆಯುವುದು, ಮಾಲಿನ್ಯಕಾರಕಗಳನ್ನು ಕೆರೆಯಲ್ಲಿ ಹಾಗೂ ಕೆರೆ ದಂಡೆಗಳಲ್ಲಿ ಎಸೆಯುವುದು ಹಾಗೂ ಅತಿಕ್ರಮಣವನ್ನು ತೆರವುಗೊಳಿಸುವ ಕಾರ್ಯವನ್ನು ಸಹ ಪರಿಶೀಲಿಸುವಂತೆ ಸೂಚಿಸಿದೆ. 'ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆ, ಕೆರೆಗಳಿಗೆ ಬೇಲಿ ಅಳವಡಿಕೆ ಕಾರ್ಯವನ್ನು ತ್ವರಿತಗೊಳಿಸಬೇಕು. ಕೆರೆಗಳಲ್ಲಿ ನೊರೆ ಉತ್ಪಾದನೆ, ಬೆಂಕಿ ಅವಘಡಗಳು ಸಂಭವಿಸಿದಂತೆ ಗಮನ ಹರಿಸಬೇಕು ಎಂದೂ ಸೂಚಿಸಿತು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I, HARSH resident of No.204, Anjandri Amaze, 6th Main, 6th Cross, Bangalore-560027 have changed my name to HARSH RAM NARAYAN SARDA vide affidavit dated 18/03/2021 sworn before notary L.Veena, Bangalore

PUBLIC NOTICE

PUBLIC NOTICE

Our client is desirous of investigating the title for purchase of Municipal No.12/9/2, Lavelle Road, Ward No.76-Richmond Town, Bangalore (PID No. 76-23-12/9/2) viz., Apartment No. A3 in the ground floor of the multi-storeyed building known as "Vishwa Apartments" along with the undivided 820 square feet undivided share in Property bearing Municipal No.12/9, Lavelle Road, Ward No.76-Richmond Town (earlier Division No.61), Bangalore, more fully set out in the Schedule hereto ("Schedule Property") belonging to Ms. Leila Ramachandran Bushman daughter of Dr. Sreenivasa Ramachandran ("Owner"), residing at 1908 Swan terrace, Alexandria, Virginia 22307, United States of America.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owner or objecting to such transaction with our client, should write to the undersigned within 15 (fifteen) days from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our client shall proceed on the basis that there are no claims of whatsoever nature with regard to the Schedule Property.

SCHEDULE

Municipal No.12/9/2, Lavelle Road, Ward No.76-Richmond Town, Bangalore (PID No. 76-23-12/9/2) viz., Apartment No. A3 in the ground floor of the multi-storeyed building known as "Vishwa Apartments" having a super built up area of 1545 square feet (which is inclusive of balconies and a proportionate share in the common areas) along with 1 (one) car parking space in the ground floor, constructed on the property bearing Municipal No.12/9, Lavelle Road, Ward No.76-Richmond Town (earlier Division No.61), Bangalore ("Said Land") along with the undivided 820 square feet undivided share (from and out of 10600 square feet) in the Said Land measuring and bounded as under:

East: Property belonging to Ambuja Raghavan now Casa Lavelle Apartment No.5 and circle, 121 feet. **West:** Private Property, 105 feet. **North:** Private Property, 48 feet **South:** Property belonging to Kumudu Srinivasan now Casa Lavelle Apartment No.3, 110 feet plus common circle.

(R.Sunitha), Advocate
Anup S Shah Law Firm
No.34, 7th Cross, Vasanth Nagar, Cunningham Road, Bengaluru – 560 052
Phone: +91-80-4242 3000

CONNECT ಕ್ಲಾಸಿಫೈಡ್ಸ್

For Details call - aluglass 98445 37996, 98444 59956 I www.haier.com
Available at All leading Electrical Sanitary and White Goods counters
*Conditions apply

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು, ಈ ಕೆಳಗೆ ಶೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಯನ್ನು ಅದರ ಮಾಲೀಕರಾದ ಶ್ರೀ ಬಿ ಗುರುಮೂರ್ತಿ ರೆಡ್ಡಿ, ಡಾ. ಆನಂದ್ ಬಾಸಿ, ಇವರಿಬ್ಬರ ವಾಸ: ನಂ.76/ಎ, ಮೌಂಟ್‌ಜೈನ್ ರಸ್ತೆ, 1ನೇ 'ಬಿ' ಬ್ಲಾಕ್, ಜಯನಗರ ಪೂರ್ವ, ಬೆಂಗಳೂರು-560001, ಶ್ರೀ ಎಂ ರಾಜ್ ಕುಮಾರ್ ಮತ್ತು ಶ್ರೀಮತಿ ಅರುಣಾ ರಾಜ್‌ಕುಮಾರ್, ಇಬ್ಬರ ವಾಸ: ನಂ.28, ಹೊಸ ನಂ. 49, ಆಸ್ಪಿರಿನ್ ಗಾರ್ಡನ್ 1ನೇ ಬೀದಿ, ಕಿಲ್‌ಪಾಕ್, ಚೆನ್ನೈ-10 ಇವರಿಂದ ಖರೀದಿಸಲು ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತುಗಳ ಅಥವಾ ಅವುಗಳ ಯಾವುದೇ ಭಾಗದ ಸಂಬಂಧವಾಗಿ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು, ಬೇಡಿಕೆ, ಹಿತಾಸಕ್ತಿ ಅಥವಾ ಆಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಯಾವುದೇ ರೀತಿಯ ಕ್ರಯ, ಆಧಾರ, ಭೋಗ್ಯ ಪತ್ರ ಇವುಗಳ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಹಕ್ಕು/ಆಸಕ್ತಿ/ಕ್ಲೇಮು ಹೊಂದಿದ್ದರೆ ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗೆ ಸೂಕ್ತ ದಾಖಲೆಗಳೊಡನೆ ಕೆಳಸಹಿದಾರರಿಗೆ ಸಲ್ಲಿಸಬೇಕು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಬೇರೆ ಯಾವುದೇ ವ್ಯಕ್ತಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಿಗದಿತ ಸಮಯದ ನಂತರ ಷೆಡ್ಯೂಲ್ ಆಸ್ತಿಗೆ ಯಾವುದೇ ಕ್ಲೇಮು/ಗಳು ಇಲ್ಲವೆಂದು ಪರಿಗಣಿಸಲಾಗುವುದು.

ಷೆಡ್ಯೂಲ್

ಆಸ್ತಿಯ ಪ್ರಸಕ್ತ ಮುನ್ಸಿಪಲ್ ನಂ.114, ಹಳೆ ನಂ. 531, ಲಾಲ್‌ಬಾಗ್ ಕೋಟೆ ರಸ್ತೆ, ವಿವಿ ಪುರಂ, ವಾರ್ಡ್ ನಂ. 50, ಬೆಂಗಳೂರು, ಪಿಐಡಿ ನಂ.50-23-114 ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ:50 ಅಡಿ, ಉತ್ತರದಿಂದ ದಕ್ಷಿಣಕ್ಕೆ ಪೂರ್ವದ ಭಾಗ:80 ಅಡಿ ಮತ್ತು ಪಶ್ಚಿಮದ ಭಾಗ:78 ಅಡಿ, ಒಟ್ಟು ವಿಸ್ತೀರ್ಣ 3950 ಚದರಅಡಿ ಇದ್ದು ಚಕ್ಕುಬಂದಿ: **ಪೂರ್ವಕ್ಕೆ:** ಎಂ ರಾಮಮೂರ್ತಿಯವರಿಗೆ ಸೇರಿದ ಆಸ್ತಿ, **ಪಶ್ಚಿಮಕ್ಕೆ:** ಸುಬ್ರಮಣ್ಯಮ್ ರವರಿಗೆ ಸೇರಿದ ಆಸ್ತಿ, **ಉತ್ತರಕ್ಕೆ:** ಲಾಲ್‌ಬಾಗ್ ಕೋಟೆ ರಸ್ತೆ, **ದಕ್ಷಿಣಕ್ಕೆ:** ಕನ್ಸರ್‌ವೆನ್ಸಿ.

(ಕೆ. ಎಸ್. ಮದನ ಗೋಪಾಲ್)
ವಕೀಲರು
ನಂ.1, ನೆಲಮಹಡಿ, ರಾಯಲ್ ಪಾರ್ಕ್, ನಂ. 34, ಪಾರ್ಕ್ ರಸ್ತೆ, ಬೆಂಗಳೂರು-560051, ದೂ: +22864065.

DH Classifieds
BOOK YOUR AD on SATURDAY & GET 50% OFF ON SUNDAY
For more information contact:
9880856233
9731810277 | 9901641752
9845114560 | 9886213331
*condition apply

JOB OPPORTUNITIES

Accounts & Finance

REQUIRED 1) ACCOUNTS- cum- ADMIN EXECUTIVE (Female) Any Graduate, Experience in Tally, TDS, GST filing etc., 2) MARKETING Executives (Female/ Male) for an Advertising Agency, Fluency in English, having 2 Wheeler, Walk-in- Interview on March 22nd between 11:00am-02:00pm, Adverto Advertising Pvt Ltd., No. 97, 2nd Floor, RV Road, Basavanagudi, Near Lalbagh Metro Stn, Ph: 26575020, email: advertoadvtg@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS: 7676760299/ 7676760399

EDUCATIONAL

Correspondence Courses

DIRECT FINAL (ONE Sitting) PUC/B. Com/ BA/BBA/BCA/ MBA/ B.Ed/ Diploma/ B.Tech/ D.Pharma, 100%Success. Shilpa: 9663366823

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645/9745910775

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST, PROPERTIES, LAND& BUILDING, SITES, FLATS, (ALSO) BUSINESS, COMPANIES CALL: 7411265189

REAL ESTATE SELLING

Flat

BTM Layout

BTM 1ST stage Dollar's Colony, 3BHK 1400 Sqft Climatically responsive Apartment, Full height floor to roof windows & doors, Ready to Move, 1.15Cr. Call: 9880209405

ಬಿಬಿಎಂಪಿ ಕಾಯ್ದೆ 2020– ರಚನಾತ್ಮಕ ಸುಧಾರಣೆ ಜಾರಿಯಾಗಲಿ
ಮೇಯರ್, ವಾರ್ಡ್ ಸಮಿತಿ ಪ್ರಾಧಿಕಾರ ಆಗಬೇಕಿಲ್ಲ

ಪಿ.ಜಿ.ಶೆಣೈ

ಸಿ.ಆರ್.ರವೀಂದ್ರ

ಬಿಬಿಎಂಪಿ ಸುದ್ದಿ

'ಬಿಬಿಎಂಪಿ ಕಾಯ್ದೆ -2020'ರಲ್ಲಿ ಪಾಲಿಕೆ ಪ್ರಾಧಿಕಾರಗಳ ಸಂರಚನೆ, ಕಾರ್ಯನಿರ್ವಹಣೆಗಾಗಿ ಕೆಲವು ರಚನಾತ್ಮಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಪರಿಣಾಮಕಾರಿ, ಜನಸ್ನೇಹಿ ಆಡಳಿತವನ್ನು ಸುಸೂತ್ರವಾಗಿ ನಡೆಸುವುದು ಕಷ್ಟಸಾಧ್ಯವಾಗಬಹುದು.

ಬಿಬಿಎಂಪಿ ಕಾಯ್ದೆಯ ಸೆಕ್ಷನ್ 3ರಡಿಯಲ್ಲಿ ಕಾಯ್ದೆಯ ಉಪಬಂಧಗಳನ್ನು ಕಾರ್ಯಗತಗೊಳಿಸಲು ಮೇಯರ್, ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಮಿತಿಗಳನ್ನು ಪಾಲಿಕೆಯ ಪ್ರಾಧಿಕಾರಗಳು ಎಂದು ಗೊತ್ತುಪಡಿಸಲಾಗಿದೆ. ಇದು ಅನವಶ್ಯಕ.

ಮೇಯರ್ ಅಧಿಕಾರ: ಬಿಬಿಎಂಪಿ ಕೌನ್ಸಿಲ್‌ನ ಪರವಾಗಿ ಮೇಯರ್ ಸಂವಿಧಾನದ ಅನುಚ್ಛೇದ 243-ಎಸ್ ಅಡಿ ಸಾಮೂಹಿಕ ಅಧಿಕಾರವನ್ನು ಚಲಾಯಿಸಲು ಉಪಬಂಧವನ್ನು ಕಲ್ಪಿಸಬಹುದು. ಇಂತಹ ಆಡಳಿತಾತ್ಮಕ ಅಧಿಕಾರವನ್ನು ಅವರು ವೈಯುಕ್ತಿಕವಾಗಿ ಚಲಾಯಿಸಲು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 59 (4)ರಲ್ಲಿ ಸ್ಪಷ್ಟಪಡಿಸಿಲ್ಲ. ಸೆಕ್ಷನ್ 59(4)ರಂತೆ ಮೇಯರ್ ಪರಿವೀಕ್ಷಣೆಯ ಸಾಮಾನ್ಯ ಅಧಿಕಾರಗಳನ್ನು ಹೊಂದಿರುತ್ತಾರೆ. ಪಾಲಿಕೆಯ ಕಾರ್ಯಗಳನ್ನು ನಿರ್ವಹಿಸಲು ಅಥವಾ ಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಯಾವುದೇ ನಿರ್ಣಯವನ್ನು ಜಾರಿಗೆ ತರುವುದಕ್ಕೆ ಮುಖ್ಯ ಆಯುಕ್ತರಿಗೆ ನಿರ್ದೇಶನವನ್ನು ಕೊಡಬಹುದಾಗಿರುತ್ತದೆಯೇ ವಿನಹ ಕಾಯ್ದೆಯಡಿಯಲ್ಲಿ ಅವರಿಗೆ ಯಾವುದೇ ನೇರವಾದ ಆರ್ಥಿಕ ಅಧಿಕಾರವಿಲ್ಲ. ಗುತ್ತಿಗೆ ಅನುಮೋದನೆಯ ಅಧಿಕಾರ ಪ್ರತ್ಯಾಯೋಜನೆಯನ್ನೂ ನಿಗದಿಪಡಿಸಿಲ್ಲ. ಈ ಉಪಬಂಧಗಳು ಮೇಯರ್ ಅವರನ್ನು ಪಾಲಿಕೆ ಪ್ರಾಧಿಕಾರವನ್ನಾಗಿಸಲು ಪುಷ್ಟಿಕರಿಸಿದಂತಾಗುವುದಿಲ್ಲ.

ಮೇಯರ್ ಅಧಿಕಾರಾವಧಿ: ಬಿಬಿಎಂಪಿ ಕಾಯ್ದೆ ಪ್ರಕಾರ ಮೇಯರ್ ಅಧಿಕಾರಾವಧಿ ಎರಡೂವರೆ ವರ್ಷಗಳು. ಹೆಚ್ಚು ಜನಸ್ನೇಹಿ ಆಡಳಿತಕ್ಕೆ ಅವರನ್ನು ಹೊಣೆಗಾರರನ್ನಾಗಿಸಲು ಮತ್ತು ಸಾರ್ವಜನಿಕ ಆಡಳಿತಕ್ಕೆ ಅವರ ಸ್ಪಂದನೆ ಮತ್ತು ಉತ್ತರದಾಯಿತ್ವ ಖಾತರಿಪಡಿಸಲು ಮೇಯರ್‌ಗೆ ಮರುಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಬಹುದು.

1964ರ ಕರ್ನಾಟಕ ಪೌರಸಭೆಗಳ ಕಾಯ್ದೆಯಲ್ಲಿ ಪೌರಸಭೆಯ ಅಧ್ಯಕ್ಷರನ್ನು ಅವಿಶ್ವಾಸ ಮಂಡನೆಯ ಮೂಲಕ ತೆಗೆದುಹಾಕುವ ತತ್ವದಂತೆ, ಮೇಯರ್ ಅವರನ್ನು ಪ್ರಜಾಸತ್ತಾತ್ಮಕವಾಗಿ ಅವಿಶ್ವಾಸ ನಿರ್ಣಯದ ಮೂಲಕ ತೆಗೆದು ಹಾಕಲು ಬಿಬಿಎಂಪಿ ಕಾಯ್ದೆಯಲ್ಲೂ ಉಪಬಂಧ ಕಲ್ಪಿಸಿದ್ದಲ್ಲಿ ಈ ಹುದ್ದೆಯ ವಿಶ್ವಾಸಾರ್ಹತೆ ಹೆಚ್ಚಲಿದೆ.

ಮುಖ್ಯ ಆಯುಕ್ತರು: ಮುಖ್ಯ ಆಯುಕ್ತರ ಅಧಿಕಾರ ಮತ್ತು ಕಾರ್ಯಗಳನ್ನು ಸೆಕ್ಷನ್ 64ರಲ್ಲಿ ಗೊತ್ತುಪಡಿಸಲಾಗಿದೆ. ಸೆಕ್ಷನ್ 64 (3)ರಲ್ಲಿ ವಲಯ ಆಯುಕ್ತ ತನಗೆ ಉಲ್ಲೇಖಿಸಿದ ಅಂತರ್ ವಲಯಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ತೀರ್ಮಾನಿಸುವ ಅಧಿಕಾರವನ್ನು ನಿರ್ದಿಷ್ಟಪಡಿಸಿರುವುದು ಸರಿಯಲ್ಲ. ಅಂತರ್ ವಲಯಗಳ ಸಮನ್ವಯ, ರಸ್ತೆ ಅಭಿವೃದ್ಧಿ, ಯೋಜನೆಗಳು, ನೀರು ಮತ್ತು ಇತರ ಭೌತಿಕ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲಸೌಲಭ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇತ್ಯಾದಿ ಒಳಗೊಂಡಂತೆ ಸಮಾನ ಹಿತಾಸಕ್ತಿಯ ವಿಷಯಗಳನ್ನು ಸಂಬಂಧಪಟ್ಟ ವಲಯ ಸಮಿತಿಗಳ ಸಲಹೆ ಸೂಚನೆಗಳ ಮೇರೆಗೆ, ಮುಖ್ಯ ಆಯುಕ್ತ ಬಿಬಿಎಂಪಿ ಕೌನ್ಸಿಲ್ ಮುಂದೆ ಮಂಡಿಸಿ ತೀರ್ಮಾನ ಪಡೆಯುವುದು ಒಳ್ಳೆಯದು. ಬಿಬಿಎಂಪಿ ಕೌನ್ಸಿಲ್‌ನ ನಿರ್ಣಯಗಳ ಅನುಷ್ಠಾನಕ್ಕೆ ಮುಖ್ಯ ಆಯುಕ್ತರು ಮತ್ತು ಸಂಬಂಧಪಟ್ಟ ವಲಯ ಆಯುಕ್ತರು ಬದ್ಧರಾಗಿರುತ್ತಾರೆ ಎಂದು ನಿರ್ದಿಷ್ಟಪಡಿಸಿಕೊಳ್ಳುವುದು ಹಾಗೂ ಬಿಬಿಎಂಪಿ ಕಾಯ್ದೆಯಲ್ಲಿ ಅದಕ್ಕಾಗಿ ನೇರವಾದ ಉಪಬಂಧಗಳನ್ನು ಕಲ್ಪಿಸಿಕೊಳ್ಳುವುದು ಸೂಕ್ತ.

ವಲಯ ಸಮಿತಿಗಳು: ಬಿಬಿಎಂಪಿ ಕಾಯ್ದೆಯ ಸೆಕ್ಷನ್ 3 ರಲ್ಲಿ ವಲಯ ಸಮಿತಿಯನ್ನು ಪಾಲಿಕೆ ಪ್ರಾಧಿಕಾರವನ್ನಾಗಿ ನಿಗದಿಪಡಿಸಲಾಗಿದೆ. ವಲಯ ಸಮಿತಿಯನ್ನು ಸಂವಿಧಾನದ ಅನುಚ್ಛೇದ 243-ಎಸ್ ಅನುಸಾರ ವಾರ್ಡುಗಳ ಸಮಿತಿಯೆಂದು ಪರಿಭಾವಿಸಬಹುದು. ಆದ್ದರಿಂದ, ವಲಯ ಸಮಿತಿಗೆ ಆಡಳಿತಾತ್ಮಕ ಮತ್ತು ಆರ್ಥಿಕ ವೆಚ್ಚದ ಅಧಿಕಾರ ಪ್ರತ್ಯಾಯೋಜನೆಯನ್ನು ನೀಡಿರುವುದು ಸಮರ್ಥನೀಯ.

ವಾರ್ಡ್ ಸಮಿತಿಗಳು: ಪಾಲಿಕೆ ಸದಸ್ಯರೇ ಆಯಾ ವಾರ್ಡ್ ಸಮಿತಿಯ ಅಧ್ಯಕ್ಷರು. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 94ರಡಿ ಪಾಲಿಕೆ ಸದಸ್ಯರ ಅಧಿಕಾರವನ್ನು ಗೊತ್ತುಪಡಿಸಲಾಗಿದೆ. ಅವರು ಪಾಲಿಕೆಯ ಕಾರ್ಯನಿರ್ವಹಣೆಯಲ್ಲಿನ ಯಾವುದೇ ನಿರ್ಲಕ್ಷ್ಯದ ಬಗ್ಗೆ ಹಾಗೂ ಪಾಲಿಕೆಯ ಸ್ವತ್ತಿನ ಯಾವುದೇ ಪೋಲು ಕುರಿತಂತೆ ಅಥವಾ ಯಾವುದೇ ಪ್ರದೇಶದ (ವಾರ್ಡಿನ ಭಾಗದ) ಅಗತ್ಯಗಳ ಬಗ್ಗೆ ಸಂಬಂಧಪಟ್ಟ ಪಾಲಿಕೆಯ ಪ್ರಾಧಿಕಾರಿಯ ಗಮನ ಸೆಳೆಯಬಹುದು. ತಾವು ಅಪೇಕ್ಷಣೀಯವೆಂದು ಪರಿಗಣಿಸುವ ಸುಧಾರಣೆಗಳನ್ನು ಸೂಚಿಸಬಹುದೆಂದು ತಿಳಿಸಲಾಗಿದೆ. ವಲಯ ಸಮಿತಿಯಲ್ಲಿ ಆಯಾ ವಲಯದ ಪ್ರತಿ ಕಾರ್ಪೊರೇಟರ್‌ಗಳೂ ಸದಸ್ಯರಾಗಿರುವುದರಿಂದ, ವಲಯ ಸಮಿತಿಗೆ ಆರ್ಥಿಕ ವೆಚ್ಚದ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ನಿಗದಿಪಡಿಸಬಹುದು. ಆದರೆ, ವಾರ್ಡ್ ಸಮಿತಿಯ ಇತರ ಸದಸ್ಯರು ಪಾಲಿಕೆಯ ಸದಸ್ಯರಲ್ಲ. ಹಾಗಾಗಿ ವಾರ್ಡ್ ಸಮಿತಿಯನ್ನು ಪಾಲಿಕೆಯ ಪ್ರಾಧಿಕಾರವೆಂದು ನಿಗದಿಪಡಿಸುವುದು ಸಮಂಜಸವಲ್ಲ.

ಒಟ್ಟಾರೆಯಾಗಿ ಈ ಕಾಯ್ದೆಯು ಬಿಬಿಎಂಪಿಯ ಸಾಂಸ್ಥಿಕ ಸಂರಚನೆ ಮತ್ತು ಶಾಸನಾತ್ಮಕ ಚೌಕಟ್ಟಿನ ವಿಷಯದಲ್ಲಿ ಅಸಮರ್ಪಕವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಮುನಿಸಿಪಲ್ ಮತ್ತು ಮೆಟ್ರೋಪಾಲಿಟನ್ ಆಡಳಿತಕ್ಕೆ ಸಂಬಂಧಪಟ್ಟಂತೆ ಒಂದು ನೂತನ ಹಾಗೂ ಸಮಗ್ರ ಕಾಯ್ದೆಯ ಬಗ್ಗೆ ಬೆಂಗಳೂರು ನಾಗರೀಕರ ನಿರೀಕ್ಷೆಯು ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಈ ಬಗ್ಗೆ ತೆಗೆದುಕೊಳ್ಳಬೇಕಾದ ಶಾಸನಾತ್ಮಕ ಕ್ರಮಗಳನ್ನು ಸಾಧ್ಯವಾದಷ್ಟು ಬೇಗ ಸರಿಯಾದ ರೀತಿಯಲ್ಲಿ ರಾಜ್ಯ ಸರ್ಕಾರವು ಶ್ರದ್ಧೆಯಿಂದ ಪ್ರಯತ್ನಿಸಿದರೆ ಒಳ್ಳೆಯದು.

ಪಿ. ಜಿ. ಶೆಣೈ, ಸಿ. ಆರ್. ರವೀಂದ್ರ,
(ಲೇಖಕರು ಸೆಂಟರ್ ಫಾರ್ ಅರ್ಬನ್ ಗವರ್ನೆನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕರು)

ಪ್ರದೇಶ ಸಭೆಗೆ ಅಧಿಕಾರ ಅನವಶ್ಯಕ

ಬಿಬಿಎಂಪಿ ಕಾಯ್ದೆಯ ಸೆಕ್ಷನ್ 89ರ ಅನುಸಾರ, ಸರ್ಕಾರವು ಆದೇಶ ಹೊರಡಿಸಿ ಪ್ರತಿಯೊಂದು ವಾರ್ಡ್‌ನ ನಿರ್ದಿಷ್ಟ ಸಂಖ್ಯೆಯ (5ಕ್ಕಿಂತ ಹೆಚ್ಚಿರಬಾರದು) ಮತಗಟ್ಟೆಗಳನ್ನು ಒಂದು ಪ್ರದೇಶವೆಂದು ನಿರ್ಧರಿಸಬಹುದು. ಸೆಕ್ಷನ್ 90ರ ಅನುಸಾರ ಇಂತಹ ಪ್ರತಿಯೊಂದು ಪ್ರದೇಶಗಳಿಗೆ ಆಯಾ ಪ್ರದೇಶದ ವ್ಯಾಪ್ತಿಯಲ್ಲಿನ ಎಲ್ಲಾ ಮತದಾರರನ್ನು ಒಳಗೊಂಡ ಪ್ರದೇಶ ಸಭೆ ಇರತಕ್ಕದ್ದು. ಈ ಪ್ರದೇಶ ಸಭೆಗೆ ಸಮಾಜದ ಪ್ರತಿನಿಧಿಗಳಲ್ಲಿ ಯಾರಾದರೂ ಪ್ರತಿನಿಧಿಯಾಗಿ ನಾಮನಿರ್ದೇಶನಗೊಳ್ಳುತ್ತಾರೆ. ಅವರು ಆಯಾ ಪ್ರದೇಶ ಸಭೆಯ ಸದಸ್ಯರಾಗಿರುತ್ತಾರೆ. ಕಾಯ್ದೆಯ ಸೆಕ್ಷನ್ 3ರಲ್ಲಿ ಪ್ರದೇಶ ಸಭಾಗಳನ್ನು ಪಾಲಿಕೆಯ ಪ್ರಾಧಿಕಾರವೆಂದು ಗೊತ್ತುಪಡಿಸಲಾಗಿದೆ.

ಸೆಕ್ಷನ್ 83ರಲ್ಲಿ ವಾರ್ಡ್ ಸಮಿತಿಯ ಸಂಯೋಜನೆಯನ್ನು ನಿಗಧಿಪಡಿಸಲಾಗಿದೆ. ಇದೇ ಸೆಕ್ಷನ್‌ನ ಉಪಸೆಕ್ಷನ್ (3)ರಲ್ಲಿ ವಾರ್ಡಿನ ವ್ಯಾಪ್ತಿಯ ಎಲ್ಲಾ ಪ್ರದೇಶ ಸಭಾಗಳ ಪ್ರತಿನಿಧಿಗಳನ್ನು ವಾರ್ಡ್ ಸಮಿತಿಯ ಸಭೆಗಳಿಗೆ ಆಹ್ವಾನಿಸತಕ್ಕದ್ದು, ಆದರೆ ಅವರಿಗೆ ಮತದಾನದ ಹಕ್ಕಿಲ್ಲ. ಈ ಅಂಶವನ್ನು ವಿಶ್ಲೇಷಿಸಿದರೆ, ಸೆಕ್ಷನ್ 3ರಲ್ಲಿ ಪ್ರದೇಶ ಸಭೆಯನ್ನು ಪಾಲಿಕೆಯ ಪ್ರಾಧಿಕಾರವೆಂದು ಗೊತ್ತುಪಡಿಸುವುದು ಸರಿಯಲ್ಲ ಮತ್ತು ಅನಾವಶ್ಯಕವೆಂದು ತೋರುತ್ತದೆ.

ಉದ್ಘಾಟನೆ ಕೆ.ಆರ್. ಪುರದಲ್ಲಿ ಶ್ರೀ ಸಾಯಿಗೋಲ್ಡ್ ಪ್ಯಾಲೇಸ್‌ನ ನೂತನ ಶಾಖೆಯನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ನಟ ಧ್ರುವ ಸರ್ಜಾ, ನಟಿ ರೂಪಿಕಾ ಉದ್ಘಾಟಿಸಿದರು. ಶ್ರೀ ಸಾಯಿಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ. ಶರವಣ ಇದ್ದರು.

ಪೊಲೀಸ್ ನೇಮಕಾತಿ: ಕ್ರೀಡಾ ಕೋಟಾದಡಿ ಶೇಕಡಾ 2 ಮೀಸಲು

ಬೆಂಗಳೂರು: ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಅತ್ಯುನ್ನತ ಕ್ರೀಡಾ ಪಟುಗಳಿಗೆ ಶೇಕಡಾ 2ರಷ್ಟು ಮೀಸಲು ಕಲ್ಪಿಸಲಾಗಿದೆ.

ಈ ಸಂಬಂಧ ಸರ್ಕಾರ ಅಧಿಕೃತ ಆದೇಶ ಹೊರಡಿಸಿರುವುದಾಗಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಎಡಿಜಿಪಿ ಅಲೋಕ್ ಕುಮಾರ್ ಟ್ವೀಟ್ ಮಾಡಿದ್ದಾರೆ.

'ಕೊನೆಗೂ ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ವ್ಯಕ್ತಿಗಳ ನೇಮಕಾತಿ ಕುರಿತು ಅಂತಿಮ ಅಧಿಸೂಚನೆ ಪ್ರಕಟಿಸಲಾಗಿದೆ. 12 ವರ್ಷಗಳ ಸುದೀರ್ಘ ಅಂತರದ ನಂತರ, ಪ್ರತಿ ಪೊಲೀಸ್ ನೇಮಕಾತಿಯಲ್ಲಿ ಅತ್ಯುತ್ತಮ ಕ್ರೀಡಾ ವ್ಯಕ್ತಿಗಳಿಗೆ ಶೇ 2ರಷ್ಟು ಕೋಟಾ ಇರಲಿದೆ. ಇದಕ್ಕಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಧನ್ಯವಾದಗಳು' ಎಂಬ ವಾಕ್ಯದೊಂದಿಗೆ ಅಧಿಸೂಚನೆಯನ್ನು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಯಕ್ಷಗಾನ ಸಮಾಜದ ಅಂಕುಡೊಂಕು ತಿದ್ದುವ ಮಾಧ್ಯಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಕ್ಷಗಾನವು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಪರಿಣಾಮಕಾರಿ ಕಲಾ ಮಾಧ್ಯಮ' ಎಂದು ಭಾರತೀಯ ಆಯುರ್ವೇದ ಪ್ರತಿಷ್ಠಾನದ ಅಧ್ಯಕ್ಷ ಡಾ.ಸಿ.ಎ.ಕಿಶೋರ್ ಹೇಳಿದರು.

ಕಲಾ ಕದಂಬ ಆರ್ಟ್ ಸೆಂಟರ್, ಚಿಕ್ಕಲಸಂದ್ರದ ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿರುವ ಸಿದ್ಧಿ ಗಣಪತಿ ದೇವಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಯಕ್ಷಗಾನ ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

ಚಂದನ ವಾಹಿನಿಯ ನಿರೂಪಕಿ ಸ್ನೇಹಾ ನೀಲಪ್ಪಗೌಡ, 'ಪುರುಷ ಕಲಾಪ್ರಕಾರವೆನಿಸಿರುವ ಯಕ್ಷಗಾನದಲ್ಲಿ ಮಹಿಳೆಯರೂ ಛಾಪು ಮೂಡಿಸುತ್ತಿರುವುದು ಖುಷಿಯ ವಿಚಾರ. ನಾವೆಲ್ಲಾ ಈ ಕಲೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು' ಎಂದು ತಿಳಿಸಿದರು.

ಶಿಬಿರಾರ್ಥಿಗಳು ಯಕ್ಷಗಾನ ಪ್ರದರ್ಶಿಸಿದರು

ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು 'ಕೃಷ್ಣ ಗಾರುಡಿ' ಯಕ್ಷಗಾನ ಪ್ರದರ್ಶಿಸಿದರು. ಕಲಾ ಕದಂಬ ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಇದನ್ನು ನಿರ್ದೇಶಿಸಿದ್ದರು.

ಸಿದ್ಧಿ ಗಣಪತಿ ದೇವಾಲಯ ಸಮಿತಿಯ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ ಇದ್ದರು.

'ಹೆಚ್ಚುವರಿ ಪಡಿತರ ಪಡೆಯಲು ಹೆಚ್ಚು ಮಕ್ಕಳನ್ನು ಹೆರಬಾರದೇಕೆ'

ಡೆಹ್ರಾಡೂನ್ (ಪಿಟಿಐ): ಯುವತಿಯರು ಹರಿದ ಜೀನ್ಸ್ ತೊಡುವ ಬಗ್ಗೆ ವಿವಾದತ್ಮಕ ಹೇಳಿಕೆ ನೀಡಿದ್ದ ಉತ್ತರಾಖಂಡ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್, ಪಡಿತರ ಕುರಿತಂತೆ ಭಾನುವಾರ ಮತ್ತೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ತೀರಥ್ ಸಿಂಗ್ ರಾವತ್

ನೈನಿತಾಲ್‌ನ ರಾಮನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೋವಿಡ್ ಪಿಡುಗಿನ ಈ ಸಮಯದಲ್ಲಿ ಹೆಚ್ಚು ಪಡಿತರ ಪಡೆಯುವ ಸಲುವಾಗಿ ಜನರು ಹೆಚ್ಚು ಮಕ್ಕಳನ್ನು ಹೆರಬೇಕಿತ್ತು' ಎಂದು ಹೇಳಿದ್ದಾರೆ.

'ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗೆ 5 ಕೆ.ಜಿ ಧಾನ್ಯ ನೀಡಲಾಗುತ್ತದೆ. 10 ಜನ ಮಕ್ಕಳಿರುವವರಿಗೆ 50 ಕೆ.ಜಿ. ಧಾನ್ಯ ಸಿಗುತ್ತದೆ. 20 ಜನರಿರುವ ಕುಟುಂಬಕ್ಕೆ ಒಂದು ಕ್ವಿಂಟಲ್ ಸಿಗುತ್ತದೆ' ಎಂದು ಹೇಳಿದ್ದಾರೆ.

'ಸಮಯ ಇದ್ದಾಗಲೂ ನೀವು ಇಬ್ಬರು ಮಕ್ಕಳನ್ನು ಮಾತ್ರ ಹೆತ್ತಿರಿ. ಈಗಿನ ನಿಮ್ಮ ಸ್ಥಿತಿಗೆ ಯಾರನ್ನು ದೂಷಿಸಲು ಸಾಧ್ಯ. ನೀವ್ಯಾಕೆ 20 ಮಕ್ಕಳನ್ನು ಹೆರಲಿಲ್ಲ' ಎಂದೂ ಅವರು ಹೇಳಿದ್ದಾರೆ.

ನಗರದಲ್ಲಿ ಇಂದು

ಸ್ಮಾರ್ಟ್ ಸಿಟಿ ಯೋಜನೆಯಡಿ ಕಬ್ಬನ್ ಪಾರ್ಕ್‌ಗೆ ಪುನರುಜ್ಜೀವನ: ತೋಟಗಾರಿಕಾ ಸಚಿವ ಆರ್.ಶಂಕರ್, ಮುಖ್ಯ ಅತಿಥಿಗಳು: ತೋಟಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ನಿರ್ದೇಶಕಿ ಫೌಜಿಯಾ ತರನಮ್, ಜಂಟಿ ನಿರ್ದೇಶಕ ಎಂ. ಜಗದೀಶ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಸಂಸ್ಥಾಪನಾ ದಿನಾಚರಣೆ: ಡಾ.ಕೆ.ಎನ್. ವಿ. ಶಾಸ್ತ್ರಿಯವರ 126ನೇ ಜನ್ಮದಿನದ ಸ್ಮರಣೆ, ಮುಖ್ಯ ಅತಿಥಿಗಳು: ಸಾಹಿತಿ ಚಂದ್ರಶೇಖರ ಕಂಬಾರ, ಗೌರವ ಅತಿಥಿ: ಗೀತಾ ನಾರಾಯಣನ್, ಅಧ್ಯಕ್ಷತೆ: ಎಸ್.ಎಸ್. ನಾಗಾನಂದ್, ವಿಶೇಷ ಆಹ್ವಾನಿತರು: ಪ್ರೊ. ಕೆ.ಜಿ. ಲೋಕೇಶ್, ಆಯೋಜನೆ ಮತ್ತು ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 11


ಚಂದ್ರಶೇಖರ ಕಂಬಾರ

ಬೆಂಗಳೂರು ಹವಾಮಾನದ ಕ್ರಿಯಾಯೋಜನೆ: ಚರ್ಚೆಯಲ್ಲಿ ಪಾಲ್ಗೊಳ್ಳುವವರು: ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ, ಶಾಸಕಿ ಸೌಮ್ಯಾ ರೆಡ್ಡಿ, ಜಂಟಿ ಪೊಲೀಸ್ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಶ್ರೀನಿವಾಸಲು, ಕವಿತಾ ಲಂಕೇಶ್, ಅಂಜಲಿ ದಾಲ್ಮಿಯಾ, ಆಯೋಜನೆ: ಇಎಸ್‌ಜಿ ಗ್ರೂಪ್, (ಆನ್‌ಲೈನ್ ಕಾರ್ಯಕ್ರಮ), ಸಂಜೆ 6

41ನೇ ವರ್ಷದ ನವೋಲ್ಲಾಸ ರಂಗಸಂಭ್ರಮ: ಉದ್ಘಾಟನೆ: ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಶ್ರೀಪತಿ ಮಂಜನಬೈಲು, ನಾಟಕ: 'ಕೋವಿಗೊಂದು ಕನ್ನಡಕ', ಆಯೋಜನೆ: ಅಂತರಂಗ, ಸ್ಥಳ: ಸೇವಾ ಸದನ, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6.30


ಶ್ರೀನಿವಾಸ ಜಿ. ಕಪ್ಪಣ್ಣ

ಒಕ್ಕಲಿಗರಿಂದ ದುಂಡು ಮೇಜಿನ ಸಭೆ

ಪೀಣ್ಯ ದಾಸರಹಳ್ಳಿ: 'ಎಲ್ಲ ಸಮುದಾಯಗಳಿಗೂ ಮಾದರಿಯಾಗಿರುವ ಒಕ್ಕಲಿಗರ ಸಂಘವು ವ್ಯಾವಹಾರಿಕವಾಗದೆ ಉದಾತ್ತ ಚಿಂತನೆಗಳೊಂದಿಗೆ ಮುನ್ನಡೆಯಬೇಕು ಎಂಬ ಉದ್ದೇಶದಿಂದ ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ' ಎಂದು ಹಸಿರು ಪ್ರತಿಷ್ಠಾನದ ರಾಜ್ಯ ಘಟಕದ ಅಧ್ಯಕ್ಷ ಕೆ.ಜಿ.ಕುಮಾರ್ ಹೇಳಿದರು.

ತೆಂಗಿನ ತೋಟದ ರಸ್ತೆಯ ಶಾರದಾ ವಿದ್ಯಾ ಮಂದಿರದಲ್ಲಿ ನಡೆದ ಒಕ್ಕಲಿಗರ ಸಂಘ 100 ವರ್ಷ :ಒಂದು ಅವಲೋಕನ ದುಂಡುಮೇಜಿನ ಸಭೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಶರಣ ಪರಂಪರೆಯನ್ನು ಬಿಟ್ಟರೆ ಈ ರೀತಿಯ ಉದಾತ್ತ ಚಿಂತನೆಯನ್ನು ಇಟ್ಟುಕೊಂಡಿರುವುದು ರೈತಾಪಿ ವರ್ಗವಾದ ಈ ಒಕ್ಕಲಿಗರ ಸಮುದಾಯ' ಎಂದು ಹೇಳಿದರು .

ಬಿ.ಎಂ.ಟಿ.ಸಿ.ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ಮಾತನಾಡಿ 'ಮುಂದಿನ ದಿನಗಳಲ್ಲಿ ಅನೇಕ ಸವಾಲುಗಳನ್ನು ಎದುರಿಸಲು ಶೈಕ್ಷಣಿಕವಾಗಿ ಬೆಳವಣಿಗೆ ಹಾಗೂ ಒಕ್ಕಲಿಗರ ಅಭಿವೃದ್ಧಿ ನಿಗಮಕ್ಕೆ ₹500 ಕೋಟಿಯನ್ನು ಸರ್ಕಾರ ಮೀಸಲಿಟ್ಟಿರುವುದು ಸ್ವಾಗತಾರ್ಹ' ಎಂದರು .

ಒಕ್ಕಲಿಗ ಸಮುದಾಯದ ಸದಸ್ಯ ಬಿ.ಟಿ.ಶ್ರೀನಿವಾಸ್ ಮಾತನಾಡಿ 'ಸಂಘವು ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಭೆ ಕರೆದು ಸಮುದಾಯದ ಅಭಿವೃದ್ಧಿ ಬಗ್ಗೆ ಚರ್ಚಿಸಿದರೆ ಸಂಘದ ಬೆಳವಣಿಗೆಗೆ ಪೂರಕವಾಗಿರುತ್ತದೆ' ಎಂದರು.

ಡಾ.ಭಾನುಪ್ರಕಾಶ್, ಡಾ. ಶಿವರಾಮು, ಕೆ.ಎ.ಯುವರಾಜು, ಪಿ.ಕೆ.ಕುಮಾರ್, ಯಾ.ಚಿ.ದೊಡ್ಡಯ್ಯ, ಹರ್ಷವರ್ಧನ ಇದ್ದರು.

ಮೊಳೆ ಮುಕ್ತ ಮರ ಅಭಿಯಾನದಲ್ಲಿ ಬಿಬಿಎಂಪಿ ಆಯುಕ್ತರ ಭರವಸೆ

ಮುಂದಿನ ಮಳೆಗಾಲದಲ್ಲಿ 10 ಲಕ್ಷ ಸಸಿ ಉಚಿತ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಾನ ನಗರಿ ಎಂಬ ಹೆಗ್ಗಳಿಕೆ ಮುಂದುವರಿಯಬೇಕಾದರೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚು ಹೆಚ್ಚು ಸಸಿಗಳನ್ನು ಬೆಳೆಸಬೇಕು. ಮುಂದಿನ ಮಳೆಗಾಲದಲ್ಲಿ 10 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮ ರೂಪಿಸಿಕೊಳ್ಳಲು ಯುವಜನತೆ ಸಜ್ಜಾಗಿ. ಪಾಲಿಕೆ ನಿಮಗೆ ಅಷ್ಟೂ ಸಸಿಗಳನ್ನು ಉಚಿತವಾಗಿ ಒದಗಿಸಲಿದೆ' ಎಂದು ಪಾಲಿಕೆ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

'ಬೆಂಗಳೂರು ಹುಡುಗರು' ತಂಡವು ಅಂತರರಾಷ್ಟ್ರೀಯ ಅರಣ್ಯ ದಿನದ ಅಂಗವಾಗಿ ಹಾಗೂ 'ಮೊಳೆ ಮುಕ್ತ ಮರ- ಬೆಂಗಳೂರು' ಅಭಿಯಾನದ ಜಾಗೃತಿಗಾಗಿ ಬಿಬಿಎಂಪಿ ಸಹಭಾಗಿತ್ವದಲ್ಲಿ ಭಾನುವಾರ ಏರ್ಪಡಿಸಿದ್ದ ನಡಿಗೆ ಜಾಥಾ ಉದ್ಘಾಟಿಸಿ ಅವರು ಮಾತನಾಡಿದರು.

'ಕಬ್ಬನ್ ಉದ್ಯಾನದಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನನ್ನ ಮಕ್ಕಳಿಗೆ ಶಾಲಾ ವತಿಯಿಂದ ಎರಡು ಸಸಿಗಳನ್ನು ನೀಡಿದ್ದರು. ಅವುಗಳನ್ನು ನಮ್ಮ ಮನೆಯ ಮುಂಭಾಗದಲ್ಲಿ ನೆಟ್ಟಿದ್ದರು. ಅವುಗಳೀಗ ಹೆಮ್ಮರವಾಗಿ ಬೆಳೆದಿವೆ.

ಜಾಥಾದಲ್ಲಿ ಯುವಜನರ ಜೊತೆ ಹೆಜ್ಜೆ ಹಾಕಿದ ಎನ್.ಮಂಜುನಾಥ ಪ್ರಸಾದ್ ಹಾಗೂ ಭಾಸ್ಕರ ರಾವ್

ನಾವೇ ಬೆಳೆಸಿದ ಮರಗಳು ಎಂಬ ಭಾವನೆ ಸ್ವಾಭಾವಿಕವಾಗಿ ಬರುತ್ತದೆ. ಯುವಜನರು ಮನಸ್ಸು ಮಾಡಿದರೆ ಯಾವುದೇ ಕೆಲಸವೂ ಅಸಾಧ್ಯವಲ್ಲ' ಎಂದು ಹುರಿದುಂಬಿಸಿದರು.

ನಾಗರಿಕರು ಸಂಘಟನೆಗಳು ತಂಡಗಳನ್ನು ರೂಪಿಸಿಕೊಂಡು ಮರಗಳಿಗೆ ಭಿತ್ತಿಪತ್ರ ಅಂಟಿಸಲು ಹೊಡೆದಿರುವ ಮೊಳೆ, ಸ್ಟ್ಯಾಪ್ಲರ್ ಪಿನ್ ತೆರವುಗೊಳಿಸುತ್ತಿರುವುದು ಶ್ಲಾಘನೀಯ. ಜನರಿಂದ ಸ್ವಯಂ ರೂಪುಗೊಳ್ಳುವ ಕಾರ್ಯಕ್ರಮ ಯಾವತ್ತೂ ಯಶಸ್ವಿಯಾಗುತ್ತದೆ ಎಂದರು.

ರೈಲ್ವೆಯ ಎಡಿಜಿಪಿ ಭಾಸ್ಕರ್ ರಾವ್, 'ಮರಗಳಿಗೆ ಹೊಡೆದಿರುವ ಮೊಳೆಗಳನ್ನು ತೆಗೆದು ನಗರ ಸುಂದರವಾಗಿರಲು ಮುಂದಾದ ಯುವಜನರ ಯೋಚನೆಗೆ ಮಾರುಹೋದೆ' ಎಂದರು.

'ಬೆಂಗಳೂರು ಹುಡುಗರು' ತಂಡದ ವಿನೋದ್, 'ವಸಂತನಗರ ವಾರ್ಡ್‌ನಲ್ಲಿ ನಾಲ್ವರು ಸ್ನೇಹಿತರು ಸೇರಿ ಆರಂಭಿಸಿದ ಈ ಅಭಿಯಾನ ನಗರದಾದ್ಯಂತ ವ್ಯಾಪಿಸಿದೆ. ಮರಗಳಿಗೆ ಹಾನಿ ಉಂಟುಮಾಡಿರುವವರ ವಿರುದ್ಧ ಸುಮಾರು 12 ಎಫ್‌ಐಆರ್‌ಗಳನ್ನು ದಾಖಲಿಸಿದ್ದೇವೆ. ಕರ್ನಾಟಕ ಸಿವಿಲ್ ಡಿಫೆನ್ಸ್, ದೆಹಲಿ ಕೇಂದ್ರ ಸಂಸ್ಥೆಯ ಹಿಂದೂಸ್ತಾನಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ನಗರದ ಪ್ರತಿನಿಧಿಗಳು, ವೀಲ್ ಚೇರ್ ಅಸೋಸಿಯೇಷನ್, ಪರಿವರ್ತನ ಟ್ರಸ್ಟ್, ಸಿಟಿಜನ್ ಟಾಸ್ಕ್ ಫೋರ್ಸ್ ಸೇರಿ ಅನೇಕ ಸಂಘ ಸಂಸ್ಥೆಗಳು ಕೈಜೋಡಿಸಿವೆ' ಎಂದರು.

ಬಾಲಭವನದಿಂದ ಪ್ರಾರಂಭವಾದ ಜಾಥಾ ಮ್ಯೂಸಿಯಂ ರಸ್ತೆ, ವಿಠಲ ಮಲ್ಯ ರಸ್ತೆ, ರಾಜಾರಾಮ್ ಮೋಹನ್ ರಾಯ್ ರಸ್ತೆ ಮೂಲಕ ಪಾಲಿಕೆ ಕೇಂದ್ರ ಕಚೇರಿ ಆವರಣ ತಲುಪಿತು. ಮಕ್ಕಳು, ವಿಶೇಷ ಸಾಮರ್ಥ್ಯದವರು, ಯುವಕ-ಯುವತಿಯರು ಸೇರಿದಂತೆ 600ಕ್ಕೂ ಹೆಚ್ಚು ಮಂದಿ ಪಾಲ್ಗೊಂಡರು.

ಇಂದು 'ವಿಧಾನಸೌಧ ಚಲೋ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿ 'ಸಂಯುಕ್ತ ಹೋರಾಟ-ಕರ್ನಾಟಕ'ವು ಇದೇ 22ರಂದು ವಿಧಾನಸೌಧ ಚಲೋ ಹೋರಾಟಕ್ಕೆ ಕರೆ ನೀಡಿದೆ.

'ಬೆಳಿಗ್ಗೆ 11 ಗಂಟೆಗೆ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ನಗರ ರೈಲ್ವೆ ನಿಲ್ದಾಣದಿಂದ ಆರಂಭವಾಗುವ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಕೊನೆಗೊಳ್ಳಲಿದೆ. ಅಲ್ಲಿ ಮಧ್ಯಾಹ್ನ ನಡೆಯುವ ಬಹಿರಂಗ ಸಭೆಯಲ್ಲಿ ದೆಹಲಿಯ ರೈತ ಹೋರಾಟದ ರೂವಾರಿಗಳಾದ ರಾಕೇಶ್ ಸಿಂಗ್ ಟಿಕಾಯತ್, ದರ್ಶನ್ ಪಾಲ್ ಸಿಂಗ್, ಯದುವೀರ್ ಸಿಂಗ್ ಭಾಗವಹಿಸಲಿದ್ದಾರೆ. ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕೂಡ ಹಾಜರಿರಲಿದ್ದಾರೆ. ಒಟ್ಟು 10 ಸಾವಿರ ಮಂದಿ ಸೇರುವ ನಿರೀಕ್ಷೆ ಇದೆ' ಎಂದು ಸಂಘಟನೆಯ ಸಂಯೋಜಕ ಜಿ.ಸಿ.ಬಯ್ಯಾರೆಡ್ಡಿ ತಿಳಿಸಿದರು.

'ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಯೋಚನೆ ಸದ್ಯಕ್ಕಿಲ್ಲ. ಮುಂದಿನ ದಿನಗಳಲ್ಲಿ ನಮ್ಮೆಲ್ಲಾ ಮುಖಂಡರ ಜೊತೆ ಚರ್ಚಿಸಿ ಹೋರಾಟದ ಸ್ವರೂಪ ಬದಲಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದೇವೆ' ಎಂದು ಅವರು ಹೇಳಿದರು.

|| jai sri gurudev ||
ADICHUNCHANAGIRI UNIVERSITY
(Estd. under Karnataka Act No.18 of 2013)

B.G. Nagara - 571448, Nagamangala (T), Mandya (D), Karnataka
Phone: (08234) 287285 | Email: info@acu.edu.in | Web: www.acu.edu.in

NOTIFICATION

Ref. No. ACU/AUTY/2020-21/975 Date : 22-03-2021

Sub: The First Convocation

It is hereby informed that the First Convocation of the University is scheduled to be held on **Saturday, the 24th April 2021, at 10:00 a.m.**, in the BGS Auditorium, ACU campus, B.G.Nagara.

The eligible candidates are hereby cordially invited to attend the Convocation.

CALENDAR OF EVENTS

Date of Convocation Notification	22-03-2021
Date of Availability of Convocation Application Form on Website	25-03-2021
Last date for receiving Convocation Application Form without fine	08-04-2021
Last date for receiving Convocation Application Form with fine Rs. 1000/-	12-04-2021
Date of Convocation	24-04-2021

For more details, please visit www.acu.edu.in

By order - **Dr. C K Subbaraya**, Registrar

Consortium of Medical, Engineering & Dental Colleges of Karnataka
COMEDK Concern for Careers
COMEDK UGET - 2021
For Engineering Courses www.comedk.org

Office: No.132, 2nd Floor, 11th Main, 17th Cross, Malleshwaram, Bangalore - 560 055
Contact: 080 46671060, Fax No: 080-23568309
E-mail:studenthelpdesk@comedk.org

Invites applications for admission to approximately 20000 seats in Under Graduate Engineering Courses in about 150 Member Engineering Institutions of KUPECA, who are utilising COMEDK merit evaluation process. Interested candidates may visit COMEDK website www.comedk.org for all details & updates.

Start Date for Issue of Online Application Form: 22.03.2021
Last Date for receipt of Completed Application Forms: 20.05.2021

COMEDK UGET-2021 Test Day: 20.06.2021
Morning Session 9.00am to 12.00noon
Evening Session 2.00pm to 5.00pm

Online exam across 150 cities all over country

Applications are to be filled online on our website www.comedk.org
Note 1: Neither the Application form nor filled in Applications will be sold or received in COMEDK Office or by any Member Institutions.
Note 2: www.comedk.org is the ONLY official website for COMEDK applications

Payment should be made online only

Note: 1) Choice of test city on "First come First served" basis
2) No offline applications are being entertained.

Dr. M.R.Jayaram
Chairman, COMEDK

NOTE : COMEDK UGET and Uni-GAUGE - E 2021 is single unified exam

Uni-GAUGE - E 2021
All India Entrance Exam For BE/ B.Tech-2021
30+ Renowned Engineering Universities
Partner Universities located in Uttar Pradesh, Andhra Pradesh, Karnataka, Madhya Pradesh, Assam, Tamil Nadu, Maharashtra, Haryana, Gujarat, Jharkhand, Rajasthan and Himachal Pradesh accept Uni-GAUGE scores
Last Date to Apply: 20th May 2021 I Exam Date: 20th June 2021
APPLY Today I www.unigauge.com I 400 + Test centres in India

ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಭೂಗತ ಕೇಬಲ್ ಅಳವಡಿಕೆ • ನೆಲದಡಿ ವಿದ್ಯುತ್ ಮಾರ್ಗ

ತಪ್ಪಲಿದೆ ಅವಘಡ: ಹೆಚ್ಚಲಿದೆ ಸೌಂದರ್ಯ

• ಗುರು ಪಿ.ಎಸ್.

ಬೆಂಗಳೂರು: ನಗರದಲ್ಲಿ ಜನ-ಜೀವನ ಸುಧಾರಿಸಲು ಮತ್ತು ಸರಾಗವಾಗಿ ನಡೆಯಲು ಮೂಲಸೌಲಭ್ಯಗಳ ಒದಗಿಸುವಿಕೆ ಅಗತ್ಯ. ಕುಡಿಯುವ ನೀರು ಮತ್ತು ವಿದ್ಯುತ್ ಕೊರತೆಯಂತಹ ಸಮಸ್ಯೆಗಳು ಆಯಾ ನಗರದ ಅಭಿವೃದ್ಧಿಯ ವೇಗವನ್ನು ನಿಧಾನವಾಗಿಸುತ್ತವೆ. ಈ ಸೌಲಭ್ಯಗಳನ್ನು ಕಲ್ಪಿಸುವ ಜೊತೆಗೆ ಅವುಗಳ ನಿರ್ವಹಣೆಯ ಕಾರ್ಯವೂ ಸಮರ್ಪಕವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ನಗರಕ್ಕೆ ವಿದ್ಯುತ್ ಪೂರೈಕೆಯ ಜವಾಬ್ದಾರಿ ಹೊತ್ತಿರುವ ಬೆಸ್ಕಾಂನ ಪಾತ್ರ ಇದರಲ್ಲಿ ಮಹತ್ವದ್ದು. ಅನಿಯಮಿತವಾಗಿ ವಿದ್ಯುತ್ ಪೂರೈಸುವುದರ ಜೊತೆಗೆ ಯಾವುದೇ ಅವಘಡಗಳು ಸಂಭವಿಸಿದಂತೆ ಬೆಸ್ಕಾಂ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಪರ್ಯಾಯ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡುವುದು ಸೇರಿದಂತೆ ನಗರದ 'ಬ್ರ್ಯಾಂಡ್ ಮೌಲ್ಯ ಹೆಚ್ಚಿಸಲು ಅಗತ್ಯವಿರುವ ಕ್ರಮಗಳ ಅನುಷ್ಠಾನಕ್ಕೂ ಬೆಸ್ಕಾಂ ಮುಂದಾಗುವ ಅಗತ್ಯವಿದೆ.

ಭೂಗತ ಕೇಬಲ್ ಅಳವಡಿಕೆ: ಮಳೆಗಾಲ ಬಂದರೆ ಸಾಕು ವಿದ್ಯುತ್ ಕಂಬಗಳು, ಮರಗಳು ವಿದ್ಯುತ್ ತಂತಿಗಳ ಮೇಲೆ ಬೀಳುವುದು ಸಾಮಾನ್ಯವಾಗಿರುತ್ತದೆ. ಇದರಿಂದ ಅವಘಡಗಳೂ ಸಂಭವಿಸುತ್ತಿವೆ. ಅಲ್ಲಲ್ಲಿ ಜೋತು ಬೀಳುವ ವಿದ್ಯುತ್ ವೈರ್‌ಗಳು ನಗರದ ಸೌಂದರ್ಯಕ್ಕೂ ಧಕ್ಕೆ ತರುತ್ತಿವೆ. ಈ ಸಮಸ್ಯೆಗೆಲ್ಲ ಏಕೈಕ ಪರಿಹಾರ ಎನ್ನುವಂತೆ ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿದೆ ಬೆಸ್ಕಾಂ.

ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶ ವಲಯದಲ್ಲಿರುವ (ಬಿಎಂಎಝುಡ್) 11 ಕೆವಿ ಸಾಮರ್ಥ್ಯದ ವಿದ್ಯುತ್ ಕೇಬಲ್‌ಗಳನ್ನು ಪರಿವರ್ತಿಸಿ ಭೂಗತ ಕೇಬಲ್‌ಗಳನ್ನು (ಅಂಡರ್‌ಗ್ರೌಂಡ್ ಕೇಬಲ್) ಅಳವಡಿಸಲಾಗುತ್ತಿದೆ. 2018-19ರ ಬಜೆಟ್‌ನಲ್ಲಿಯೇ ಈ ಘೋಷಣೆ ಮಾಡಲಾಗಿದ್ದು, 2019ರ ಸೆಪ್ಟೆಂಬರ್‌ನಿಂದ ಕಾಮಗಾರಿ ಆರಂಭವಾಗಿದೆ.

ಯುಜಿ ಕೇಬಲ್‌ಗಳ ಜೊತೆಗೆ ಒಎಫ್‌ಸಿ ಅಳವಡಿಕೆಯ ಕಾರ್ಯವೂ ಸಾಗಿದೆ. ಬಿಎಂಎಝುಡ್ ವ್ಯಾಪ್ತಿಯಲ್ಲಿ ಬೆಸ್ಕಾಂನ 63 ಉಪವಿಭಾಗಗಳಿದ್ದು, ಈಗಾಗಲೇ 11 ಉಪವಿಭಾಗಗಳಲ್ಲಿ ಯುಜಿ ಕೇಬಲ್‌ಗಳನ್ನು ಅಳವಡಿಸಲಾಗಿದೆ. ಉಳಿದ 52 ಉಪವಿಭಾಗಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

'ಯುಜಿ ಕೇಬಲ್ ಅಳವಡಿಕೆಯ ಕಾರ್ಯ ಪ್ರಾರಂಭದಲ್ಲಿ ಚುರುಕಿನಿಂದ ಸಾಗಿತ್ತು. ಈ ನಡುವೆ ಕೋವಿಡ್ ಬಿಕ್ಕಟ್ಟಿನ ಕಾರಣದಿಂದ ಕಾಮಗಾರಿ ಸ್ವಲ್ಪ ವಿಳಂಬವಾಗಿದೆ. ಈ ಯೋಜನೆಯನ್ನು 2023ರ ವೇಳೆಗೆ ಪೂರ್ಣಗೊಳಿಸಲಾಗುವುದು' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎಂ.ಬಿ. ರಾಜೇಶ್‌ಗೌಡ ತಿಳಿಸಿದರು.

ಇವಿ ಚಾರ್ಜಿಂಗ್‌ಗೆ ವ್ಯವಸ್ಥೆ: 'ಸೌರವಿದ್ಯುತ್ ಉತ್ಪಾದನೆ ಉತ್ತೇಜಿಸಲು ಹಲವು ಪ್ರೋತ್ಸಾಹಕ ಯೋಜನೆಗಳನ್ನು ಸರ್ಕಾರದ ನೆರವಿನೊಂದಿಗೆ ಬೆಸ್ಕಾಂ ಕೈಗೆತ್ತಿಕೊಳ್ಳುತ್ತಿದೆ. ಅಲ್ಲದೆ, ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸುವ ನಿಟ್ಟಿನಲ್ಲಿ ನಗರದ ಹಲವು ಕಡೆಗಳಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಾಣ ಮಾಡಲಾಗಿದೆ' ಎಂದು ಅವರು ತಿಳಿಸಿದರು.

'ಬೆಸ್ಕಾಂನ ಕೇಂದ್ರ ಕಚೇರಿಯ ಆವರಣದಲ್ಲಿ ಸೌರವಿದ್ಯುತ್, ಎನರ್ಜಿ ಸ್ಟೋರೇಜ್ (ಬ್ಯಾಟರಿ) ಮತ್ತು ವಿದ್ಯುತ್ ಬಳಸಿಕೊಂಡು ಕಾರ್ಯನಿರ್ವಹಿಸುವ ಘಟಕವನ್ನು ಸ್ಥಾಪಿಸಲಾಗಿದೆ. ಅಂದರೆ, ಸೌರವಿದ್ಯುತ್ ಇಲ್ಲದಿದ್ದರೆ ಬ್ಯಾಟರಿ, ಅದೂ ಇಲ್ಲದಿದ್ದರೆ ವಿದ್ಯುತ್ ಬಳಸಿಕೊಂಡು ಕೆಲಸ ಮಾಡುವ ಇಂತಹ ಘಟಕ ಅಳವಡಿಸಿರುವುದು ದೇಶದಲ್ಲಿಯೇ ಮೊದಲು' ಎಂದೂ ಮಾಹಿತಿ ನೀಡಿದರು.

ವಿದ್ಯುತ್ ಪೂರೈಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ತಂತ್ರಜ್ಞಾನದ ನೆರವಿನೊಂದಿಗೆ ಹಲವು ಉಪಕ್ರಮಗಳನ್ನು ಬೆಸ್ಕಾಂ ಕೈಗೊಳ್ಳುತ್ತಿದೆ. ಪರ್ಯಾಯ ವಿದ್ಯುತ್ ಮೂಲಗಳ ಉತ್ಪಾದನೆಯತ್ತಲೂ ಬೆಸ್ಕಾಂ ಗಮನ ಹರಿಸಿದರೆ ಗುಣಮಟ್ಟದ ಅನಿಯಮಿತ ವಿದ್ಯುತ್ ಪೂರೈಕೆ ಸಾಧ್ಯವಾಗುತ್ತದೆ ಎಂದು ಸಾರ್ವಜನಿಕರು ಸಲಹೆ ನೀಡುತ್ತಾರೆ.

ನಗರದ ಮಲ್ಲೇಶ್ವರದಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯ ನಡೆಯುತ್ತಿದೆ ಪ್ರಜಾವಾಣಿ ಚಿತ್ರ ಎಂ.ಎಸ್. ಮಂಜುನಾಥ್

ಇವಿ ಚಾರ್ಜಿಂಗ್ ಸ್ಟೇಷನ್ ವಿವರ

70 ನಗರದಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳಿರುವ ಸ್ಥಳಗಳು

136 ನಗರದಲ್ಲಿರುವ ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆ

140 6 ತಿಂಗಳಲ್ಲಿ ಅಳವಡಿಸಲಾಗುವ ಘಟಕಗಳ ಸಂಖ್ಯೆ

1,300 ತಿಂಗಳಿಗೆ ಚಾರ್ಜಿಂಗ್ ಮಾಡಿಸಿಕೊಳ್ಳುತ್ತಿರುವ ವಾಹನಗಳ ಸಂಖ್ಯೆ

ElectreeFi

ಭೂಗತ ಕೇಬಲ್ ಅಳವಡಿಕೆ ವಿವರ

₹5,325 ಕೋಟಿ ಭೂಗತ ಕೇಬಲ್ ಅಳವಡಿಕೆಯ ಒಟ್ಟು ವೆಚ್ಚ

6,543 ಕಿ.ಮೀ. ಬಿಎಂಎಝುಡ್‌ನಲ್ಲಿ ಹಾಕಲಾಗುವ ಭೂಗತ ಕೇಬಲ್

1,681 ಕಿ.ಮೀ. ಈವರೆಗೆ ಹಾಕಲಾಗಿರುವ ಕೇಬಲ್‌ಗಳು

4,862 ಕಿ.ಮೀ. ಇನ್ನೂ ಹಾಕಬೇಕಾಗಿರುವ ಕೇಬಲ್‌ಗಳ ಪ್ರಮಾಣ

34% ಕೇಬಲ್ ಅಳವಡಿಕೆಯ ಈವರೆಗಿನ ಪ್ರಗತಿಯ ಪ್ರಮಾಣ





ಭೂಗತ ಕೇಬಲ್ ಅಳವಡಿಕೆಯ ಕಲ್ಪನಾ ಚಿತ್ರ

ಬೆಸ್ಕಾಂಗೆ ಪ್ರಶಸ್ತಿ ಗರಿ

BESCOM

'ಪರ್ಫಾರ್ಮ್, ಅಚೀವ್ ಆ್ಯಂಡ್ ಟ್ರೇಡ್' ಮಾನದಂಡಗಳ ಅಡಿಯಲ್ಲಿ ಕೇಂದ್ರ ಸರ್ಕಾರವು 15 ದಿನಗಳ ಹಿಂದೆ ಬೆಸ್ಕಾಂಗೆ ಪ್ರಶಸ್ತಿ ನೀಡಿದೆ. ಅಗ್ರ ಐದು ಎಸ್ಕಾಂಗಳಲ್ಲಿ ನಾವು ಮೊದಲನೇ ಸ್ಥಾನ ಪಡೆದಿದ್ದೇವೆ' ಎಂದು ರಾಜೇಶ್‌ಗೌಡ ಹೇಳಿದರು.

'ವಿದ್ಯುತ್ ವಿತರಣೆ ವೇಳೆ ಸಂಭವಿಸುವ ನಷ್ಟದ ಪ್ರಮಾಣವನ್ನು ಶೇ 15ಕ್ಕೆ ತಗ್ಗಿಸಬೇಕು ಎಂದು ಗುರಿ ನೀಡಲಾಗಿತ್ತು. ಬೆಸ್ಕಾಂನಲ್ಲಿ 12.62ರಷ್ಟು ಇದೆ. ಅಲ್ಲದೆ, ಬೇಡಿಕೆ ಮತ್ತು ಪೂರೈಕೆಗೆ ಸಂಬಂಧಿಸಿದ ವಲಯದಲ್ಲಿಯೂ ನಾವು ಮೊದಲ ಸ್ಥಾನದಲ್ಲಿದ್ದೇವೆ' ಎಂದು ಅವರು ಹೇಳಿದರು.

ಎಂ.ಬಿ. ರಾಜೇಶ್‌ಗೌಡ

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯವನ್ನು ಬೆಸ್ಕಾಂ ಕೈಗೆತ್ತಿಕೊಂಡಿದೆ ಇದನ್ನು ನೋಡಲು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ನಾಲ್ಕು ಹಂತಗಳಲ್ಲಿ ಅಳವಡಿಕೆ'

'ಭೂಗತ ಕೇಬಲ್‌ಗಳನ್ನು ನಾಲ್ಕು ಹಂತಗಳಲ್ಲಿ ಅಳವಡಿಸಲಾಗುವುದು. ಈಗ ಮೊದಲ ಮೂರು ಹಂತದ ಕಾರ್ಯ ಪ್ರಗತಿಯಲ್ಲಿದ್ದು, ನಾಲ್ಕನೇ ಹಂತಕ್ಕೆ ಸಮೀಕ್ಷೆ ಕಾರ್ಯ ನಡೆಯಬೇಕಿದೆ' ಎಂದು ಬೆಸ್ಕಾಂನ ಉಪಪ್ರಧಾನ ವ್ಯವಸ್ಥಾಪಕ ಪಿ. ರಂಗಸ್ವಾಮಿ ಹೇಳಿದರು.

'ವಿದ್ಯುತ್ ಅವಘಡಗಳನ್ನು ತಪ್ಪಿಸುವುದರ ಜೊತೆಗೆ, ಪೂರೈಕೆ ವೇಳೆ ಸಂಭವಿಸುತ್ತಿದ್ದ ವಿದ್ಯುತ್ ನಷ್ಟವನ್ನೂ ತಗ್ಗಿಸಬಹುದು. ಗುಣಮಟ್ಟದ ವಿದ್ಯುತ್ ಪೂರೈಸಲು ಇದರಿಂದ ಸಾಧ್ಯವಾಗುತ್ತದೆ' ಎಂದು ಅವರು ಹೇಳಿದರು.

'ಕೆಯುಐಡಿಎಫ್‌ಸಿ, ಎಡಿಬಿ ಹಾಗೂ ಬೆಸ್ಕಾಂನ ಆಂತರಿಕ ಮೂಲಗಳಿಂದ ಈ ಯೋಜನೆಗೆ ಹಣಕಾಸು ವ್ಯವಸ್ಥೆ ಮಾಡಲಾಗಿದೆ' ಎಂದರು.

ಪಿ.ರಂಗಸ್ವಾಮಿ

'ಮಿತವ್ಯಯ-ಪರಿಸರ ಸ್ನೇಹಿ ಇವಿ'

'ಜಗತ್ತಿನ ಹೆಚ್ಚು ಮಾಲಿನ್ಯ ನಗರಗಳಲ್ಲಿ ದೇಶದ ನಗರಗಳ ಸಂಖ್ಯೆಯೇ ಹೆಚ್ಚಿದೆ. ಈ ಪಟ್ಟಿಯಲ್ಲಿ ಬೆಂಗಳೂರು ಕೂಡ ಸ್ಥಾನ ಪಡೆದಿದೆ. ಪರಿಸರ ರಕ್ಷಣೆಯ ದೃಷ್ಟಿಯಿಂದ ಎಲೆಕ್ಟ್ರಿಕ್ ವಾಹನಗಳ (ಇವಿ) ಬಳಕೆ ಹೆಚ್ಚಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯದ ನೋಡಲ್ ಏಜೆನ್ಸಿಯಾಗಿರುವ ಬೆಸ್ಕಾಂ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ಮಿಸಿ, ನಿರ್ವಹಿಸುತ್ತಿದೆ' ಎಂದು ಬೆಸ್ಕಾಂನ ಉಪಪ್ರಧಾನ ವ್ಯವಸ್ಥಾಪಕ (ಇವಿ ಮತ್ತು ಸ್ಮಾರ್ಟ್‌ಗ್ರಿಡ್) ಸಿ.ಕೆ. ಶ್ರೀನಾಥ್ ಹೇಳಿದರು.

'ಪರಿಸರ ಸ್ನೇಹಿಯಾಗಿರುವ ಎಲೆಕ್ಟ್ರಿಕ್ ವಾಹನಗಳು ಆರ್ಥಿಕವಾಗಿಯೂ ಬಹು ಉಪಯೋಗಿ. ಈ ವಾಹನಗಳನ್ನು ಬಳಸುವವರಿಗೆ ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ಅಷ್ಟೊಂದು ಬಾಧಿಸದು' ಎಂದೂ ಅವರು ಹೇಳಿದರು



ಸಿ.ಕೆ. ಶ್ರೀನಾಥ್

ಇವಿ ಚಾರ್ಜಿಂಗ್‌ಗೆ 'ಎಲೆಕ್ಟ್ರಿಫೈ'

ಈ ಚಾರ್ಜಿಂಗ್ ಘಟಕಗಳನ್ನು ಉಪಯೋಗಿಸಲು ಮೊಬೈಲ್‌ನಲ್ಲಿ 'electreefi' ಆ್ಯಪ್ ಅಳವಡಿಸಿಕೊಳ್ಳಬೇಕು. ಗೂಗಲ್ ಪ್ಲೇ ಸ್ಟೋರ್‌ನಿಂದ ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ನಗರದ ಎಲ್ಲೆಲ್ಲಿ ಚಾರ್ಜಿಂಗ್ ಘಟಕಗಳಿವೆ ಎಂಬ ಪಟ್ಟಿ ಇದರಲ್ಲಿ ತೋರಿಸುತ್ತದೆ. ಅದನ್ನು ತಲುಪುವ ನಕ್ಷೆಯನ್ನೂ ಇದು ತೋರಿಸುತ್ತದೆ. ಅಲ್ಲದೆ, ಯಾವ ಮಾದರಿಯ ಘಟಕ, ಬಳಕೆಗೆ ಲಭ್ಯವಿದೆಯೇ, ದರ ಎಷ್ಟು ಎಂಬ ಮಾಹಿತಿ ಸಿಗುತ್ತದೆ. ಒಂದು ಗಂಟೆ ಮೊದಲೇ ನೀವು ಘಟಕವನ್ನು ಈ ಆ್ಯಪ್ ಮೂಲಕ ಕಾಯ್ದಿರಿಸಬಹುದು. ಅಲ್ಲದೆ, ಚಾರ್ಜಿಂಗ್ ನಂತರ ಆನ್‌ಲೈನ್‌ನಲ್ಲಿಯೇ ಹಣ ಪಾವತಿಸಬೇಕಾಗುತ್ತದೆ. ನಗದು ವ್ಯವಹಾರಕ್ಕೆ ಅವಕಾಶವಿಲ್ಲ. ಕ್ಯೂಆರ್ ಕೋಡ್, ಒಟಿಪಿ ಅಥವಾ ಆರ್‌ಎಫ್‌ಐಡಿ ಬಳಸಿ ಶುಲ್ಕ ಪಾವತಿಸಬೇಕು.

ಬೆಸ್ಕಾಂ ಕಾರ್ಪೊರೇಟ್ ಕಚೇರಿ ಆವರಣದಲ್ಲಿರುವ ಚಾರ್ಜಿಂಗ್ ಸ್ಟೇಷನ್‌ನಲ್ಲಿ ಬ್ಯಾಟರಿ ಚಾರ್ಜ್ ಮಾಡಿಕೊಳ್ಳುತ್ತಿರುವ ಎಲೆಕ್ಟ್ರಿಕ್ ವಾಹನ – ಪ್ರಜಾವಾಣಿ ಚಿತ್ರ

ಶೇ 85ರಷ್ಟು ಕಾರ್ಮಿಕರಿಂದ ಬಲವಂತದ ರಾಜೀನಾಮೆ ಪಡೆದ ಆಡಳಿತ ಮಂಡಳಿ– ಅಧ್ಯಯನ

ಗಾರ್ಮೆಂಟ್ಸ್: 10 ಸಾವಿರ ಉದ್ಯೋಗಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸಕ್ಕಿದ್ದ 10 ಸಾವಿರಕ್ಕೂ ಅಧಿಕ ಕಾರ್ಮಿಕರು ಕೋವಿಡ್‌ಸೋಂಕು ಹರಡುವಿಕೆ ಆರಂಭವಾದ ಬಳಿಕ ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಕೆಲವರ ಬಳಿ ಬಲವಂತದಿಂದ ರಾಜೀನಾಮೆ ಪಡೆಯಲಾಗಿದೆ. ಇನ್ನು ಕೆಲವರಿಗೆ ನ್ಯಾಯಯುತ ಪರಿಹಾರಗಳನ್ನು ನೀಡದೆಯೇ ಕೆಲಸದಿಂದ ಕಿತ್ತುಹಾಕಲಾಗಿದೆ.

ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಆ್ಯಂಡ್ ಆಲ್ಟರ್ನೇಟಿವ್ ಲಾ ಫೋರಮ್ ನಡೆಸಿರುವ 'ಬಲವಂತದ ರಾಜೀನಾಮೆಗಳು, ಕಪಟದಿಂದ ಕಾರ್ಖಾನೆ ಮುಚ್ಚುವಿಕೆ'- ಬೆಂಗಳೂರಿನಲ್ಲಿ ಕೋವಿಡ್ 19 ಸಂದರ್ಭದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗಾದ ನಷ್ಟಗಳು- ಒಂದು ಅಧ್ಯಯನ' ವರದಿ ಈ ಬಗ್ಗೆ ಬೆಳಕು ಚೆಲ್ಲಿದೆ.

ಈ ಅವಧಿಯಲ್ಲಿ ಕೆಲಸ ಕಳೆದುಕೊಂಡ ಶೇ 85ರಷ್ಟು ಕಾರ್ಮಿಕರಿಂದ ಕಾರ್ಖಾನೆಗಳ ಆಡಳಿತ ಮಂಡಳಿಯು ಬಲವಂತದ ರಾಜೀನಾಮೆ ಪಡೆದಿದೆ ಎಂದು ಅಧ್ಯಯನ ವರದಿ ತಿಳಿಸಿದೆ.

ಕೋವಿಡ್‌ನಿಂದ ಎದುರಾದ ಸನ್ನಿವೇಶವನ್ನು ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು ಕಾರ್ಮಿಕರಿಗೆ ನೀಡಿದ್ದ ಆರ್ಥಿಕ, ಕಾನೂನಾತ್ಮಕ ಹಾಗೂ ಹಣಕಾಸಿಗೆ ಸಂಬಂಧಿಸಿದ ಬದ್ಧತೆಗಳಿಂದ ಹಾಗೂ ಸ್ವಯಂ ಪ್ರಕಟಿಸಿದ್ದ ವಾಗ್ದಾನಗಳಿಂದ ನುಣುಚಿಕೊಳ್ಳಲು ಬಳಸಿಕೊಂಡರು. ಹಣಕಾಸಿನ ಪರಿಹಾರ ನೀಡುವ ಬದ್ಧತೆಯಿಂದ ತಪ್ಪಿಸಿಕೊಳ್ಳಲು ಕಾರ್ಖಾನೆಗಳು ಕಾರ್ಮಿಕರಿಗೆ ಕಿರುಕುಳ ನೀಡುವ ವಿಭಿನ್ನ ತಂತ್ರಗಾರಿಕೆಗಳನ್ನು ಅನುಸರಿಸಿದವು. ಸಂಬಳ ಕಡಿತ, ಸಾರಿಗೆ ಸೌಕರ್ಯ ನಿರಾಕರಣೆ, ಯಾವೆಲ್ಲ ಕಾರ್ಮಿಕರು ಸ್ವಯಂ ರಾಜೀನಾಮೆ ನೀಡುವುದಿಲ್ಲವೋ ಅವರ ಭವಿಷ್ಯನಿಧಿಯ ಹಾಗೂ ಗ್ರಾಚ್ಯುಟಿಯ ಮೊತ್ತವನ್ನು ಕಡಿತ ಮಾಡಲಾಗುತ್ತದೆ ಎಂಬ ಭಯ ಹಬ್ಬಿಸುವಿಕೆ ಮುಂತಾದ ತಂತ್ರಗಳ ಮೂಲಕ ಕಾರ್ಮಿಕರ ಮೇಲೆ ಒತ್ತಡ ಹೇರಲಾಯಿತು ಎಂದೂ ಅಧ್ಯಯನ ಬೆಳಕು ಚೆಲ್ಲಿದೆ.

1947ರ ಕೈಗಾರಿಕಾ ವಿವಾದ (ಪರಿಹಾರ) ಕಾಯ್ದೆಯ ನಿಯಮಗಳ ಪಾಲನೆಯಲ್ಲಿ ಕಾರ್ಖಾನೆಗಳು ಸಂಪೂರ್ಣ ವಿಫಲವಾಗಿವೆ. ಈ ನಿಯಮಗಳ ಪ್ರಕಾರ ಕಾರ್ಮಿಕ ಕಾರ್ಖಾನೆಯಲ್ಲಿ ಕೆಲಸ ಮಾಡಿದಷ್ಟು ವರ್ಷಗಳಿಗೆ ಕನಿಷ್ಠ ತಲಾ 15 ದಿನಗಳ ಸರಾಸರಿ ವೇತನ ನೀಡಬೇಕು. 100ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಯು ಯಾವುದೇ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವ ಮುನ್ನ ಕನಿಷ್ಠ ಮೂರು ತಿಂಗಳು ಮುನ್ನ ಲಿಖಿತ ನೋಟಿಸ್ ಜಾರಿಗೊಳಿಸಬೇಕು ಅಥವಾ ನೋಟಿಸ್ ಅವಧಿಯ ಪೂರ್ಣ ವೇತನ ಪಾವತಿಸಬೇಕು ಎಂದು ಈ ನಿಯಮಗಳು ಹೇಳುತ್ತವೆ.

ಗಾರ್ಮೆಂಟ್ಸ್ ಕಾರ್ಮಿಕರನ್ನು ಎರಡು ಸುತ್ತುಗಳಲ್ಲಿ ಸಮೀಕ್ಷೆ ನಡೆಸುವ ಮೂಲಕ ಈ ಅಧ್ಯಯನ ನಡೆಸಲಾಗಿದೆ. ಬಹುತೇಕ ತಮ್ಮ ಕುಟುಂಬ ನಿರ್ವಹಣೆಗೆ ಬೇರೆ ಮಾರ್ಗವಿಲ್ಲದೇ ಭವಿಷ್ಯ ನಿಧಿಯ ಹಣವನ್ನು ಹಿಂಪಡೆಯುವ ಉದ್ದೇಶದಿಂದ ಕೆಲಸಕ್ಕೆ ರಾಜೀನಾಮೆ ನೀಡಿದ್ದಾಗಿ ಮಾಹಿತಿ ನೀಡಿದ್ದಾರೆ. ಕೋವಿಡ್ ಹರಡುತ್ತಿದ್ದ ಅವಧಿಯಲ್ಲಿ ಮನೆ ಬಾಡಿಗೆ ಕಟ್ಟಲು, ಮಕ್ಕಳ ಶಿಕ್ಷಣದ ವೆಚ್ಚ ಭರಿಸಲು ಹಾಗೂ ಲಾಕ್‌ಡೌನ್ ಅವಧಿಯಲ್ಲಿ ಪಡೆದ ಸಾಲ ತೀರಿಸಲು ಬಹಳ ಸಂಕಷ್ಟ ಎದುರಿಸಿದ್ದಾಗಿ ಹೇಳಿಕೊಂಡಿದ್ದಾರೆ.

ತಕ್ಷಣ ಹಣಕಾಸಿನ ಪರಿಹಾರ ಪಡೆಯುವ ಉದ್ದೇಶದಿಂದ ರಾಜೀನಾಮೆ ನೀಡಿದ್ದಾಗಿ ಹೇಳಿಕೊಂಡಿರುವ ಶೇ 35 ರಷ್ಟು ಮಂದಿ, ತಮ್ಮನ್ನು ಕೆಲಸದಿಂದ ತೆಗೆದುಹಾಕಿದಾಗ ಅಥವಾ ಕಂಪನಿ ಮುಚ್ಚಿದಾಗ ನೀಡಬೇಕಾದ ಪರಿಹಾರ ಇನ್ನೂ ಪೂರ್ತಿಯಾಗಿ ಕೈಸೇರಿಲ್ಲ ಎಂದು ತಿಳಿಸಿದ್ದಾರೆ.

ಅಂಕಿಅಂಶ

96% ಕಾರ್ಮಿಕರು ತಮ್ಮ ಕುಟುಂಬದ ವರಮಾನ ಲಾಕ್‌ಡೌನ್‌ನಿಂದಾಗಿ ಕುಸಿತವಾಗಿದೆ ಎಂದು ಮಾಹಿತಿ ನೀಡಿದ್ದಾರೆ

47% ಕಾರ್ಮಿಕರು ತಮ್ಮ ವರಮಾನ ಶೇ 30ರಿಂದ ಶೇ 50ರಷ್ಟು ಕುಸಿತ ಕಂಡಿದೆ ಎಂದು ಹೇಳಿಕೊಂಡಿದ್ದಾರೆ

63% ಕಾರ್ಮಿಕರು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿರುವಷ್ಟು ವೇತನ ಲಾಕ್‌ಡೌನ್ ಅವಧಿಯಲ್ಲಿ ತಮಗೆ ಸಿಕ್ಕಿಲ್ಲ ಎಂದು ಹೇಳಿದ್ದಾರೆ.

ನಿರ್ಮಲಾನಂದನಾಥ ಸ್ವಾಮೀಜಿ ನಾಡಪ್ರಭು ಕೆಂಪೇಗೌಡರ ಕಂಚಿನ ಪುತ್ಥಳಿಯನ್ನು ಅನಾವರಣಗೊಳಿಸಿದರು

'ಯುವಕರಿಗೆ ಕೆಂಪೇಗೌಡರು ಸ್ಫೂರ್ತಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಕೆಂಪೇಗೌಡರ ದೂರದೃಷ್ಟಿಯ ಚಿಂತನೆ ಹಾಗೂ ಅವರಲ್ಲಿನ ಉತ್ತಮ ಸಂಸ್ಕಾರವು ಯುವಕರಿಗೆ ಸ್ಫೂರ್ತಿಯಾಗಬೇಕಿದೆ' ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮಿ ಹೇಳಿದರು.

ವಿಜಿನಾಪುರ ವಾರ್ಡ್‌ನ ಕುವೆಂಪು ಆಟದ ಬಳಿ ಜೈ ಭುವನೇಶ್ವರಿ ಒಕ್ಕಲಿಗರ ಸಂಘದ ವತಿಯಿಂದ ₹50 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ನಾಡಪ್ರಭು ಕೆಂಪೇಗೌಡರ ಕಂಚಿನ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, 'ಕೆಂಪೇಗೌಡರು ನೂರಾರು ಸಮುದಾಯಗಳ ಜೀವನ ಶೈಲಿ, ಆಚಾರ ವಿಚಾರಗಳನ್ನು ಅರಿತು ವಿವಿಧ ಸಮುದಾಯದ ಜನರು ಎಲ್ಲಿ ವಾಸ ಮಾಡಬೇಕು ಎನ್ನುವ ಕಲ್ಪನೆಯೊಂದಿಗೆ ನಗರ ನಿರ್ಮಾಣ ಮಾಡಿದ್ದರು. ಇವತ್ತಿನ ಸ್ಮಾರ್ಟ್ ಸಿಟಿ ಯೋಜನೆ ಕೆಂಪೇಗೌಡರ ದೂರದೃಷ್ಟಿಯ ಪ್ರತೀಕ' ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, 'ಒಕ್ಕಲಿಗ ಜನಾಂಗದ ಅಭಿವೃದ್ಧಿಗೆ ₹5 ಕೋಟಿ ರೂ.ಗಳನ್ನು ಸರ್ಕಾರ ನೀಡಿದೆ. ಮುಂದಿನ ದಿನಗಳಲ್ಲಿ ಮಂಡೂರು ಗ್ರಾಮದಲ್ಲಿ 5 ಎಕರೆ ಜಾಗವನ್ನು ಮೀಸಲಿಡಲಾಗುವುದು' ಎಂದರು.

ಬಿಬಿಎಂಪಿಯಿಂದ ₹35 ಲಕ್ಷ ವೆಚ್ಚದಲ್ಲಿ ನವೀಕರಿಸಲಾಗಿರುವ ಉದ್ಯಾನವನ್ನು ಇದೇ ವೇಳೆ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಡಿ.ವಿ. ಸದಾನಂದಗೌಡ, ಬೈರತಿ ಬಸವರಾಜ, ಬಂಡೆ ರಾಜ, ಶ್ರೀಕಾಂತ್ ಗೌಡ, ಎಸ್. ಪ್ರದೀಪ್ ಗೌಡ, ಚಿದಾನಂದ ಮೂರ್ತಿ, ಮುನೇಗೌಡ, ಯಶಸ್ ರೆಡ್ಡಿ ಇದ್ದರು.

ಆಗುಂಬೆ ಘಾಟಿಯಲ್ಲಿ ತ್ಯಾಜ್ಯ ಹೆಕ್ಕಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಉಡುಪಿ: ಹೆಬ್ರಿ ತಾಲ್ಲೂಕಿನ ಕಬ್ಬಿನಾಲೆ ಹಾಗೂ ನಾಡ್ಪಾಲಿನಲ್ಲಿ ಜಿಲ್ಲಾಧಿಕಾರಿಯ ಗ್ರಾಮ ವಾಸ್ತವ್ಯದಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ಭಾನುವಾರ ಬೆಳಿಗ್ಗೆ ಆಗುಂಬೆ ಘಾಟಿಯಲ್ಲಿ ತ್ಯಾಜ್ಯ ಹೆಕ್ಕಿ ಗಮನ ಸೆಳೆದರು.

ಹೆಬ್ರಿಯ ಸೋಮೇಶ್ವರದಿಂದ ಆಗುಂಬೆಯ ಘಾಟಿಗೆ ವಾಯುವಿಹಾರಕ್ಕೆ ಹೋಗಿದ್ದ ಹೆಚ್ಚುವರಿ ಜಿಲ್ಲಾಧಿಕಾರಿ ಸದಾಶಿವ ಪ್ರಭು, ಕುಂದಾಪುರ ಉಪ ವಿಭಾಗಾಧಿಕಾರಿ ರಾಜು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆಂಪೇಗೌಡ, ಉಪ ನಿರ್ದೇಶಕ ಚಂದ್ರಶೇಖರ್ ನಾಯಕ್, ಭೂ ದಾಖಲೆಗಳ ಉಪ ನಿರ್ದೇಶಕ ರವೀಂದ್ರ, ತಹಶೀಲ್ದಾರ್ ಪುರಂದರ್ ಅವರು ಸ್ವಚ್ಛತಾ ಅಭಿಯಾನ ನಡೆಸಿದರು.

ಕೋವಿಡ್: ಮಕ್ಕಳಲ್ಲಿ ಬೊಜ್ಜು ಹೆಚ್ಚಳ

ದೈಹಿಕ ಚಟುವಟಿಕೆ ಕೊರತೆ: ಆರೋಗ್ಯ ತಜ್ಞರ ಎಚ್ಚರಿಕೆ

ನವದೆಹಲಿ (ಪಿಟಿಐ): ಕೋವಿಡ್-19 ಪಿಡುಗಿನಿಂದಾಗಿ ಮಕ್ಕಳು ಮನೆಯಲ್ಲಿಯೇ ಇರಬೇಕಾಗಿದೆ. ಆಟವಾಡುವುದು ಸೇರಿದಂತೆ ದೈಹಿಕ ಚಟುವಟಿಕೆಗಳು ಇಲ್ಲ. ಜೊತೆಗೆ, ಅತಿಯಾದ ಜಂಕ್ ಆಹಾರ ಸೇವನೆಯಿಂದಾಗಿ ಅವರಲ್ಲಿ ಬೊಜ್ಜು ಕಾಣಿಸಿಕೊಳ್ಳುವ ಅಪಾಯ ಹೆಚ್ಚು ಎಂದು ಆರೋಗ್ಯ ಕ್ಷೇತ್ರದ ತಜ್ಞರು ಎಚ್ಚರಿಸಿದ್ದಾರೆ.

ಸಾಮಾಜಿಕ-ಆರ್ಥಿಕವಾಗಿ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗದ ಮಕ್ಕಳು ಹೆಚ್ಚು ತೊಂದರೆಗೆ ಒಳಗಾಗುವ ಅಪಾಯ ಇದೆ ಎಂದೂ ಹೇಳಿದ್ದಾರೆ.

'ಮಕ್ಕಳಲ್ಲದೇ, ಈ ವರ್ಗದ ಯುವಕರಲ್ಲಿಯೂ ತೂಕ ಹೆಚ್ಚಳ ಸಮಸ್ಯೆ ಕಾಡಬಹುದು. ಮನೆಯಲ್ಲಿಯೇ ಹೆಚ್ಚು ಸಮಯ ಕಳೆಯುವುದರಿಂದ ನಮ್ಕೀನ್, ಬಿಸ್ಕತ್ತುಗಳು, ಬ್ರೆಡ್, ಬನ್ಸ್, ನೂಡಲ್ಸ್, ಐಸ್‌ಕ್ರೀಂ, ಕುಕೀಸ್, ಕೇಕ್, ಸಕ್ಕರೆಅಂಶ ಇರುವ ಪಾನೀಯಗಳನ್ನು ಪದೇಪದೇ ಸೇವಿಸುತ್ತಾರೆ. ಇಂಥ ಆಹಾರ, ಪಾನೀಯಗಳಲ್ಲಿ ಪಿಷ್ಟ, ಸಕ್ಕರೆ, ಕೊಬ್ಬಿನ ಪ್ರಮಾಣ ಅಧಿಕ. ಇಂಥ ಪದಾರ್ಥಗಳ ಸೇವನೆ ತೂಕದಲ್ಲಿ ಹೆಚ್ಚಳ, ಬೊಜ್ಜಿಗೆ ಕಾರಣವಾಗುತ್ತದೆ' ಎಂದು ನವದೆಹಲಿ ಮೂಲದ ಸಾರ್ವಜನಿಕ ಆರೋಗ್ಯ, ಪೌಷ್ಟಿಕತೆ ಹಾಗೂ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ಡಾ.ಶೈಲಾ ವೀರ್ ಹೇಳುತ್ತಾರೆ.

ಕೋವಿಡ್-19 ಪಿಡುಗು ವ್ಯಾಪಕವಾಗುವುದಕ್ಕೂ ಮೊದಲು ದೇಶದ 22 ರಾಜ್ಯಗಳಲ್ಲಿ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'ಯನ್ನು ನಡೆಸಲಾಗಿದೆ. ಪಿಡುಗು ವ್ಯಾಪಕಗೊಂಡ ನಂತರವೂ ಸಮೀಕ್ಷೆ ನಡೆಸಿದಾಗ ಮಕ್ಕಳಲ್ಲಿನ ಪೌಷ್ಟಿಕತೆಯಲ್ಲಿ ಭಾರಿ ವ್ಯತ್ಯಾಸ ಕಂಡು ಬಂದಿರುವುದನ್ನು ಸಮೀಕ್ಷೆ ವಿವರಿಸಿದೆ.

'ಸಮೀಕ್ಷೆ ನಡೆದ 22 ರಾಜ್ಯಗಳ ಪೈಕಿ 20 ರಾಜ್ಯಗಳಲ್ಲಿನ ಮಕ್ಕಳಲ್ಲಿ ಬೊಜ್ಜು ಹೆಚ್ಚಾಗಿರುವುದು ಕಂಡು ಬಂದಿದೆ. ಸರ್ಕಾರ ಹೊಸದಾಗಿ ಆರಂಭಿಸಿರುವ ಮಿಷನ್ ಪೋಷಣ್ ಯೋಜನೆಯಡಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಬೊಜ್ಜಿನ ಸಮಸ್ಯೆ ನಿವಾರಣೆಗೆ ಹೆಚ್ಚು ಒತ್ತು ನೀಡಬೇಕಾಗುತ್ತದೆ' ಎಂದು ಸಮೀಕ್ಷೆ ತಂಡದಲ್ಲಿದ್ದ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ-ಅಂಶ

4,17,672 ಒಟ್ಟು ಸೋಂಕಿತರು



ಭಾನುವಾರದ ಏರಿಕೆ

1,039 ದೃಢಪಟ್ಟ ಪ್ರಕರಣ

782 ಗುಣಮುಖ

1 ಸಾವು

ತುಮಕೂರು ಹುಣಸೆ ಈಗ ಹೊಸ 'ಬ್ರ್ಯಾಂಡ್'

ಪ್ರಜಾವಾಣಿ ವಾರ್ತೆ

ತೋವಿನಕೆರೆ: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬಿಡುಗಡೆ ಮಾಡಿರುವ ಹಲವು ವಿಶೇಷತೆಗಳ ಲಕ್ಷ್ಮಣ ಎಂಬ ಹುಣಸೆ ತಳಿ ಮಾರುಕಟ್ಟೆಯಲ್ಲಿ ತುಮಕೂರು ಹುಣಸೆಗೆ ಹೊಸ 'ಬ್ರ್ಯಾಂಡ್' ತಂದುಕೊಡಲಿದೆ.

ತುಮಕೂರು ತಾಲ್ಲೂಕು ಕೋರಾ ಹೋಬಳಿ ನಂದಿಹಳ್ಳಿಯ ರೈತ ಲಕ್ಷ್ಮಣಪ್ಪ ಬೆಳೆಸಿರುವ 40 ವರ್ಷದ ಹುಣಸೆ ಮರ ಹಲವು ದಶಕಗಳಿಂದ ಪ್ರತಿ ವರ್ಷ ರೈತನಿಗೆ ₹50 ಸಾವಿರಕ್ಕಿಂತ ಹೆಚ್ಚು ಹಣ ತಂದುಕೊಟ್ಟಿದೆ.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯವರು ಮರದ ವೈಶಿಷ್ಟ್ಯವನ್ನು ಗುರುತಿಸಿದ ನಂತರ ರೈತನ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. 3 ವರ್ಷ ಸಂಶೋಧನೆ ನಡೆಸಿದ ವಿಜ್ಞಾನಿಗಳು ಕಸಿ ಮಾಡಿದ ಸಸಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ.

ಶಿವರಾಮ ಕಾರಂತ ಬಡಾವಣೆ: ದೂರು ಪರಿಗಣನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಗಾಗಿ 2008ರಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರಿಂದ ನಿವೇಶನಗಳನ್ನು ಖರೀದಿಸಿರುವ ಬಡವರು ಹಾಗೂ ಆರ್ಥಿಕವಾಗಿ ದುರ್ಬಲರು ಸಲ್ಲಿಸಿರುವ ದೂರುಗಳನ್ನು ಪರಿಗಣಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರಿರುವ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ನಿವೇಶನ ಖರೀದಿಸಿದವರ ದೂರುಗಳಿಗೆ ಯಾವ ರೀತಿ ಪರಿಹಾರ ಒದಗಿಸಲಾಗಿದೆ ಎಂಬ ವಿವರಗಳನ್ನು ನಾಲ್ಕು ವಾರಗಳ ಒಳಗಾಗಿ ಸಲ್ಲಿಸುವಂತೆ ಬಿಡಿಎ ಆಯುಕ್ತರಿಗೆ ನಿರ್ದೇಶನ ನೀಡಿದೆ.

ಮಾನವ ಸರಪಣಿಯ ಶಾಂತಿಯುತ ಹೋರಾಟಕ್ಕೆ ಕರಗದ ಪಾಲಿಕೆ • ಪ್ರತಿಭಟನಕಾರರಿಂದ ತರಾಟೆ

ಆರು ಮರಗಳ ಬುಡಕ್ಕೆ ಮತ್ತೆ ಗರಗಸ ಇಟ್ಟರು

ಪ್ರಜಾವಾಣಿ ವಾರ್ತೆ

ಮಾನವ ಸರಪಣಿಯಲ್ಲಿ ಭಾಗವಹಿಸಿದ ಚಿಣ್ಣರು ಮರಗಳನ್ನು ಉಳಿಸುವಂತೆ ಕೋರಿ ಭಿತ್ತಿಫಲಕ ಪ್ರದರ್ಶಿಸಿ ಗಮನ ಸೆಳೆದರು

ಬೆಂಗಳೂರು: ‘ತಂಪನ್ನೀಯುತ್ತಿರುವ ಮರಗಳನ್ನು ಅಭಿವೃದ್ಧಿ ಕಾಮಗಾರಿಗಾಗಿ ಕಡಿಯದಿರಿ’ ಎಂದು ಸ್ಥಳೀಯರು ಮಾನವ ಸರಪಣಿ ರಚಿಸುವ ಮೂಲಕ ಅಂಗಲಾಚಿದ್ದರು. ಚಿಣ್ಣರು, ಯುವ ಜನರು ಸೇರಿ ಅನೇಕರು ಎಚ್‌ಎಎಲ್ ಬಳಿ ಭಾನುವಾರ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲೇ ತಾಸುಗಟ್ಟಲೇ ಪ್ರತಿಭಟನೆ ನಡೆಸಿ ಮರಳಿಸಿದ್ದರು. ಅವರು ಮನೆಗೆ ಮರಳಿ ಇನ್ನೇನು ಉಪಾಹಾರ ಸೇವಿಸುವಷ್ಟರಲ್ಲಿ ಎಚ್‌ಎಎಲ್ ರಸ್ತೆಯ ಆರು ಮರಗಳ ಬುಡಗಳನ್ನು ಭಾಗಶಃ ಕತ್ತರಿಸಲಾಗಿದೆ.

ಸುದ್ದಿ ತಿಳಿದು ಮತ್ತೆ ಸ್ಥಳಕ್ಕೆ ಮರಳಿದ ಪ್ರತಿಭಟನಕಾರರು ವಿಶಾಲವಾಗಿ ಬೆಳೆದ ಮರಗಳ ಬುಡವನ್ನು ಗರಗಸ ಯಂತ್ರದಿಂದ ಕತ್ತರಿಸಿದ್ದನ್ನು ಕಂಡು ಅಕ್ಷರಶಃ ಮರುಗಿದರು. ಮರ ಕಡಿಯುತ್ತಿದ್ದವರನ್ನು ತರಾಟೆಗೆ ತೆಗೆದುಕೊಂಡರು.

‘ಮರ ಕಡಿಯುತ್ತಿರುವ ನೀವು, ನಿಮ್ಮ ಮಕ್ಕಳೂ ಇಲ್ಲೇ ಬದುಕಬೇಕಿಲ್ಲ. ಇಷ್ಟು ದೊಡ್ಡ ಮರಗಳನ್ನು ಕತ್ತರಿಸುತ್ತಿದ್ದೀರಲ್ಲಾ ನಿಮಗೆ ಮನಸ್ಸಾದರೂ ಹೇಗೆ ಬರುತ್ತದೆ. ಬೆಂಗಳೂರಿನಲ್ಲಿ ಯಾರೂ ಉಸಿರಾಡಬಾರದು ಎಂದು ಬಯಸುತ್ತೀರಾ’ ಎಂದು ಮಹಿಳೆಯೊಬ್ಬರು ಪ್ರಶ್ನಿಸಿದರು.

‘ನಾವು ಕಾನೂನುಬದ್ಧವಾಗಿ ಎಲ್ಲ ಮಂಜೂರಾತಿ ಪಡೆದೇ ಮರವನ್ನು ಕತ್ತರಿಸುತ್ತಿದ್ದೇವೆ. ಅಭಿವೃದ್ಧಿ ಕಾಮಗಾರಿಗಾಗಿಯೇ ಮರಗಳನ್ನು ಕಡಿಯುತ್ತಿದ್ದೇವೆ. ಇದಕ್ಕೆ ಬದಲಿಯಾಗಿ ಸಸಿ ನೆಟ್ಟು ಬೆಳೆಸುತ್ತೇವೆ’ ಎಂದು ಗುತ್ತಿಗೆದಾರರ ಕಡೆಯವರು ತಿಳಿಸಿದರು.

> **ಈಗಾಗಲೇ 15ಕ್ಕೂ ಅಧಿಕ ಮರಗಳನ್ನು ಸಾಯಿಸಿದ್ದಾರೆ. ಇಲ್ಲಿರುವ ಎರಡು ಭಾರಿ ಗಾತ್ರದ ಮರಗಳನ್ನಾದರೂ ಉಳಿಸಿಕೊಡಲಿ ಎಂಬುದು ನಮ್ಮ ಕಳಕಳಿ. ಆ ಮರಗಳು ವಿಶಾಲ ಜಾಗಕ್ಕೆ ನೆರಳು ನೀಡುತ್ತಿವೆ**
> **ಸ್ವಸ್ತಿಕ್ ಮಣಿ,** ಅನ್ನಸಂದ್ರಪಾಳ್ಯ ನಿವಾಸಿ

> **ಕಾಮಗಾರಿಯ ವಿನ್ಯಾಸದಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಇಲ್ಲಿನ ಭಾರಿ ಗಾತ್ರದ ಮರಗಳನ್ನಾದರೂ ಉಳಿಸಲು ಸಾಧ್ಯವಿದೆಯೇ ಎಂಬ ಬಗ್ಗೆ ಮುಖ್ಯ ಎಂಜಿನಿಯರ್ ಜೊತೆ ಚರ್ಚಿಸುತ್ತೇನೆ**
> **ರಂಗಸ್ವಾಮಿ,** ಡಿಸಿಎಫ್, ಬಿಬಿಎಂಪಿ

‘ಕತ್ತರಿಸಿದ ಮರಗಳಿಗೆ ಪ್ರತಿಯಾಗಿ ಎಷ್ಟು ಮರಗಳನ್ನು ಬೆಳೆಸಲಾಗಿದೆ ತೋರಿಸಿ. ಇಲ್ಲಿ ಗ್ರೇಡ್ ಸಪರೇಟರ್ ಅನಿವಾರ್ಯವಾದರೆ ಎಚ್‌ಎಎಲ್‌ನಿಂದ ಜಾಗ ಪಡೆದು ಅಲ್ಲಿ ನಿರ್ಮಿಸಿ. ಯಾವುದೇ ಕಾರಣಕ್ಕೂ ಈ ಮರಗಳನ್ನು ಕಡಿಯಬೇಡಿ’ ಎಂದು ಸ್ಥಳೀಯರು ಪಟ್ಟು ಹಿಡಿದರು.

‘ಇನ್ನು ಮರಗಳನ್ನು ಕಡಿಯಲು ಸ್ಥಳೀಯರು ಅವಕಾಶ ನೀಡುವುದಿಲ್ಲ’ ಎಂಬುದನ್ನು ಅರಿತ ಗುತ್ತಿಗೆದಾರರು ಸ್ಥಳದಿಂದ ನಿರ್ಗಮಿಸಿದರು.

‘ಬುಡವನ್ನು ಭಾಗಶಃ ಕತ್ತರಿಸಲಾಗಿರುವ ಆರೂ ಮರಗಳು ಭಾರಿ ಗಾತ್ರದವು. ಅವುಗಳನ್ನು ಇನ್ನು ಉಳಿಸಿಕೊಳ್ಳಲು ಸಾಧ್ಯವೋ ಗೊತ್ತಿಲ್ಲ. ನಾವು ಬೀದಿಗಿಳಿದು ಅಂಗಲಾಚಿಕೊಂಡ ಬಳಿಕವೂ ಉದ್ದೇಶಪೂರ್ವಕವಾಗಿ ಇಂದೇ ಮರಗಳನ್ನು ಕತ್ತರಿಸಿದ್ದಾರೆ. ಹಸಿರನ್ನು ಉಳಿಸುವ ಬಗ್ಗೆ ಪಾಲಿಕೆಗೆ ಎಷ್ಟು ಕಾಳಜಿ ಇದೆ ಎಂಬುದು ನಮಗೆ ಈಗ ಮನವರಿಕೆಯಾಯಿತು’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಇಲ್ಲಿನ ಮರಗಳನ್ನು ಉಳಿಸುವ ಹೋರಾಟದಲ್ಲಿ ಸಕ್ರಿಯವಾಗಿರುವ ಸ್ವಾತಿ.

ಸುರಂಜನದಾಸ್ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಬಿಬಿಎಂಪಿ ಕೈಗೆತ್ತಿಕೊಂಡಿದೆ. ₹ 45 ಕೋಟಿ ವೆಚ್ಚದ ಈ ಕಾಮಗಾರಿಗಾಗಿ ಒಟ್ಟು 48 ಮರಗಳನ್ನು ತೆರವುಗೊಳಿಸುವುದಕ್ಕೆ ಬಿಬಿಎಂಪಿ ತೀರ್ಮಾನಿಸಿತ್ತು. ಬಳಿಕ ಮಾರ್ಗದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು 16 ಮರಗಳನ್ನು ಕಡಿಯುವುದನ್ನು ತಪ್ಪಿಸಲು ಕ್ರಮ ಕೈಗೊಂಡಿತ್ತು. ಏಳು ಮರಗಳನ್ನು ಸ್ಥಳಾಂತರ ಮಾಡಿತ್ತು. ಅಂತಿಮವಾಗಿ ಭಾರಿ ಗಾತ್ರದ 25 ಮರಗಳನ್ನು ಕಡಿಯಲು ಮುಂದಾಗಿತ್ತು. ಕಳೆದ ಭಾನುವಾರ (ಮಾರ್ಚ್ 14) ಭಾರಿ ಗಾತ್ರದ ಎಂಟು ಮರಗಳನ್ನು ಕಡಿಯಲಾಗಿದೆ. ಕಳೆದ ಸೋಮವಾರ (ಮಾರ್ಚ್ 15) ದಿಢೀರ್ ಪ್ರತಿಭಟನೆ ನಡೆಸಿದ್ದ ಸ್ಥಳೀಯರು ಇನ್ನುಳಿದ ಮರಗಳನ್ನು ಕಡಿಯಬೇಡಿ ಎಂದು ಒತ್ತಾಯಿಸಿದ್ದರು.

‘ಸದಾ ನೆರಳಿನಿಂದ ಆವೃತವಾಗಿದ್ದ ಈ ಪ್ರದೇಶ ಈಗ ಬಿರುಬಿಸಿಲಿನಿಂದ ಕೂಡಿದೆ’ ಎಂದು ನೋವಿನಿಂದ ಹೇಳುತ್ತಾರೆ ಸ್ಥಳೀಯರು.

‘ಅಷ್ಟೂ ಮರಗಳನ್ನು ಕಡಿಯುತ್ತಿದ್ದರು’

‘ಗುತ್ತಿಗೆದಾರರ ಕಡೆಯವರು ಜೀಪ್, ನಾಲ್ಕು ಈಚರ್ ವಾಹನಗಳು, ಲಾರಿ, ಎರಡು ಕ್ರೇನ್ ಹಾಗೂ ಜೆಸಿಬಿಯೊಂದಿಗೆ ಸ್ಥಳಕ್ಕೆ ಬಂದಿದ್ದರು. ನಾವು ಬಲವಾದ ಪ್ರತಿಭಟನೆ ವ್ಯಕ್ತಪಡಿಸದಿದ್ದರೆ, ಅವರು ಕತ್ತರಿಸಲು ಗುರುತಿಸಿದ್ದ ಅಷ್ಟೂ ಮರಗಳನ್ನು ಇಂದೇ ಕಡಿಯುತ್ತಿದ್ದರು’ ಎಂದು ವಿನಾಯಕನಗರ ಅನ್ನಸಂದ್ರಪಾಳ್ಯದ ಸ್ವಸ್ತಿಕ್ ಮಣಿ ತಿಳಿಸಿದರು.

ಚಿಣ್ಣರಿಂದ ಅಪ್ಪಿಕೋ ಚಳವಳಿ

ಮಾನವ ಸರಪಣಿಯಲ್ಲಿ ಅನೇಕ ಚಿಣ್ಣರೂ ಭಾಗವಹಿಸಿದ್ದರು. ಮರವನ್ನು ಅಪ್ಪಿ ಹಿಡಿದ ಚಿಣ್ಣರು, ‘ಮರಗಳಿದ್ದರೆ ಮಾತ್ರ ನಾವು ಉಸಿರಾಡಲು ಸಾಧ್ಯ. ಮರಗಳನ್ನೇ ಕಳೆದುಕೊಂಡರೆ ನಮಗೆ ಬದುಕೇ ಇಲ್ಲ. ಈ ಮರಗಳನ್ನು ಬಹಳ ಪ್ರೀತಿಸುತ್ತೇವೆ. ದಯವಿಟ್ಟು ಇವುಗಳನ್ನು ಕಡಿಯಬೇಡಿ’ ಎಂದು ಕೋರಿದರು.

ಚಿತ್ರಾವಳಿ

ಉತ್ತರಹಳ್ಳಿಯ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಳಿಕ ಶ್ರೀ ರಾಘವೇಂದ್ರ ವೈಭವ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು. ಶಾಸಕ ಬೈರತಿ ಸುರೇಶ್, ಮಾಜಿ ಶಾಸಕರಾದ ಶ್ರೀನಿವಾಸ್, ಅಶೋಕ್ ಪಟ್ಟಣ್, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಇದ್ದರು

ಸಮುದಾಯ ಬೆಂಗಳೂರು ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಸ್. ಮಾಲತಿ ಅವರ ‘ಬಹುಮುಖಿ’ ಪುಸ್ತಕವನ್ನು ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. ಪುರುಷೋತ್ತಮ ತಳವಾಟ, ರಂಗಕರ್ಮಿ ಶ್ರೀನಿವಾಸ್ ಜಿ.ಕಪ್ಪಣ್ಣ, ಲೇಖಕರಾದ ಜಯಪ್ರಕಾಶ್ ಮಾವಿನಕುಳಿ, ಕೆ. ಷರೀಫಾ, ಎನ್. ಗಾಯತ್ರಿ, ಲಕ್ಷ್ಮೀ ಚಂದ್ರಶೇಖರ್ ಇದ್ದರು. –ಪ್ರಜಾವಾಣಿ ಚಿತ್ರ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯ

ಜಾತಿ ವ್ಯವಸ್ಥೆಯೇ ಭ್ರಷ್ಟಾಚಾರಕ್ಕೆ ಬುನಾದಿ

ಪ್ರಜಾವಾಣಿ ವಾರ್ತೆ

ಎಚ್.ಎಂ.ರೇವಣ್ಣ ಮತ್ತು ವತ್ಸಲಾ ರೇವಣ್ಣ ಅವರನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿನಂದಿಸಿದರು. ಕವಿ ಡಾ.ಸಿದ್ದಲಿಂಗಯ್ಯ, ಲೇಖಕಿ ಬಿ.ಟಿ.ಲಲಿತಾ ನಾಯ್ಕ್, ಎಂ.ವೀರಪ್ಪ ಮೊಯಿಲಿ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಬಿ.ಕೆ.ರವಿ ಮತ್ತು ಮಾಜಿ ಶಾಸಕ ಚಂದ್ರಶೇಖರ್ ಇದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಜಾತಿ ವ್ಯವಸ್ಥೆಯು ಸಮಾಜದ ಬಹುದೊಡ್ಡ ಪಿಡುಗು. ಭ್ರಷ್ಟಾಚಾರಕ್ಕೆ ಇದೇ ಬುನಾದಿ. ಸಂತರು, ಸೂಫಿಗಳು, ದಾರ್ಶನಿಕರು, ಸಮಾಜ ಸುಧಾರಕರು ಎಷ್ಟೆಲ್ಲಾ ಪ್ರಯತ್ನಪಟ್ಟರೂ ಈ ಪಿಡುಗನ್ನು ಬೇರು ಸಹಿತ ಕಿತ್ತೊಗೆಯಲು ಆಗಿಲ್ಲ. ಈ ವ್ಯವಸ್ಥೆ ಜೀವಂತವಾಗಿರುವವರೆಗೂ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಎಚ್.ಎಂ.ರೇವಣ್ಣ ಸಾಂಸ್ಕೃತಿಕ ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಎಚ್.ಎಂ.ರೇವಣ್ಣ–ಅಭಿನಂದನೆ ಮತ್ತು ಗ್ರಂಥಗಳ ಬಿಡುಗಡೆ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಬಡವರು ಹಾಗೂ ಶೋಷಿತ ವರ್ಗಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡುವುದು ನಿಜವಾದ ರಾಜಕಾರಣ. ಬಡವರು ಮುಖ್ಯವಾಹಿನಿಗೆ ಬರದೇ ಹೋದರೆ ಸಮ ಸಮಾಜದ ಆಶಯ ಈಡೇರುವುದಿಲ್ಲ. ರಾಜಕೀಯ ಸ್ವಾತಂತ್ರ್ಯದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸೇರಿದಾಗ ಮಾತ್ರ ಬದಲಾವಣೆ ಸಾಧ್ಯ ಎಂದು ಬಿ.ಆರ್. ಅಂಬೇಡ್ಕರ್ ಅವರೇ ಹೇಳಿದ್ದಾರೆ. ತಮ್ಮ ಜಾತಿಯವರು ಎಂಬ ಕಾರಣಕ್ಕೆ ಭ್ರಷ್ಟ ರಾಜಕಾರಣಿ ಹಾಗೂ ಅಧಿಕಾರಿಗಳನ್ನು ಜನರೇ ಸಮರ್ಥಿಸಿಕೊಳ್ಳುತ್ತಾರೆ. ಈ ಧೋರಣೆ ಬದಲಾಗಬೇಕು’ ಎಂದರು.

ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ, ‘ರೇವಣ್ಣ ನಾನು ಗುರುತಿಸಿದ ಶಾಸಕ. ಅವರು ಜನಪರ ಕೆಲಸಗಳನ್ನು ಮಾಡುತ್ತಾ ಇಷ್ಟು ಎತ್ತರಕ್ಕೆ ಬೆಳೆದಿರುವುದು ಹೆಮ್ಮೆಯ ವಿಷಯ’ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ‘ನಮ್ಮದು 35 ವರ್ಷಗಳ ಗೆಳೆತನ. ರಾಜಕಾರಣದಲ್ಲಿ ದ್ವೇಷ, ಅಸೂಯೆ ಹೆಚ್ಚು. ಹೀಗಿದ್ದರೂ ನಾನು, ರೇವಣ್ಣ ಮತ್ತು ಸಿದ್ದರಾಮಯ್ಯ ಕುಟುಂಬದ ಸದಸ್ಯರಂತಿದ್ದೇವೆ’ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ‘ನಾನು ಮತ್ತು ರೇವಣ್ಣ ಜೊತೆ ಜೊತೆಯಾಗಿಯೇ ಬೆಳೆದವರು. ಅವರು ಉತ್ತಮ ಕಬಡ್ಡಿ ಆಟಗಾರ. ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಎಲ್ಲರನ್ನೂ ಪ್ರೇರೇಪಿಸುತ್ತಿದ್ದರು’ ಎಂದರು.

ಎಚ್.ಎಂ.ರೇವಣ್ಣ, ‘ಇವತ್ತಿನ ರಾಜಕಾರಣ ಹಣ ಬಲ ಮತ್ತು ತೋಳ್ಬಲದ ಮೇಲೆ ನಡೆಯುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ನಾವು ಸ್ವಂತ ಬಲದಿಂದ ಮೇಲಕ್ಕೇರಿದ್ದೇವೆ’ ಎಂದರು.

ಕವಿ ಸಿದ್ದಲಿಂಗಯ್ಯ ‘ಬೂಸಾ ಚಳವಳಿ ವೇಳೆ ನನ್ನ ಮೇಲೆ ಹಲ್ಲೆ ನಡೆದಿತ್ತು. ಆಗ ರೇವಣ್ಣ ನನ್ನ ಜೀವ ಉಳಿಸಿದ್ದರು. ಈ ವೇದಿಕೆಯಲ್ಲಿ ಕುಳಿತು ಮಾತನಾಡುತ್ತಿರುವುದಕ್ಕೆ ಅವರೇ ಕಾರಣ’ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ‘ಸಂಗತ’ ಕೃತಿಯ ಸಂಪಾದಕರಾದ ಲಕ್ಷ್ಮಣ ಕೊಡಸೆ, ಕಾ.ತ.ಚಿಕ್ಕಣ್ಣ, ಕಿರುಚಿತ್ರ ನಿರ್ದೇಶಕ ಹುಲಿ ಚಂದ್ರಶೇಖರ ಇದ್ದರು.

ಗಣ್ಯರಿಗೆ ಕೊಲೆ ಬೆದರಿಕೆ: ಲಲಿತಾ ನಾಯ್ಕ್

‘ಹಂತಕರು ಮೇ 1ಕ್ಕೆ ನನಗೆ ಮುಹೂರ್ತ ಇಟ್ಟಿದ್ದಾರಂತೆ. ಅದೇ ದಿನ ನಟ ಶಿವರಾಜ್‌ಕುಮಾರ್, ಪಬ್ಲಿಕ್ ಟಿವಿ ಸಂಪಾದಕ ಎಚ್.ಆರ್.ರಂಗನಾಥ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಹತ್ಯೆ ಮಾಡುತ್ತಾರಂತೆ. ಈ ಬಗ್ಗೆ ಕರೀಂ ಚಳ್ಳಕೆರೆ ಎಂಬ ವ್ಯಕ್ತಿ ನನಗೆ ಪತ್ರ ಬರೆದಿದ್ದಾರೆ. ಈ ವಿಷಯವನ್ನು ಪೊಲೀಸರ ಗಮನಕ್ಕೆ ತಂದಿದ್ದೇನೆ. ಅವರು ಭದ್ರತೆ ಒದಗಿಸಿದ್ದಾರೆ’ ಎಂದು ಲೇಖಕಿ ಬಿ.ಟಿ.ಲಲಿತಾ ನಾಯ್ಕ್ ಹೇಳಿದರು.

‘ಸಿ.ಟಿ.ರವಿ ಇಲ್ಲವೇ ನನ್ನನ್ನು ಕೊಲ್ಲಬೇಕು. ಇಬ್ಬರನ್ನೂ ಒಟ್ಟಿಗೆ ಕೊಲ್ಲುತ್ತೇವೆ ಅಂತ ಬರೆದಿದ್ದಾರೆ. ಇದನ್ನು ನೋಡಿದಾಗ ಯಾರೊ ಹುಡುಗಾಟಿಕೆಗೆ ಇದನ್ನು ಬರೆದಿರಬಹುದು ಅಂತ ಅನಿಸುತ್ತಿದೆ’ ಎಂದು ಅವರು ಹೇಳಿದರು.

‘ಗೌರಿ ಲಂಕೇಶ್ ಹಾಗೂ ಎಂ.ಎಂ.ಕಲಬುರ್ಗಿ ಅವರನ್ನು ಹತ್ಯೆಗೈದ ವ್ಯಕ್ತಿಗಳಿಗೇ ಸುಪಾರಿ ಕೊಡಲಾಗಿದೆ. ಹಂತಕರು ಕೇರಳದ ಮಹಮ್ಮದ್ ರಸೂಲ್ ಹಾಗೂ ಹಾಸನದ ಮುಸ್ತಾಫ ಅಲಿಖಾನ್‌ರಿಂದ ಸುಪಾರಿ ಪಡೆದಿದ್ದಾರೆ. ಹೀಗಾಗಿ ನಾಲ್ಕು ಜನಕ್ಕೆ ಪೊಲೀಸರು ರಕ್ಷಣೆ ನೀಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ’ ಎಂದರು.

‘ಕ್ರಮ ಕೈಗೊಳ್ಳುವೆವು’

‘ಲೇಖಕಿ ಬಿ.ಟಿ.ಲಲಿತಾ ನಾಯ್ಕ್ ಹಾಗೂ ಇತರ ಪ್ರಮುಖರಿಗೆ ಕೊಲೆ ಬೆದರಿಕೆ ಹಾಕಲಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

‘ಈ ಸಂಬಂಧ ದೂರು ದಾಖಲಾಗಿದೆ. ಇದರ ಬಗ್ಗೆ ಸಮಗ್ರ ತನಿಖೆ ನಡೆಸುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

₹12 ಲಕ್ಷ ಮೌಲ್ಯದ ಕದ್ದ ಚಿನ್ನ ವಶ

ಪ್ರಜಾವಾಣಿ ವಾರ್ತೆ

ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ

ಬೆಂಗಳೂರು: ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಪ್ರಯಾಣಿಕರ ಬ್ಯಾಗ್‌ಗಳಲ್ಲಿ ಚಿನ್ನಾಭರಣ ಕದಿಯುತ್ತಿದ್ದ ಆರೋಪಿಯನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

ಲಗ್ಗೆರೆಯ ಕಾವೇರಿ ನಗರದ ನಿವಾಸಿ ಸಿದ್ದಿಕ್ (30) ಬಂಧಿತ ಆರೋಪಿ.

ಮಾ.10ರ ರಾತ್ರಿ ಬಸ್ ನಿಲ್ದಾಣಕ್ಕೆ ಬಂದಿದ್ದ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ 25 ಗ್ರಾಂ ಚಿನ್ನವನ್ನು ಆರೋಪಿ ಕದ್ದಿದ್ದ. ಈ ಸಂಬಂಧ ಮಹಿಳೆ ಬ್ಯಾಟರಾಯನಪುರ ಪೊಲೀಸರಿಗೆ ದೂರು ನೀಡಿದ್ದರು.

‘ಈತ ಹೆಚ್ಚು ಸಮಯವನ್ನು ಬಸ್ ನಿಲ್ದಾಣದಲ್ಲೇ ಕಳೆಯುತ್ತಿದ್ದ. ಅಲ್ಲಿಗೆ ಬರುತ್ತಿದ್ದ ಪ್ರಯಾಣಿಕರ ಚಲನವಲನಗಳನ್ನು ಗಮನಿಸಿ, ಚಿನ್ನಾಭರಣ ಇರುತ್ತಿದ್ದ ಬ್ಯಾಗ್‌ಗಳನ್ನು ಪತ್ತೆ ಮಾಡುತ್ತಿದ್ದ. ಬಳಿಕ ಸಾರ್ವಜನಿಕರಿಗೆ ತಿಳಿಯದಂತೆ ಬ್ಯಾಗ್‌ನಿಂದ ಚಿನ್ನಾಭರಣ ಕದಿಯುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಯನ್ನು ವಿಚಾರಣೆ ನಡೆಸಿದಾಗ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ನಾಲ್ಕು ಕಳವು ಪ್ರಕರಣಗಳು ಪತ್ತೆಯಾಗಿವೆ. ಇದಕ್ಕೆ ಸಂಬಂಧಿಸಿದ ₹12 ಲಕ್ಷ ಬೆಲೆ ಬಾಳುವ 275 ಗ್ರಾಂ ಚಿನ್ನಾಭರಣಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಬಾಣಸಿಗರ ನಡುವೆ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಡುಗೆ ತಯಾರಿಸುವ ವಿಚಾರದಲ್ಲಿ ಬಾಣಸಿಗರಿಬ್ಬರ ನಡುವೆ ನಡೆದ ಜಗಳದಲ್ಲಿ ಒಬ್ಬ ಕೊಲೆಯಾಗಿರುವ ಘಟನೆ ಜೆ.ಪಿ.ನಗರ ಠಾಣಾ ವ್ಯಾಪ್ತಿಯ ವಾಲ್‌ಸ್ಟ್ರೀಟ್ ಪಬ್‌ನಲ್ಲಿ ನಡೆದಿದೆ.

ಪಶ್ಚಿಮ ಬಂಗಾಳದ ಸಾಗರ್ (22) ಮೃತಪಟ್ಟಿರುವ ಬಾಣಸಿಗ. ಮೌಸಿಕ್ ಚಾಕುವಿನಿಂದ ಇರಿದು ಪರಾರಿಯಾಗಿರುವ ಆರೋಪಿ.

‘ಸಾಗರ್ ಹಾಗೂ ಮೌಸಿಕ್ ಪಬ್‌ನಲ್ಲಿ ಶೆಫ್‌ಗಳಾಗಿ (ಬಾಣಸಿಗ) ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ಅಡುಗೆ ಮಾಡುವ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದಿತ್ತು’.

‘ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮೌಸಿಕ್ ಜತೆ ಸಾಗರ್ ಗಲಾಟೆ ಮಾಡಿದ್ದ. ಈ ವೇಳೆ ಕೋಪಗೊಂಡಿದ್ದ ಮೌಸಿಕ್, ಚಾಕುವಿನಿಂದ ಸಾಗರ್ ಅವರ ಹೊಟ್ಟೆ ಮತ್ತು ಎದೆಯ ಭಾಗಕ್ಕೆ ಇರಿದಿದ್ದ. ಗಾಯಗೊಂಡಿದ್ದ ಸಾಗರ್ ಅವರನ್ನು ಕೂಡಲೇ ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆ ಫಲಿಸದೆ ಮೃತಪಟ್ಟರು’ ಎಂದು ಮೂಲಗಳು ತಿಳಿಸಿವೆ.

ಸ್ನೇಹಿತರ ಗಲಾಟೆ ಸಾವಿನಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಬಿಡದಿ: ಹುಡುಗಿ ವಿಚಾರವಾಗಿ ನಡೆದ ಜಗಳ ಸ್ನೇಹಿತನ ಕೊಲೆಯೊಂದಿಗೆ ಅಂತ್ಯಗೊಂಡ ಘಟನೆ ಪಟ್ಟಣದಲ್ಲಿ ನಡೆದಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಶ್ರೀನಗರದ ಭರತ್ ಕುಮಾರ್(22) ಕೊಲೆಯಾದವರು. ಕೊಲೆ ಮಾಡಿದ ಆರೋಪಿ ಕುಮಾರ್(20)ನನ್ನು ಬಂಧಿಸಲಾಗಿದೆ.

ಭರತ್ ಕುಮಾರ್, ಪ್ರದೀಪ್, ಖುಷಿ, ಕುಮಾರ್ ಸೇರಿದಂತೆ ಸ್ನೇಹಿತರು ಪಾಂಡವಪುರ ಸಮೀಪ ಉಕ್ಕಡ ಮಾರಮ್ಮ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿಂದ ಬೆಂಗಳೂರಿಗೆ ವಾಪಸ್ ಬರುವಾಗ ಬಿಡದಿ ಸಮೀಪ ಕೆಂಚನಗುಪ್ಪೆ ಗೇಟ್ ಬಳಿ ಇರುವ ಎಸ್‌ಎಲ್‌ಎನ್ ಲಾಡ್ಜ್‌ನಲ್ಲಿ ಬೆಳಗಿನ ಜಾವ ಉಳಿದುಕೊಳ್ಳಲು ಹೋಗಿದ್ದಾರೆ. ಈ ವೇಳೆ ತಮ್ಮ ಜೊತೆಯಲ್ಲಿದ್ದ ಸ್ನೇಹಿತೆಯ ವಿಚಾರವಾಗಿ ಪ್ರದೀಪ್ ಕುಮಾರ್ ಮತ್ತು ಭರತ್ ಕುಮಾರ್ ನಡುವೆ ವಾಗ್ವಾದ ನಡೆದಿದೆ. ಆ ವೇಳೆ ಕುಮಾರ್ ಎಂಬಾತ ಭರತ್‌ಗೆ ಚಾಕುವಿನಿಂದ ಚುಚ್ಚಿದ್ದಾನೆ. ಸ್ನೇಹಿತರು ಭರತ್‌ನನ್ನು ರಾಮನಗರ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಭರತ್‌ನ ಶವವನ್ನು ಬೆಂಗಳೂರು–ಮೈಸೂರು ಹೆದ್ದಾರಿಯ ಮಾಯಗಾನಹಳ್ಳಿ ಸಮೀಪದ ರಸ್ತೆ ಪಕ್ಕದಲ್ಲಿ ಎಸೆದು ಹೋಗಿದ್ದಾರೆ. ವಿಚಾರಣೆ ವೇಳೆ ಕೊಲೆ ಮಾಡಿರುವುದು ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಿಎಸ್‌ವೈ ಬಿಟ್ಟರೆ ಬಿಜೆಪಿ ಇಲ್ಲ’

ಪ್ರಜಾವಾಣಿ ವಾರ್ತೆ

ಮುನಿಯಪ್ಪ

ಮೈಸೂರು: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಿಸಿದರೆ ಬಿಜೆಪಿಗೆ ಭವಿಷ್ಯವಿಲ್ಲ’ ಎಂದು ಕಾಂಗ್ರೆಸ್ ಮುಖಂಡ ಕೆ.ಎಚ್.ಮುನಿಯಪ್ಪ ಭಾನುವಾರ ಇಲ್ಲಿ ಹೇಳಿದರು.

ಪಂಚ ರಾಜ್ಯಗಳ ಚುನಾವಣೆ ಬಳಿಕ ಯಡಿಯೂರಪ್ಪ ಬದಲಾವಣೆ ಆಗಲಿದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಯಡಿಯೂರಪ್ಪ ಹೊರತುಪಡಿಸಿದ ಬಿಜೆಪಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಬಿಜೆಪಿಗೆ ಅಸ್ತಿತ್ವವೂ ಇರಲ್ಲ’ ಎಂದರು.

‘ಜನಸಂಖ್ಯೆ ಆಧಾರದಲ್ಲಿ ಒಳ ಮೀಸಲಾತಿ ನಿಗದಿಯಾಗಬೇಕು. ಮೀಸಲಾತಿಯ ಹೋರಾಟ ಇದೀಗ ರಾಜಕೀಯ ತಿರುವು ಪಡೆದಿದೆ. ಯಡಿಯೂರಪ್ಪ ಬಸವ ಅನುಯಾಯಿ ಆಗಿದ್ದರೆ, ಮೊದಲು ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿ ಹಾಗೂ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿ, ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಡಲಿ’ ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಒಬ್ಬರೇ ಅಲ್ಲ: ‘ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ರೇಸ್‌ನಲ್ಲಿ ಸಿದ್ದರಾಮಯ್ಯ ಒಬ್ಬರೇ ಇಲ್ಲ. ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ, ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವರಿದ್ದಾರೆ. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ’ ಎಂದು ತಿಳಿಸಿದರು.

‘ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಬಿಜೆಪಿಯವರು ಕೋವಿಡ್‌ನಲ್ಲೂ ಭ್ರಷ್ಟಾಚಾರದ ಮೂಲಕ ಲೂಟಿ ಹೊಡೆದ ದುಡ್ಡು ಚೆಲ್ಲಿ ಗೆಲುವಿಗೆ ಮುಂದಾಗಲಿದ್ದಾರೆ. ಜನರು ವಾಸ್ತವ ಅರ್ಥ ಮಾಡಿಕೊಂಡು ವೋಟ್ ಹಾಕಬೇಕು’ ಎಂದರು.

‘ಸಚಿವ ಸ್ಥಾನ ದೊರೆಯದೇ ವಿಶ್ವನಾಥ್ ಅಸಮಾಧಾನ’

ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಬಿಜೆಪಿ ಸೇರಿದ್ದರೂ ಸಚಿವ ಸ್ಥಾನ ದೊರೆಯದ ಕಾರಣ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಅಸಮಾಧಾನ ಹೊರಹಾಕಿರಬಹುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಬಿಜೆಪಿ ತಪ್ಪು ಮಾಡಿದ್ದರೆ ತಿಳಿಸಲಿ. ತಿದ್ದಿಕೊಳ್ಳಲು ಸಿದ್ಧರಿದ್ದೇವೆ. ಅವರು ಹಿಂದೆ ಇದ್ದ ಕಾಂಗ್ರೆಸ್, ಜೆಡಿಎಸ್ ಸರಿ ಇದ್ದಿದ್ದರೆ ಆ ಪಕ್ಷಗಳನ್ನು ಏಕೆ ತೊರೆಯುತ್ತಿದ್ದರು? ಬಿಜೆಪಿ ಏಕೆ ಆಯ್ಕೆ ಮಾಡಿಕೊಂಡರು? ಪತ್ರಿಕಾಗೋಷ್ಠಿ ಕರೆದು ಯಾವ ಪಕ್ಷಗಳು ಸರಿ ಇವೆ ಎಂದು ತಿಳಿಸಲಿ’ ಎಂದು ಕುಟುಕಿದರು.

‘ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಅವರ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡಲಾಗಿದೆ ಎಂದು ವಿಶ್ವನಾಥ್ ಆಕ್ಷೇಪಿಸಿದ್ದಾರೆ. ಅನುದಾನ ನೀಡುವುದು ವೈಯಕ್ತಿಕವಾಗಿ ಅಲ್ಲ. ವಿರೋಧ ಪಕ್ಷದ ನಾಯಕರ ಕ್ಷೇತ್ರಕ್ಕೆ ಅನುದಾನ ನೀಡಿದರೆ ಅದು ತಲುಪುವುದು ಸಾರ್ವಜನಿಕರಿಗೆ. ಈ ಸೂಕ್ಷ್ಮಗಳು ಅರ್ಥವಾಗಬೇಕು’ ಎಂದರು.

ನಾಯಿ ಬೆನ್ನಟ್ಟಿ ಕೊಟ್ಟಿಗೆಯಲ್ಲಿ ಬಂದಿಯಾದ ಚಿರತೆ

ಬಹ್ಮಾವರ (ಉಡುಪಿ ಜಿಲ್ಲೆ): ಇಲ್ಲಿನ ನೈಲಾಡಿಯ ಆಗ್ನೇಶ್ ಶೆಟ್ಟಿ ಅವರ ನಾಯಿಯನ್ನು ಬೆನ್ನಟ್ಟಿ ಬಂದ ಚಿರತೆಯೊಂದು ಮನೆಯ ಕೊಟ್ಟಿಗೆಯಲ್ಲಿ ಬಂದಿಯಾಗಿದ್ದು, ಸೆರೆಹಿಡಿದ ಅರಣ್ಯ ಇಲಾಖೆ ಕಾಡಿಗೆ ಬಿಟ್ಟಿದೆ.

ಭಾನುವಾರ ನಸುಕಿನಲ್ಲಿ ಮನೆ ಮುಂದಿದ್ದ ನಾಯಿ ಮೇಲೆ ಚಿರತೆ ದಾಳಿ ಮಾಡಿದೆ. ಹೆದರಿದ ನಾಯಿಯು ಕೊಟ್ಟಿಗೆಯೊಳಗೆ ನುಗ್ಗಿದೆ. ನಾಯಿಯ ಜತೆ ಚಿರತೆಯೂ ಕೊಟ್ಟಿಗೆ ಸೇರಿದೆ.

ಹೊನ್ನಾಳಿಯಲ್ಲಿ 30 ಗಜ ದೂರದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ

ಬೆಂಗಳೂರು ತಂಡಕ್ಕೆ ಎಂಪಿಆರ್ ಟ್ರೋಫಿ

ಪ್ರಜಾವಾಣಿ ವಾರ್ತೆ

ಹೊನ್ನಾಳಿಯಲ್ಲಿ ಹಮ್ಮಿಕೊಂಡಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿದ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು.

ಹೊನ್ನಾಳಿ: ಯುವಕರು ದುಶ್ಚಟಗಳಿಗೆ ದಾಸರಾಗದೆ ಕ್ರೀಡೆಗಳತ್ತ ಒಲುವು ತೋರಬೇಕು. ಆಗ ದೇಹ ಮತ್ತು ಮನಸ್ಸು ಸದೃಢವಾಗಿರಲು ಸಾಧ್ಯ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಪಟ್ಟಣದ ಎಲ್‌ಐಸಿ ಕಚೇರಿ ಹಿಂಭಾಗದ ಮೈದಾನದಲ್ಲಿ ಎಂ.ಪಿ. ರೇಣುಕಾಚಾರ್ಯ ಅವರ ಅಭಿಮಾನಿಗಳ ಸಂಘ ಮತ್ತು ರಿಯಲ್ ಫೈಟರ್ಸ್ ಹೊಸಕೇರಿ ಯುವಕರು ಏರ್ಪಡಿಸಿದ್ದ 30 ಗಜ ದೂರದ (4 ಓವರ್ ಸೀಮಿತದ) ಹೊನಲು ಬೆಳಕಿನ ಎಂಪಿಆರ್ ಟ್ರೋಫಿ 2021 ಸಾಲಿನ ಕ್ರಿಕೆಟ್ ಪಂದ್ಯಾವಳಿಯನ್ನು ಭಾನುವಾರ ರಾತ್ರಿ ಉದ್ಘಾಟಿಸಿ ಅವರು ಮಾತನಾಡಿದರು.

ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ 24 ತಂಡಗಳು ಭಾಗವಹಿಸಿದ್ದವು. ಬೆಂಗಳೂರಿನ ಅನ್‌ಕ್ರೇಟಿಬಲ್ ತಂಡ ಮೊದಲ ಬಹುಮಾನದೊಂದಿಗೆ ಆಕರ್ಷಕ ಟ್ರೋಫಿಯ ಜೊತೆಗೆ ₹ 50 ನಗದು ಪಡೆದುಕೊಂಡಿತು.

ಹರಿಹರ ತಾಲ್ಲೂಕಿನ ಮಲೆಬೆನ್ನೂರಿನ ಸಿಸಿ ಟೀಮ್ ಆಕರ್ಷಕ ಟ್ರೋಫಿಯೊಂದಿಗೆ ₹ 25 ಸಾವಿರ ನಗದು ಪಡೆದುಕೊಂಡಿತು.

ಮೂರನೇ ಬಹುಮಾನವನ್ನು ಬೆಂಗಳೂರಿನ ಮೈತ್ರಿ ಟೀಮ್ ಪಡೆದುಕೊಂಡಿತು.

“ನೀವು ಕಂಪ್ಯೂಟರ್ ರಿಸೆಲ್ಲರ್ ಆಗಿದ್ದಲ್ಲಿ ನಿಮಗೆ ಇಲ್ಲಿ ಒಂದು ಸರಿಯಾದ ಉದ್ಯಮಾವಕಾಶ ಕಾದಿದೆ.

ಭಾರತದ ಮೊದಲ Microsoft Authorised Refurbisher (MAR) ಗಳಲ್ಲಿ ಒಬ್ಬರಾಗಿರುವ **Renew IT** ಮೂಲಕ Third Party Refurbisher (TPR) ಕಾರ್ಯಕ್ರಮವನ್ನು ಸೇರಿಕೊಳ್ಳಿ. ನಿಮ್ಮ ಗ್ರಾಹಕರಿಗೆ ಅಧಿಕೃತವಾದ “Out of-the box” ಅನುಭವವನ್ನು ನೀಡಿ ಮತ್ತು ಮಾಲ್‌ವೇರ್ ತೊಂದರೆ ಅಥವಾ ಬ್ರೇಕ್‌ಡೌನ್‌ಗಳು ಇನ್ನಿಲ್ಲದಂತೆ ಮಾಡಿ.

ನೀವು ಮಾರಾಟ ಮಾಡುವ ಪ್ರತಿ Refurbished Computer ಜೊತೆಗೆ ನೀವು ಅಧಿಕೃತ Windows10 ಅನ್ನು ರಿಯಾಯಿತಿಯ ದರಗಳಲ್ಲಿ ಪೂರೈಸಬಹುದಲ್ಲದೆ, ಇದು ಸಂಪೂರ್ಣ ಕಾರ್ಯಾತ್ಮಕ ಪರಿಹಾರವನ್ನು ನೀಡುತ್ತದೆ.

ನಿಮ್ಮ ಎಲ್ಲಾ ಗ್ರಾಹಕರಿಗೆ Windows 10ರ ಭವಿಷ್ಯದ ಬಿಡುಗಡೆಗಳಿಗೆ ಸಂಪೂರ್ಣ upgrade ಮಾಡಿಕೊಳ್ಳುವ ಅವಕಾಶ ಲಭ್ಯವಿರುತ್ತದೆ.

ReNew Affordable Computers | Microsoft AUTHORIZED Refurbisher

For more information, please
Call 96111 09383
email to **sales@renewit.in**
or do visit our website **www.renewit.in**

Refurbished desktops ಮತ್ತು laptops ಮೇಲೆ ಉತ್ಸಾಹಪೂರ್ಣ ಕೊಡುಗೆಗಳನ್ನು ಪಡೆದುಕೊಳ್ಳಿರಿ.

ರೈತ ಮಹಾ ಪಂಚಾಯತ್‌ನಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ಅಧ್ಯಕ್ಷ ರಾಕೇಶ್ ಟಿಕಾಯತ್ ಹೇಳಿಕೆ

ಟ್ರ್ಯಾಕ್ಟರ್‌ಗಳೇ ರೈತರ ಶಸ್ತ್ರಾಸ್ತ್ರವಾಗಲಿ

ಪ್ರಜಾವಾಣಿ ವಾರ್ತೆ

ಹಾವೇರಿ: 'ಅನ್ನದಾತರ ಬಳಿ ಇರುವ ಟ್ರ್ಯಾಕ್ಟರ್‌ಗಳೇ ಶಸ್ತ್ರಾಸ್ತ್ರಗಳಾಗಬೇಕು. ರೈತರ ಹೋರಾಟಕ್ಕೆ ಅಡ್ಡಿಯಾಗುವ ಬ್ಯಾರಿಕೇಡ್ ಹಾಗೂ ತಂತಿಬೇಲಿ ತೆರವುಗೊಳಿಸಲು ಕಾರ್ಯಕ್ರಮ ರೂಪಿಸಬೇಕಿದೆ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಅಧ್ಯಕ್ಷ ರಾಕೇಶ್ ಟಿಕಾಯತ್ ಹೇಳಿದರು.

ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಸಂಯುಕ್ತ ಕಿಸಾನ್ ಮೋರ್ಚಾ, ಐಕ್ಯ ಹೋರಾಟ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ರೈತ ಮಹಾ ಪಂಚಾಯತ್' ಉದ್ಘಾಟಿಸಿ ಅವರು ಮಾತನಾಡಿದರು.

'2021 ಆಂದೋಲನದ ವರ್ಷವಾಗಿದ್ದು, ನಮ್ಮ ಬೆಳೆ ಮತ್ತು ತುಂಡು ಭೂಮಿಯನ್ನು ರಕ್ಷಿಸಿಕೊಳ್ಳಲು ಹೋರಾಟವನ್ನು ರೂಪಿಸಬೇಕಿದೆ' ಎಂದು ಸಲಹೆ ನೀಡಿದರು.

ಬಿಎಸ್‌ಎನ್‌ಎಲ್ ಉಳಿಸಿ: 'ಕೇಂದ್ರ ಸರ್ಕಾರ, ಕಂಪನಿಗಳ ಕೈಗೊಂಬೆಯಾಗಿದ್ದು, ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ. 26 ಸರ್ಕಾರಿ ಉದ್ದಿಮೆಗಳು ಈಗಾಗಲೇ ಖಾಸಗೀಕರಣಗೊಂಡಿವೆ. ಬಿಎಸ್‌ಎನ್‌ಎಲ್ ಕೂಡ ಸಾಯುವ ಸ್ಥಿತಿಯಲ್ಲಿದೆ. ಅಂಬಾನಿಯ ಜಿಯೋ ಬೇಡ; ಬಿಎಸ್‌ಎನ್‌ಎಲ್ ಬೇಕು, ಕೋಕಕೋಲಾ ಬೇಡ; ಎಳನೀರು ಬೇಕು ಎಂಬ ಘೋಷಣೆಗಳು ಮೊಳಗಬೇಕಿದೆ' ಎಂದರು.

'ಎನ್.ಡಿ.ಸುಂದರೇಶ್ ಮತ್ತು ಪ್ರೊ. ನಂಜುಂಡಸ್ವಾಮಿ ಅವರು ಚಳವಳಿ ರೂಪಿಸಿದ ನೆಲ ಕರ್ನಾಟಕದಿಂದ ತುಂಬಾ ನಿರೀಕ್ಷೆಯಿದೆ. ಚಳವಳಿಯನ್ನು ಗಟ್ಟಿಗೊಳಿಸಿ, ನಿಮ್ಮ ಬದುಕನ್ನು ರಕ್ಷಿಸಿಕೊಳ್ಳೋಣ' ಎಂದರು.

'ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ನರೇಂದ್ರ ಮೋದಿ ಅವರು ಎಂ.ಎಸ್.ಪಿ ಅನ್ನು ಕಾನೂನುಬದ್ಧಗೊಳಿಸಬೇಕು ಎಂದು ಒತ್ತಾಯಿಸಿದವರೇ ಇಂದು ಜಾರಿಗೊಳಿಸಿದ್ದಾರೆ' ಎಂದು ರಾಷ್ಟ್ರೀಯ ಸಂಯುಕ್ತ ಕಿಸಾನ್ ಮೋರ್ಚಾದ ಕಾರ್ಯದರ್ಶಿ ಯುದ್ಧವೀರ ಸಿಂಗ್ ಕಿಡಿಕಾರಿದರು.

ನಿಮ್ಮ ಭಾರತ ಮಾತೆ ಯಾರು?: ರೈತ ನಾಯಕ ಬಾಬುಗೌಡ ಪಾಟೀಲ ಮಾತನಾಡಿ, 'ರೈತ ಮಹಿಳೆ ನಮ್ಮೆಲ್ಲರ ಭಾರತ ಮಾತೆ. ಮೋದಿ ಅಮಿತ್ ಶಾ ಅವರೇ ಹೇಳಿ, ಯಾವಾಗಲೂ ಭಾರತ್ ಮಾತಾಕೀ ಜೈ ಅಂತೀರಲ್ಲ. ನಿಮ್ಮ ಭಾರತ ಮಾತೆ ಯಾರು? ಪ್ರಜ್ಞಾಸಿಂಗ್ ಠಾಕೂರ್ ಅಂಥವರು ನಿಮ್ಮ ಭಾರತ ಮಾತೆಯಾ..' ಎಂದು ಅವರು ಪ್ರಶ್ನಿಸಿದರು.

ಸಮಾವೇಶದಲ್ಲಿ ಚುಕ್ಕಿ ನಂಜುಂಡಸ್ವಾಮಿ, ಕುರುಬೂರು ಶಾಂತಕುಮಾರ್, ಸಿದ್ದನಗೌಡ ಪಾಟೀಲ, ನಂದಿನಿ ಜಯರಾಂ ಮುಂತಾದವರು ಇದ್ದರು.

ಹಾವೇರಿಯಲ್ಲಿ ಭಾನುವಾರ ನಡೆದ 'ರೈತ ಮಹಾ ಪಂಚಾಯತ್' ಸಮಾವೇಶದಲ್ಲಿ ರಾಕೇಶ್ ಟಿಕಾಯತ್ ಅವರಿಗೆ ಜಿಲ್ಲಾ ರೈತ ಸಂಘದಿಂದ ನೇಗಿಲು ಮತ್ತು ಸಂಗೊಳ್ಳಿ ರಾಯಣ್ಣನ ಮೂರ್ತಿ ನೀಡಿ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

'ಧರ್ಮಗುರುಗಳು ಯಾರ ಪರ?'

ರೈತ ನಾಯಕ ಕೆ.ಟಿ.ಗಂಗಾಧರ್ ಮಾತನಾಡಿ, 'ರಾಜ್ಯದಲ್ಲಿ ಪಂಡಿತಾರಾಧ್ಯ ಸ್ವಾಮೀಜಿ ಬಿಟ್ಟರೆ ಬೇರೆ ಯಾವ ಸ್ವಾಮೀಜಿಗಳೂ ರೈತರ ಪರ ಬಾಯಿ ಬಿಡುತ್ತಿಲ್ಲ. ಹಾಗಾದರೆ ವಿವಿಧ ಮಠಾಧೀಶರು, ಧರ್ಮಗುರುಗಳು ಯಾರ ಪರ? ಬಿ.ಎಸ್.ಯಡಿಯೂರಪ್ಪನವರೇ 70ರ ದಶಕದ ಹೋರಾಟವನ್ನು ಮರೆತುಬಿಟ್ಟಿರಾ?, ಕುರ್ಚಿ ಆಸೆಗಾಗಿ ರೈತರನ್ನೇ ಕಡೆಗಣಿಸಿದ್ದೀರಲ್ಲ, ಅನ್ಯಾಯ ಆಗಿದೆ ಅಂತ ಕೇಳಿದರೆ ದೇಶದ್ರೋಹಿಗಳು, ಸರ್ಕಾರವನ್ನು ಹೊಗಳಿದರೆ ದೇಶಭಕ್ತರು ಎಂಬ ಹಣೆಪಟ್ಟಿ ಸರಿಯೇ?' ಎಂದು ವಾಗ್ದಾಳಿ ನಡೆಸಿದರು.

'ನಿಮ್ಮ ರಾಮ ಕೂಡ ಕಾಪಾಡಲಾರ'

'ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ. ನಿಮ್ಮ ರಾಜಕೀಯ ಅಂತ್ಯವಾಗಲಿದೆ. ಅನ್ನದಾತರು ನಿಮ್ಮನ್ನು ಸೋಲಿಸುವ ಮನಸ್ಸು ಮಾಡಿದರೆ, ನಿಮ್ಮ ರಾಮ ಕೂಡ ನಿಮ್ಮನ್ನು ಕಾಪಾಡಲಾರ' ಎಂದು ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ಈ ಮಾತಿಗೆ ದನಿಗೂಡಿಸಿದ ಯುದ್ಧವೀರ ಸಿಂಗ್, 'ರಾಮನ ದರ್ಶನಕ್ಕೆ ಮಂದಿರಕ್ಕೆ ಹೋಗುವ ಅಗತ್ಯವಿಲ್ಲ. ಜನರ ಮನದಲ್ಲಿ, ಹೃದಯದಲ್ಲಿ, ಅನ್ನ ಕೊಡುವ ಜಮೀನಿನಲ್ಲಿ ರಾಮ ಇದ್ದಾನೆ. ವಿಕಾಸ, ನಿರುದ್ಯೋಗ ಬಗ್ಗೆ ಮಾತನಾಡಬೇಕಾದವರು ಧರ್ಮದ ಅಫೀಮು ಮಾರುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕೋವಿಡ್ ಎರಡನೇ ಅಲೆ: ಭಯ ಏಕೆ? ಇರಲಿ ಎಚ್ಚರಿಕೆ
ಕುರಿತ ಸಂವಾದ
ಪಾಲ್ಗೊಳ್ಳುವವರು
ನೀವೂ ಪಾಲ್ಗೊಳ್ಳಿ

ಡಾ.ಸಿ.ಎನ್. ಮಂಜುನಾಥ್
ನಿರ್ದೇಶಕ, ಜಯದೇವ ಹೃದ್ರೋಗ ಸಂಸ್ಥೆ ಮತ್ತು ಕೋವಿಡ್ ತಜ್ಞರ ಸಮಿತಿ ಸದಸ್ಯ

ಡಾ.ಕೆ.ವಿ. ತ್ರಿಲೋಕ ಚಂದ್ರ
ಆಯುಕ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂದು ಮಧ್ಯಾಹ್ನ 2 ರಿಂದ 3 ರವರೆಗೆ
fb.com/prajavani.net

ಪ್ರಜಾವಾಣಿ ಗ್ರೀನ್ ಟಾಕ್
ನೀರಿನ ಮೌಲ್ಯ ತಿಳಿಯದಿದ್ದರೆ ಕಾದಿದೆ ಗಂಡಾಂತರ
ಇಂದು ವಿಶ್ವ ಜಲ ದಿನ
ಜಲಮೂಲಗಳ ಸುಸ್ಥಿರ ನಿರ್ವಹಣೆ ಸಾಧಿಸುವುದೇ ವಿಶ್ವ ಜಲದಿನದ ಮಂತ್ರ. ನೀರು ಬೇಕು ಎಂದು ಅಧಿಕಾರದಿಂದ ಕೇಳುವವರು, ಅದು ಸಿಕ್ಕಾಗ ಅಷ್ಟೇ ಜವಾಬ್ದಾರಿಯಿಂದ ಬಳಸಬೇಕು. ಇತರರಿಗೆ ಅದನ್ನು ತಿಳಿಹೇಳಬೇಕು. ಆಗ ಮಾತ್ರ ವಿಶ್ವ ಜಲದಿನಕ್ಕೆ ಒಂದರ್ಥ.
QR ಕೋಡ್ ಸ್ಕ್ಯಾನ್ ಮಾಡಿ

₹ 3.62 ಲಕ್ಷ ಮೌಲ್ಯದ ಸ್ಫೋಟಕ ವಶ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ಕಾಡಜ್ಜಿ ಗ್ರಾಮದ ದುರ್ಗಾದೇವಿ ಎಕ್ಸ್‌ಪ್ಲೋಸಿವ್ ಮ್ಯಾಗಜಿನ್ ಬಳಿ ಸ್ಫೋಟಕಗಳನ್ನು ಸಾಗಿಸುತ್ತಿದ್ದ ವೇಳೆ ದಾಳಿ ನಡೆಸಿದ ಪೊಲೀಸರು ₹ 3.62 ಲಕ್ಷ ಮೌಲ್ಯದ ಸ್ಫೋಟಕಗಳನ್ನು ವಶಪಡಿಸಿಕೊಂಡು, ಈ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

ಬಿ.ಎಸ್. ವಿಕ್ರಮ್, ನಾಗರಾಜ್, ವಿಜಯಕುಮಾರ್ ಬಂಧಿತರು. ಆರೋಪಿಗಳು ಬೊಲೆರೊ ಪಿಕ್‌ಅಪ್ ವಾಹನದಲ್ಲಿ ಸ್ಫೋಟಕಗಳನ್ನು ತುಂಬಿಕೊಂಡು ಹೋಗುತ್ತಿದ್ದಾಗ ಡಿವೈಎಸ್‌ಪಿ ನರಸಿಂಹ ವಿ.ತಾಮ್ರಧ್ವಜ ನೇತೃತ್ವದಲ್ಲಿ ಎಎಸ್‌ಸಿ ತಂಡ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದೆ.

ಬಂಧಿತರಿಂದ ಐಡಿಯಲ್ ಪೌಡರ್–90 ಎಕ್ಸ್‌ಪ್ಲೋಸಿವ್ ಜಿಲೆಟಿನ್‌ಗಳು, 7400 ಎಲೆಕ್ಟ್ರಿಕ್ ಡಿಟೋನೇಟರ್, ಪೌಡರ್ ಕಾರ್ಡ್ ಸೇಫ್ಟಿ ಫ್ಯೂಜ್, 50 ಕೆ.ಜಿ.ಯ ಆಪ್ಟೆಕ್ಸ್ ಅಮೋನಿಯಂ ನೈಟ್ರೇಟ್ ಪೌಡರ್ ತುಂಬಿದ 5 ಚೀಲಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗೋದಾಮಿನ ಮಾಲೀಕ ಷಣ್ಮುಖಪ್ಪ ಹಾಗೂ ಮುಜಿಬ್ ಅವರ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಂಸತ್ ಚುನಾವಣೆವರೆಗೂ ಹೋರಾಟ'

ಒಂದನೇ ಪುಟದಿಂದ...

ಅಭಿವೃದ್ಧಿಯ ಯಾವ ವಿಷಯಗಳೂ ಅವರ ಬಳಿ ಇಲ್ಲ. ಕರುಣೆ ಕಾಣುತ್ತಿಲ್ಲ. ಧಾರ್ಮಿಕ ಅಂಜೆಂಡಾ ಇಟ್ಟುಕೊಂಡು ಸರ್ಕಾರ ನಡೆಸುತ್ತಿದ್ದಾರೆ. ದೇಶಭಕ್ತಿ, ಧರ್ಮ ಮುಂದಿಟ್ಟುಕೊಂಡು ಸಾರ್ವಜನಿಕರ ಗಮನ ಬೇರೆ ಕಡೆ ತಿರುಗಿಸುತ್ತಾ ಸಾಗುತ್ತಿದ್ದಾರೆ.

● **ನಿಮ್ಮ ಹೋರಾಟವನ್ನು ಮೋದಿ ವಿರುದ್ಧದ ಹೋರಾಟ ಎಂದು ಬಿಂಬಿಸಲಾಗುತ್ತಿದೆಯಲ್ಲ?**

–ಲೇಖನಿ ಮತ್ತು ಕ್ಯಾಮೆರಾಗಳನ್ನು ಮೋದಿ ಬಂದೂಕಿನ ತುದಿಯ ಮೇಲೆ ನಿಯಂತ್ರಿಸುತ್ತಿದ್ದಾರೆ. ಅವರ ವಿರುದ್ಧ ಸುದ್ದಿ ಪ್ರಸಾರ ಮಾಡುವ ಮಾಧ್ಯಮಗಳನ್ನು ಬೇರೆ ಬೇರೆ ಪ್ರಕರಣಗಳಲ್ಲಿ ಸಿಲುಕಿಸುವ ಪ್ರಯತ್ನ ನಡೆದಿದೆ. ಹಾಗಾಗಿ, ಬಹುತೇಕ ಮಾಧ್ಯಮಗಳು ಸಮಸ್ಯೆ ಮೈಮೇಲೆ ಎಳೆದುಕೊಳ್ಳಲು ಸಿದ್ಧರಿಲ್ಲ. ವಾಸ್ತವದಲ್ಲಿ ಈ ಹೋರಾಟ ಮೋದಿಯ ವಿರುದ್ಧ ಅಲ್ಲ. ಅವರ ಧೋರಣೆ, ಸರ್ಕಾರದ ನಿರ್ಧಾರಗಳ ವಿರುದ್ಧ. ದೇಶದ ಮುಖ್ಯಸ್ಥರ ನಡೆ, ಕೇಂದ್ರ ಸರ್ಕಾರದ ನೀತಿ ವಿರುದ್ಧ ಮಾತನಾಡಿದರೆ ದೇಶದ್ರೋಹಿಗಳು ಎಂದು ಬಿಂಬಿಸಲಾಗುತ್ತಿದೆ.

● **ರೈತ ಚಳವಳಿಯ ಸ್ವರೂಪ ಬದಲಾಗುತ್ತಿದೆಯಲ್ಲ?**

–ನಾವು ಆರಂಭದಲ್ಲಿ ರೈತರಿಗೆ ಮಾರಕವಾದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಗಮನ ಕೇಂದ್ರೀಕರಿಸಿದ್ದೆವು. ಜತೆಗೆ, ಗ್ರಾಹಕರ ಸ್ಥಾನದಲ್ಲೂ ನಿಂತು ಯೋಚಿಸಿದ್ದೆವು. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ದೊರಕಬೇಕು. ಎಂಎಸ್‌ಪಿ ಕಾಯ್ದೆಯಾಗಬೇಕು ಎನ್ನುವ ಬೇಡಿಕೆ ಸೇರಿತು. ಬ್ಯಾಂಕ್ ವಿಲೀನ, ಜಿಎಸ್‌ಟಿ ಬವಣೆ, ಸೇವಾವಲಯ, ಎಲ್‌ಐಸಿ ನೀತಿಗಳಿಂದ ಅಲ್ಲಿನ ಉದ್ಯೋಗಿಗಳು ಹೋರಾಟಕ್ಕೆ ಸಾಥ್ ನೀಡಿದ್ದಾರೆ. ಬೆಲೆ ಏರಿಕೆ ಪರಿಣಾಮ ಸಾಮಾನ್ಯ ಜನರೂ ಚಳವಳಿಯ ಪ್ರವಾಹದಲ್ಲಿ ಸೇರುತ್ತಿದ್ದಾರೆ. ರೈತ ಚಳವಳಿಯ ಸ್ವರೂಪವೂ ವಿಸ್ತಾರವಾಗುತ್ತಿದೆ.

● **ಕೃಷಿ ಕಾಯ್ದೆಗಳ ವಿರುದ್ಧ ದಕ್ಷಿಣದವರ ಪ್ರತಿಕ್ರಿಯೆ ವಿಳಂಬವಾಯಿತಲ್ಲ?**

–ಹಾಗೇನೂ ಇಲ್ಲ. ಇಂದಿರಾಗಾಂಧಿ ಧೋರಣೆ ವಿರುದ್ಧ ಜಯಪ್ರಕಾಶ್ ನಾರಾಯಣ್ ಆರಂಭಿಸಿದ ಹೋರಾಟ ರಾಷ್ಟ್ರೀಯ ಸ್ವರೂಪ ಪಡೆಯಿತು. ಪ್ರತಿ ಚಳವಳಿಗೂ ಎಲ್ಲೋ ಒಂದು ಕಡೆ ನಾಯಕತ್ವ ದೊರೆತು ನಂತರ ಇತರೆಡೆ ಹಬ್ಬುತ್ತದೆ. ಈಗಲೂ ಅದೇ ಆಗುತ್ತಿದೆ.

● **ರಾಜ್ಯಮಟ್ಟದಲ್ಲಿ ವಿಸ್ತರಣೆಯ ಸ್ವರೂಪವೇನು? ರೂಪುರೇಷೆ ಹೇಗಿರುತ್ತದೆ?**

–ಪಂಜಾಬ್, ಹರಿಯಾಣ, ಉತ್ತರ ಪ್ರದೇಶದಲ್ಲಿ ಮೊದಲು ಹೋರಾಟ ಆರಂಭಿಸಿದೆವು. ಈಗ ದೆಹಲಿ ರಸ್ತೆಗಳನ್ನು ಬಂದ್ ಮಾಡಿದ್ದೇವೆ. ಕರ್ನಾಟಕ ಸೇರಿ ಇತರೆ ರಾಜ್ಯಗಳಿಗೂ ಹಬ್ಬುತ್ತಿದೆ. ಅಲ್ಲಿಯಂತೆ ಎಲ್ಲ ರಾಜ್ಯಗಳ ರಾಜಧಾನಿಗಳಿಗೂ ರೈತರು ದಿಗ್ಬಂಧನ ಹಾಕಲಿದ್ದಾರೆ.

● **ಕೋವಿಡ್ ಸನ್ನಿವೇಶ ಹೋರಾಟದ ಮೇಲೆ ಪರಿಣಾಮ ಬೀರುವುದಿಲ್ಲವೇ?**

–ಇದುವರೆಗೂ ಹೋರಾಟನಿರತ ಒಬ್ಬ ರೈತರಲ್ಲೂ ಕೋವಿಡ್ ಕಾಣಿಸಿಲ್ಲ. ಅಲ್ಲದೇ, ನಿಯಮ ಮಾಡುವ ಬಿಜೆಪಿ ಪಶ್ಚಿಮ ಬಂಗಾಳದಲ್ಲಿ ಆಯೋಜಿಸುತ್ತಿರುವ ರ್‍ಯಾಲಿ, ಸಭೆಗಳಲ್ಲಿ ನಿಯಮ ಪಾಲಿಸುತ್ತಿದೆಯೇ? ನಾವು ನಮ್ಮ ಕೆಲಸ ಮಾಡುತ್ತೇವೆ. ಅವರು ಅವರ ಕೆಲಸ ಮಾಡಲಿ.

● **ಅಸಲಿ ಹೋರಾಟಗಾರರನ್ನು ಒಳಗೊಂಡ ನಿರ್ದಿಷ್ಟ ಒತ್ತಡ ಸಮುದಾಯವನ್ನು ಸೃಷ್ಟಿಸುವುದು ಹೇಗೆ?**

–ರೈತರಿಗೆ ಮಾರಕವಾದ ಕಾಯಿದೆಗಳು ಜಾರಿಯಾಗುತ್ತಿದ್ದಂತೆ ಏಳು ಜನ ನಾಯಕರು ಸೇರಿ ಹೋರಾಟ ಕಟ್ಟಿದೆವು. ಈಗ 40 ಜನ ಪಂಚರ ರೀತಿ ನಿರ್ವಹಣೆ ಮಾಡುತ್ತಿದ್ದೇವೆ. ಸತ್ಯವನ್ನಷ್ಟೆ ಮಾತನಾಡುತ್ತೇವೆ. ಸಂಯಮ ಕಳೆದುಕೊಂಡಿಲ್ಲ. ಭರವಸೆ ಬಿಟ್ಟುಕೊಟ್ಟಿಲ್ಲ. ಜನರ ನಂಬಿಕೆ ಗಟ್ಟಿ ಮಾಡಿದ್ದೇವೆ. ಸಮುದಾಯ ನಮ್ಮ ಜತೆಗೆ ಹೆಜ್ಜೆ ಹಾಕುತ್ತಿದೆ.

ದೊಡ್ಡಪ್ಪನ ಮಗನಿಂದಲೇ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ತಾಲ್ಲೂಕಿನ ಗ್ರಾಮವೊಂದರಲ್ಲಿ 15 ವರ್ಷದ ಬಾಲಕಿಯ ಮೇಲೆ ದೊಡ್ಡಪ್ಪನ ಮಗನಿಂದಲೇ ಅತ್ಯಾಚಾರ ನಡೆದಿದೆ.

ಎಸ್ಸೆಸ್ಸೆಲ್ಸಿ ವ್ಯಾಸಂಗ ಮಾಡುತ್ತಿದ್ದ ಬಾಲಕಿ ಕೂಡು ಕುಟುಂಬದಲ್ಲಿ ವಾಸಿಸುತ್ತಿದ್ದು, ಅವಳ ದೊಡ್ಡಪ್ಪನ ಮಗ ಸಂತೋಷ್ ಎಂಬಾತ ಅತ್ಯಾಚಾರ ಎಸಗಿದ್ದಾನೆ.

ಬಾಲಕಿಯ ತಾಯಿ ಶಿವಮೊಗ್ಗದ ಖಾಸಗಿ ವೈದ್ಯರ ಬಳಿ ಕರೆದೊಯ್ದು ಪರೀಕ್ಷಿಸಿದಾಗ ಆಕೆ ಗರ್ಭಿಣಿಯಾಗಿರುವ ವಿಷಯ ತಿಳಿದಿದೆ. ಶಿವಮೊಗ್ಗ ಜಿಲ್ಲಾ ಮೆಗ್ಗಾನ್ ಆಸ್ಪತ್ರೆಯಲ್ಲಿರುವ ಸಖಿ ಕೇಂದ್ರದಲ್ಲಿ ಬಾಲಕಿಯ ಹೇಳಿಕೆ ಪಡೆದು ದೂರು ದಾಖಲಿಸಲಾಗಿದೆ.

'ಸಂತೋಷ್ ಮೇಲೆ ಪೋಕ್ಸೊ ಪ್ರಕರಣದಡಿ ದೂರು ದಾಖಲಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಸಿಪಿಐ ದೇವರಾಜ್ ತಿಳಿಸಿದ್ದಾರೆ.

ಉಪ್ಪಾರರ ಕುಲಶಾಸ್ತ್ರೀಯ ಅಧ್ಯಯನ ತಂಡದ ಮುಖ್ಯಸ್ಥ ಪ್ರೊ. ಮೇತ್ರಿ

'ಮಾರ್ಚ್ ಕೊನೆಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆ'

ಪ್ರಜಾವಾಣಿ ವಾರ್ತೆ

ಬ್ರಹ್ಮವಿದ್ಯಾನಗರ (ಹೊಸದುರ್ಗ): 'ಉಪ್ಪಾರರ ಕುಲಶಾಸ್ತ್ರೀಯ ಅಧ್ಯಯನದ ವರದಿಯ ಕರಡು ಪ್ರತಿಯನ್ನು ಮಾರ್ಚ್ ಕೊನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಅಧ್ಯಯನ ತಂಡದ ಮುಖ್ಯಸ್ಥ ಪ್ರೊ.ಕೆ.ಎಂ.ಮೇತ್ರಿ ತಿಳಿಸಿದರು.

ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಗುರುಪೀಠದಲ್ಲಿ ಭಾನುವಾರ ನಡೆದ ಉಪ್ಪಾರ ರಾಜ್ಯ ಸಂಘದ ಸಭೆಯಲ್ಲಿ ಅವರು ಮಾತನಾಡಿದರು.

'ಉಪ್ಪಾರರಲ್ಲಿ 23 ಒಳಪಂಗಡಗಳಿದ್ದು, ಎಲ್ಲರನ್ನೂ ಪ್ರತಿನಿಧಿಸುವ ಕಾರಣ ನಮ್ಮ ಅಧ್ಯಯನದಲ್ಲಿ 'ಉಪ್ಪಾರರ' ಎಂಬ ಪದ ಬಳಸಲಾಗಿದೆ. ಉಪ್ಪಾರರ ಕುಲಶಾಸ್ತ್ರೀಯ ಅಧ್ಯಯನದಲ್ಲಿ ಇಡೀ ಸಮುದಾಯ ಭಾಗವಹಿಸಬೇಕಿದೆ. ಅಧ್ಯಯನಕ್ಕೆ ಹಲವು ಪ್ರಶ್ನೆಗಳನ್ನು ಕೇಳಿದ್ದೆವು. ಆದರೆ, ಇದುವರೆಗೆ ನಾವು ನಿರೀಕ್ಷಿಸಿದಷ್ಟು ಮಾಹಿತಿ ಸಿಕ್ಕಿಲ್ಲ' ಎಂದರು.

ಪುರುಷೋತ್ತಮಾನಂದಪುರಿ ಸ್ವಾಮೀಜಿ, 'ಉಪ್ಪಾರರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ನಮ್ಮ ಹೋರಾಟವು ಸಹೋದರ ಸಮಾಜದವರ ಹಕ್ಕು ಹಾಗೂ ಸೌಲಭ್ಯವನ್ನು ಕಿತ್ತುಕೊಳ್ಳುವುದಕ್ಕೆ ಅಲ್ಲ. ಬೇರೆ ಸಮುದಾಯದ ಸ್ವಾಮೀಜಿಗಳು ಮೀಸಲಾತಿಗಾಗಿ ಪಾದಯಾತ್ರೆ ಹೋರಾಟ ಮಾಡಿದ್ದಾರೆ. ನಾವೂ ಮಾಡಬೇಕು ಎಂಬ ಒತ್ತಡವನ್ನು ಭಕ್ತರು ಹೇರಬಾರದು. ಸಾಮಾಜಿಕ ನ್ಯಾಯ ಒದಗಿಸಲು ಎಸ್‌ಟಿ ಮೀಸಲಾತಿಗಾಗಿ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಲು ಕುಲಶಾಸ್ತ್ರೀಯ ಅಧ್ಯಯನ ಮಾಡಿಸಲಾಗಿದೆ. ಸರ್ಕಾರಕ್ಕೆ ವರದಿ ಸಲ್ಲಿಕೆಯಾದ ನಂತರವೂ ಬೇಡಿಕೆ ಈಡೇರಿಸದಿದ್ದಲ್ಲಿ ಕಾನೂನಾತ್ಮಕವಾಗಿ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಮೂವರ ಸಜೀವ ದಹನ

ರಾಸಾಯನಿಕ ಸಾಗಿಸುತ್ತಿದ್ದ ಲಾರಿ ಮಗುಚಿ ಬೆಂಕಿ

ಪ್ರಜಾವಾಣಿ ವಾರ್ತೆ

ಅರಕಲಗೂಡು: ಬಟ್ಟೆ ಕಾರ್ಖಾನೆಗೆ ರಾಸಾಯನಿಕ ಸಾಗಿಸುತ್ತಿದ್ದ ಲಾರಿ, ಶನಿವಾರ ತಡರಾತ್ರಿ ಪಲ್ಟಿಯಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಮೂವರು ಸಜೀವ ದಹನವಾಗಿದ್ದಾರೆ.

ಮೈಸೂರಿನ ರಿಲಯನ್ಸ್ ಕಂಪನಿಯಿಂದ ಹಾಸನದ ಹಿಮತ್ ಸಿಂಗ್ ಕಾರ್ಖಾನೆಗೆ ಈ ರಾಸಾಯನಿಕ ವಸ್ತುವನ್ನು ಸಾಗಿಸಲಾಗುತ್ತಿತ್ತು. ಪಡುವಲುಹಿಪ್ಪೆ ರಸ್ತೆಯ ಬಸವನಹಳ್ಳಿ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಲಾರಿಹಳ್ಳಕ್ಕೆ ಉರುಳಿ ಬಿದ್ದಿದೆ. ಆಗ ಬೆಂಕಿ ಹೊತ್ತಿಕೊಂಡಿದೆ. ಗೊರವನಹಳ್ಳಿ ಗ್ರಾಮದ ಪ್ರಮೋದ್, ಪರಮೇಶ್ ಸ್ಥಳದಲ್ಲೇ ಮೃತಪಟ್ಟರೆ, ಚಾಲಕ ಪುಟ್ಟರಾಜ್ ಜಿಲ್ಲಾಸ್ಪತ್ರೆಯಲ್ಲಿ ಅಸುನೀಗಿದರು.

ಉರುಳಿ ಬಿದ್ದು ಸುಟ್ಟು ಹೋಗಿರುವ ಲಾರಿ

ಚಾಲಕ ಪುಟ್ಟರಾಜ್, ಮಾರ್ಗ ಮಧ್ಯೆ ಗೊರವನಹಳ್ಳಿಯಲ್ಲಿ ತಮ್ಮ ಮನೆಗೆ ತೆರಳಿ ರಾತ್ರಿ ಊಟ ಮುಗಿಸಿ, ಲಾರಿಯಲ್ಲಿದ್ದ ಮೂಟೆಗಳನ್ನು ಇಳಿಸಲು ಅಣ್ಣನ ಮಗ ಪ್ರಮೋದ್ ಹಾಗೂ ಗ್ರಾಮದವರೇ ಆದ ಪರಮೇಶ್ ಅವರನ್ನು ಕರೆದುಕೊಂಡು ಹಾಸನಕ್ಕೆ ತೆರಳುತ್ತಿದ್ದರು.

ಲಾರಿ ಹೊತ್ತಿ ಉರಿಯುತ್ತಿರುವುದನ್ನು ಕಂಡ ಸ್ಥಳೀಯರು, ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದರಲ್ಲದೇ ಬೆಂಕಿ ನಂದಿಸಲು ಯತ್ನಿಸಿದರು. ಅಗ್ನಿಶಾಮಕ ಸಿಬ್ಬಂದಿ ಎರಡು ವಾಹನಗಳಲ್ಲಿ ತೆರಳಿ ಬೆಂಕಿ ನಂದಿಸಿದರು.

ಪುಟ್ಟರಾಜ್ ಅವರನ್ನು ರಕ್ಷಿಸಿ, ಚಿಕಿತ್ಸೆಗಾಗಿ ಹಾಸನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಭಾನುವಾರ ಬೆಳಿಗ್ಗೆ ಕ್ರೇನ್ ಬಳಸಿ ಲಾರಿಯಡಿ ಸಿಲುಕಿದ್ದ ಇಬ್ಬರ ಮೃತದೇಹಗಳನ್ನು ಹೊರತೆಗೆದಾಗ ಸುಟ್ಟು ಕರಕಲಾಗಿದ್ದವು.

'ರಾಜ್ಯದಲ್ಲಿ ಆರು ಟೌನ್‌ಶಿಪ್'

ಪ್ರಜಾವಾಣಿ ವಾರ್ತೆ

ಜಗದೀಶ ಶೆಟ್ಟರ್

ಮಂಗಳೂರು: ರಾಜ್ಯದಲ್ಲಿ ಆರು ಟೌನ್‌ಶಿಪ್ ಘೋಷಿಸುವ ಚಿಂತನೆ ಇದೆ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದರು.

'ಬೆಂಗಳೂರಿನ ಪೀಣ್ಯದ ಮಾದರಿಯಲ್ಲಿ, ಇತರ ಟೌನ್‌ಶಿಪ್‌ಗಳ ನಿರ್ಮಾಣಕ್ಕೂ ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದ್ದಾರೆ. ಆದಷ್ಟು ಬೇಗನೇ ಕಾರ್ಯರೂಪಕ್ಕೆ ಬರಲಿವೆ' ಎಂದು ಅವರು ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

'ಕೋವಿಡ್ ನಿಯಂತ್ರಣಕ್ಕೆ ಬಂದರೆ, ಈ ವರ್ಷದ ಡಿಸೆಂಬರ್ ಅಥವಾ 2022ರ ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಲಾಗುವುದು. ಕೋವಿಡ್ ಹೊರತಾಗಿಯೂ, ರಾಜ್ಯವು 2020ರಲ್ಲಿ ₹1.6 ಲಕ್ಷ ಕೋಟಿ ಬಂಡವಾಳ ಹೂಡಿಕೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದು, ದೇಶದಲ್ಲೇ ಅತ್ಯಧಿಕವಾಗಿದೆ. ಈ ಅವಧಿಯಲ್ಲಿ ದೇಶದಲ್ಲಿ ಒಟ್ಟು ಸುಮಾರು ₹4 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಪ್ರಸ್ತಾವಗಳು ಸಲ್ಲಿಕೆಯಾಗಿದ್ದವು' ಎಂದು ಅವರು ಹೇಳಿದರು.

'ಎಸ್ಸಿ,ಎಸ್ಟಿ ಜನರಿಗೆ ಸರ್ಕಾರಿ ಜಾಗದಲ್ಲಿ ವಾಣಿಜ್ಯ ಮಳಿಗೆ'

ವಿಜಯಪುರ: 'ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನಾಂಗದ ಅನುಕೂಲಕ್ಕಾಗಿ ರಾಜ್ಯದಲ್ಲಿ ಪ್ರಥಮ ಬಾರಿಗೆ ವಿಜಯಪುರದ ಸರ್ಕಾರಿ ಜಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ಭಾನುವಾರ ನಗರದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲಿ ಇಂತಹ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಕೊಡಲಾಗುವುದು' ಎಂದರು.

'ಸಾರಿಗೆ ನೌಕರರಿಗೆ ಶೀಘ್ರ 6ನೇ ವೇತನ ಆಯೋಗದ ಸೌಲಭ್ಯ'

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ: ಸಾರಿಗೆ ನೌಕರರಿಗೆ 6ನೇ ವೇತನ ಆಯೋಗದ ಸೌಲಭ್ಯಗಳನ್ನು ಶೀಘ್ರವೇ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ, ಸಾರಿಗೆ ಸಚಿವ ಲಕ್ಷ್ಮಣ ಸವದಿ ಭರವಸೆ ನೀಡಿದರು.

ತಾಲ್ಲೂಕಿನ ಬಸಾಪುರ ಗೇಟ್‌ನಲ್ಲಿ ಭಾನುವಾರ ₹ 16 ಕೋಟಿ ವೆಚ್ಚದ ಕೆಎಸ್‌ಆರ್‌ಟಿಸಿ ಚಾಲಕರ ತರಬೇತಿ ಕೇಂದ್ರದ ಉದ್ಘಾಟನೆ ಹಾಗೂ ₹ 9 ಕೋಟಿ ವೆಚ್ಚದ ಬಸ್ ಡಿಪೊ ಕಾಮಗಾರಿಯ ಶಂಕುಸ್ಥಾಪನೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕೊರೊನಾ ಸಂಕಷ್ಟ ಕಾಲದಲ್ಲೂ ಸರ್ಕಾರದಿಂದ ₹ 1,900 ಕೋಟಿ ಹಣ ಪಡೆದು ಎಲ್ಲಾ ನೌಕರರಿಗೆ ವೇತನ ನೀಡಿದ್ದೇವೆ. ಆದರೂ ಕೆಲವರ ಮಾತು ಕಟ್ಟಿಕೊಂಡು ಮುಷ್ಕರ ನಡೆಸಿದರು. ಮುಷ್ಕರದ ವೇಳೆ ನಮ್ಮ ನೌಕರರೇ ಬಸ್‌ಗಳಿಗೆ ಕಲ್ಲು ಹೊಡೆದದ್ದು ನೋವು ತಂದಿತ್ತು. ಸರ್ಕಾರ ಮತ್ತು ನೌಕರರು ಒಂದು ಕುಟುಂಬದ ಸದಸ್ಯರಿದ್ದಂತೆ. ನಮ್ಮವರೇ ನಮ್ಮ ಮನೆಗೆ ಬೆಂಕಿ ಇಡಲು ಮುಂದಾದರೆ ಹೇಗೆ' ಎಂದು ಪ್ರಶ್ನಿಸಿದರು.

ಲಕ್ಷ್ಮಣ ಸವದಿ

'ಮತ್ತೆ ಏಪ್ರಿಲ್ 7ರಿಂದ ಮುಷ್ಕರ ನಡೆಸುವುದಾಗಿ ನೋಟಿಸ್ ನೀಡಿದ್ದಾರೆ. ಸಾರಿಗೆ ನೌಕರರ 10 ಬೇಡಿಕೆಗಳಲ್ಲಿ 9ನ್ನು ಈಡೇರಿಸಿ ಆದೇಶ ಹೊರಡಿಸಲಾಗಿದೆ. ಯಾರದೋ ಕುಮ್ಮಕ್ಕಿನಿಂದ ಮುಷ್ಕರಕ್ಕೆ ಮುಂದಾದರೆ ತೊಂದರೆಗೆ ಸಿಲುಕುತ್ತೀರಿ. ಸರ್ಕಾರ ನಾಲ್ಕೂ ನಿಗಮಗಳ ನೌಕರರ ಹಿತ ಕಾಯಲು ಬದ್ಧ' ಎಂದರು.

'ಗೋವಾದ ದುರುದ್ದೇಶ ನ್ಯಾಯಾಲಯಕ್ಕೆ ತಿಳಿಸಿ'

ಬೆಳಗಾವಿ: 'ಮಹದಾಯಿ ನೀರು ಹಂಚಿಕೆ ಸಂಬಂಧ ಸುಪ್ರೀಂ ಕೋರ್ಟ್ ಕಳೆದ ತಿಂಗಳು ನೀಡಿದ್ದ ಆದೇಶದ ಅನ್ವಯ ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಾವರಿ ಇಲಾಖೆಗಳ ಅಧಿಕಾರಿಗಳ ತ್ರಿಸದಸ್ಯ ಜಂಟಿ ಪರಿಶೀಲನಾ ಸಮಿತಿಯು ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿಯಲ್ಲಿರುವ ಕಳಸಾ ಬಂಡೂರಿ ಯೋಜನಾ ಪ್ರದೇಶಕ್ಕೆ ಶುಕ್ರವಾರ ಭೇಟಿ ನೀಡಿದಾಗ, ನಡೆದ ಘಟನೆಗಳು ಗೋವಾದ ದುರುದ್ದೇಶವನ್ನು ಬಟಾಬಯಲುಗೊಳಿಸಿವೆ. ಇದನ್ನು ಸರ್ಕಾರವು ನ್ಯಾಯಾಲಯದ ಗಮನಕ್ಕೆ ತರಬೇಕು' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಜಲಸಂಪನ್ಮೂಲ ಇಲಾಖೆಯ ರಾಕೇಶ್ ಸಿಂಗ್ ಅವರಿಗೆ ಭಾನುವಾರ ಪತ್ರ ಬರೆದಿದ್ದಾರೆ.

'2010ರಿಂದ 2018ರವರೆಗೆ ಮಹದಾಯಿ ನ್ಯಾಯಮಂಡಳಿಯ ವಿಚಾರಣೆ ಕಾಲಕ್ಕೂ ಇದೇ ರೀತಿ ವಿಳಂಬ ತಂತ್ರ ಅನುಸರಿಸಿದ್ದ ಗೋವಾ ಈಗ ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರದ ವೇದಿಕೆಗಳನ್ನು ಬಳಸಿಕೊಂಡು ಯೋಜನೆಯ ಅನುಷ್ಠಾನವನ್ನು ತಡೆಯಲು ಯತ್ನಿಸುತ್ತಿದೆ' ಎಂದು ದೂರಿದ್ದಾರೆ.

'ಕಳಸಾ ಬಂಡೂರಿ ಯೋಜನೆಯ ಅನುಷ್ಠಾನ ತಡೆಯುವ ಪ್ರಯತ್ನವಾಗಿ ವಿಳಂಬ ತಂತ್ರ ಅನುಸರಿಸುತ್ತಿರುವ ಗೋವಾ ತನ್ನ ತಂತ್ರಕ್ಕಾಗಿ ಸುಪ್ರೀಂ ಕೋರ್ಟ್‌ನ ಅಮೂಲ್ಯ ಸಮಯವನ್ನು ಹಾಳು ಮಾಡುತ್ತಿದೆ. ಈ ವಿಷಯವನ್ನು ಸರ್ಕಾರ ಏಪ್ರಿಲ್ ಮೊದಲ ವಾರ ನಡೆಯುವ ವಿಚಾರಣೆ ಕಾಲದಲ್ಲಿ ನ್ಯಾಯಾಲಯದ ಗಮನಕ್ಕೆ ತರಬೇಕು' ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.
ದೂ: 080-23349434, ಫ್ಯಾಕ್ಸ್:080-23347670
ಸಂಖ್ಯೆ: B1/I.L.D.T.21/2020-21 ದಿನಾಂಕ: 16.03.2021
ಇ-ಟೆಂಡರ್ ಪ್ರಕಟಣೆ
ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು ''ಜೂನ್/ಜುಲೈ-2021ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೈಕ್ಷಣಿಕ ಜಿಲ್ಲೆ ಮತ್ತು ಬ್ಲಾಕ್‌ವಾರು ಅತಿ ಹೆಚ್ಚು ಅಂಕ ಪಡೆದ ತಲಾ 03 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ವಿತರಿಸಲು ಅಗತ್ಯವಿರುವ ಲ್ಯಾಪ್‌ಟಾಪ್‌ಗಳನ್ನು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಮೇ/ಜೂನ್-2021ರಲ್ಲಿ ನಡೆಯುವ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ವಿತರಿಸಲು ಅಗತ್ಯವಿರುವ ಲ್ಯಾಪ್‌ಟಾಪ್‌ಗಳ ಸರಬರಾಜು'' ಕಾರ್ಯಕ್ಕೆ ಅರ್ಹ ಸಂಸ್ಥೆಗಳಿಂದ ಇ-ಟೆಂಡರ್ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರಂತೆ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಳಿಯ ಅಂತರ್ಜಾಲ ತಾಣ www.sslc.karnataka.gov.in ಮತ್ತು www.eproc.karnataka.gov.in ಮೂಲಕ ದಿನಾಂಕ: 22.03.2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ: 05.04.2021ರ ಪೂರ್ವಾಹ್ನ 11.30. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 22.04.2021ರ ಬೆಳಿಗ್ಗೆ 11.30 ಗಂಟೆ. ಸದರಿ ಟೆಂಡರ್‌ನ ಅಂದಾಜು ಮೌಲ್ಯ ರೂ.536.90 ಲಕ್ಷಗಳು. ಹೆಚ್ಚಿನ ವಿವರಗಳನ್ನು ಮಂಡಳಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- (ವಿ.ಸುಮಂಗಲ) ನಿರ್ದೇಶಕರು (ಪರೀಕ್ಷೆಗಳು)
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಳನೋಟ

ಶಾಲಾ ಶೌಚಾಲಯದ ಸ್ಥಿತಿಗತಿ

ಬೆಂಗಳೂರು: 'ಬಳಕೆಗಿಲ್ಲದ ಶೌಚಾಲಯ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮಾ.21) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಸ್ಥಿತಿಗತಿ ಪರಿಶೀಲಿಸಿ'

ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಇದ್ದರೂ ನೀರಿನ ಕೊರತೆಯಿಂದ ನಿರ್ವಹಣೆ ಸಾಧ್ಯವಾಗಿಲ್ಲ. ಗ್ರಾಮ ಪಂಚಾಯಿತಿಗಳು ಶಾಲೆಗಳಲ್ಲಿ ಶೌಚಾಲಯಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಬೇಕು. ತಿಂಗಳಿಗೊಮ್ಮೆ ಎಲ್ಲ ಶಾಲೆಗಳಲ್ಲಿರುವ ಶೌಚಾಲಯಗಳ ಪರಿಶೀಲನೆಗೆ ವಿಶೇಷ ತಂಡ ರಚಿಸಬೇಕು.

ರವಿಕುಮಾರ್, ಚಳ್ಳಕೆರೆ

'ನಿರ್ವಹಣೆಗೆ ಆದ್ಯತೆ ನೀಡಿ'

ಬಹುತೇಕ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ನಿರ್ವಹಣೆ ಸರಿಯಾಗಿಲ್ಲ. ಕೆಲವೆಡೆ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಒಂದೇ ಶೌಚಾಲಯ. ಅವೂ ಸ್ವಚ್ಛವಾಗಿರುವುದಿಲ್ಲ. ಇದರಿಂದ ಅನಾರೋಗ್ಯ ಸಮಸ್ಯೆಗಳು ತಪ್ಪದು. ಶಾಲಾ ಪರಿಸರದ ಭಾಗವಾಗಿರುವ ಶೌಚಾಲಯ ವ್ಯವಸ್ಥೆ ಚೆನ್ನಾಗಿದ್ದರೆ, ಶಾಲೆಯ ಒಳಗೆ ಮತ್ತು ಹೊರಗೆ ಶೈಕ್ಷಣಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯುತ್ತವೆ.

ರೇಣುಕಾ, ಹರಿಹರ

'ನೀರಿನ ವ್ಯವಸ್ಥೆ ಇರಲಿ'

ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆಗಾಗಿ ಸರ್ಕಾರ ಸಾಕಷ್ಟು ಹಣ ಖರ್ಚು ಮಾಡಿದೆ. ಎಲ್ಲ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆಯೂ ಇದೆ. ಆದರೆ, ಶೌಚಾಲಯ ಇದ್ದಲ್ಲಿ ನೀರಿನ ಸಮಸ್ಯೆ, ನೀರಿನ ವ್ಯವಸ್ಥೆ ಇರುವ ಕಡೆ ಶೌಚಾಲಯದ ಸಮಸ್ಯೆ ಇದೆ. ಈ ಅಸಮತೋಲನ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಸಂಕಷ್ಟ ತಪ್ಪುತ್ತಿಲ್ಲ.

ಸುರೇಶ ಗೌರೆ, ಕಲಬುರ್ಗಿ

'ನಿರ್ವಹಣೆಯೇ ಪರಿಹಾರ'

ಶೌಚಾಲಯಗಳ ದುಸ್ಥಿತಿಗೆ ಸಮರ್ಪಕ ನಿರ್ವಹಣೆ ಇಲ್ಲದಿರುವುದೇ ಕಾರಣ. ನಿರ್ಮಾಣಕ್ಕೆ ನೀಡುವ ಗಮನ ನಿರ್ವಹಣೆಗೂ ನೀಡುತ್ತಿಲ್ಲ. ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಬೇಕು. ಶೌಚಾಲಯಗಳ ಅಭಿವೃದ್ಧಿಗೆ ಸರ್ಕಾರದ ಜೊತೆಗೆ ಸ್ಥಳೀಯರೂ ಕೈಜೋಡಿಸಬೇಕು.

ಬಸವ ಪ್ರಸಾದ್, ಬೆಳಗಾವಿ

'ಮೂಲ ಸೌಕರ್ಯ ಇರಲಿ'

ಶಾಲೆಗಳಲ್ಲಿ ಶಿಕ್ಷಣಕ್ಕೆ ಸಮಾನವಾಗಿ ಶೌಚಾಲಯ ಹಾಗೂ ಕುಡಿಯುವ ನೀರಿಗೂ ಸ್ಥಾನ ನೀಡಬೇಕು. ಈ ಲೋಪದಿಂದಲೇ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಪೋಷಕರು ಹಿಂದೇಟು ಹಾಕುತ್ತಾರೆ. ಇದರ ನಡುವೆ ಗುಣಮಟ್ಟದ ಶಿಕ್ಷಣ ಮರೀಚಿಕೆಯೇ ಸರಿ. ಸರ್ಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿ, ಮೂಲ ಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಲಿ.

ಜಿತೇಂದ್ರ, ಸಕಲೇಶಪುರ

'ಅಧಿಕಾರಿಗಳಿಗೆ ಚಾಟಿ ಬೀಸಿ'



ಶಿಕ್ಷಣ ಕ್ಷೇತ್ರದಲ್ಲಿ ಶೌಚಾಲಯಗಳ ವಿಚಾರ ಗಂಭೀರ ಸಮಸ್ಯೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿ ನೀಡಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸ್ಥಳೀಯರನ್ನೇ ಸದಸ್ಯರನ್ನಾಗಿ ಮಾಡಿರುತ್ತಾರೆ. ಪ್ರತಿ ಶಾಲೆಯ ಎಸ್‌ಡಿಎಂಸಿ ಸದಸ್ಯರು ಶೌಚಾಲಯಗಳ ಉನ್ನತೀಕರಣ, ನಿರ್ವಹಣೆಗೆ ವಿಶೇಷ ಕಾಳಜಿ ವಹಿಸಬೇಕು. ನಿರ್ಮಾಣ ಹಂತದಿಂದಲೇ ನಡೆಯುವ ಭ್ರಷ್ಟಾಚಾರಕ್ಕೆ ಈ ರೀತಿಯಾದರೂ ತಡೆ ನೀಡಬಹುದು.

ಬಸವರಾಜ್, ರಾಯಚೂರು

'ತಾಕತ್ತಿದ್ದರೆ ಮುಖ್ಯಮಂತ್ರಿ ಬದಲಾವಣೆ ಮಾಡಲಿ'

ಹೊನ್ನಾಳಿ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ್‌ಗೆ ತಾಕತ್ತಿದ್ದರೆ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಿ' ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಸವಾಲು ಹಾಕಿದರು.

ತಾಲ್ಲೂಕಿನ ಹೊಳೆಹರಹಳ್ಳಿಯಲ್ಲಿ ಭಾನುವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಅವರು ಯತ್ನಾಳ್ ಹೇಳಿಕೆ ವಿರುದ್ಧ ಕೆಂಡಕಾರಿದರು.

'ಯಡಿಯೂರಪ್ಪ ಅವರು ಮಕ್ಕಳನ್ನು ಇಟ್ಟುಕೊಂಡು ಭ್ರಷ್ಟಾಚಾರ ಮಾಡುತ್ತಾರೆ ಎಂದು ಆರೋಪ ಮಾಡುತ್ತೀದ್ದೀಯಲ್ಲ, ನೀನು ನಿನ್ನ ಮಗನನ್ನು ಇಟ್ಟುಕೊಂಡು ಕೆಲಸ ಮಾಡುತ್ತೀಯಲ್ಲ, ಯತ್ನಾಳ್... ಹಾಗಾದರೆ ನೀನೂ ಭ್ರಷ್ಟನೇ' ಎಂದು ಏಕವಚನದಲ್ಲೇ ಪ್ರಶ್ನಿಸಿದರು. 'ನಿನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡಿದಾಗ ಪುನಃ ಪಕ್ಷಕ್ಕೆ ಕರೆ ತಂದವರು ಇದೇ ಯಡಿಯೂರಪ್ಪ' ಎಂದರು.



ವಿದ್ಯಾರ್ಥಿಗಳು ಎಂಬಿಎ ಮತ್ತು ಪಿಜಿಡಿಎಂ ಬಗ್ಗೆ ಗೊಂದಲಕ್ಕೆ ಒಳಗಾಗುವುದು ಸಹಜ. ಈ ಎರಡೂ ಕೋರ್ಸ್‌ಗಳ ಬಗ್ಗೆ ವಿವರ ಇಲ್ಲಿದೆ.

ಎಂಬಿಎ, ಪಿಜಿಡಿಎಂ ಯಾವುದು ಉಪಯುಕ್ತ?

ಡಾ. ಗಿರೀಶ ಯರಲಕಟ್ಟಿ ಮಠ

ಕೊನೆಯ ವರ್ಷದ ಪದವಿ ವಿದ್ಯಾರ್ಥಿಗಳು ಅದರಲ್ಲೂ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಸ್ನಾತಕೋತ್ತರ ಪಡೆಯಲು ಇಚ್ಛಿಸುವವರು ಎಂಬಿಎ ಮಾಡಿದರೆ ಹೆಚ್ಚು ಉಪಯುಕ್ತವೇ ಅಥವಾ ಪಿಜಿಡಿಎಂ (ಪೋಸ್ಟ್ ಗ್ರ್ಯಾಜುಯೇಶನ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್) ಪಡೆದಿದ್ದೇ ಆದಲ್ಲಿ ಹೆಚ್ಚಿನ ವೇತನವನ್ನು ನಿರೀಕ್ಷಿಸಬಹುದೇ? ಇವೆರಡರ ನಡುವೆ ಇರುವ ವ್ಯತ್ಯಾಸವೇನು ಎಂಬುದರ ಬಗ್ಗೆ ಗೊಂದಲಕ್ಕೆ ಒಳಗಾಗುವುದು ಸಹಜ. ಯಾವುದೇ ಸಂಸ್ಥೆಯಲ್ಲಿ ಪ್ರವೇಶ ಪಡೆಯುವ ಮೊದಲು ಅಭ್ಯರ್ಥಿಗಳು ಎಂಬಿಎ ಮತ್ತು ಪಿಜಿಡಿಎಂ ನಡುವಿನ ಸಾಮ್ಯತೆ ಹಾಗೂ ವ್ಯತ್ಯಾಸಗಳ ಬಗ್ಗೆ ಸಂಪೂರ್ಣವಾಗಿ ತಿಳಿಯುವುದು ಒಳಿತು.

ಎಲ್ಲಾ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು, 'ಐಐಎಂ ಆ್ಯಕ್ಟ್ 2017'ಕ್ಕಿಂತ ಮುಂಚೆ ಕೂಡ ಪಿಜಿಡಿಎಂ ಅನ್ನು ನೀಡುತ್ತಿದ್ದವು. ಆದರೆ ಡಿಪ್ಲೊಮಾ ಎಂಬ ಪದವು ಸಾಕಷ್ಟು ಅಭ್ಯರ್ಥಿಗಳಲ್ಲಿ ಗೊಂದಲ ಮೂಡಿಸಿತ್ತು.

ಉದ್ಯೋಗ

ಭಾರತದಲ್ಲಿ ಪಿ.ಜಿ.ಡಿ.ಎಂ. ಪದವಿ ನೀಡುವ ಸಂಸ್ಥೆ ಸುಮಾರು 500 ಇರಬಹುದು. ಆದರೆ ಎಂಬಿಎ ಪದವಿ ನೀಡುವ ವಿಶ್ವವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯ ಸಂಯೋಜನೆಗೊಳಪಟ್ಟ ಮಹಾವಿದ್ಯಾಲಯಗಳು ಸುಮಾರು 5500ಕ್ಕೂ ಹೆಚ್ಚಿವೆ. ಹೀಗಾಗಿ ಪಿ.ಜಿ.ಡಿ.ಎಂ.ಗೆ ಹೆಚ್ಚಿನ ಬೇಡಿಕೆಯಿದೆ.

ಪ್ರಮುಖ ವ್ಯತ್ಯಾಸ

ಎಂಬಿಎ ಅಥವಾ ಮಾಸ್ಟರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಎನ್ನುವುದು ಪದವಿ ಕೋರ್ಸ್ ಆಗಿದ್ದು ವಿಶ್ವವಿದ್ಯಾಲಯಗಳು ಅಥವಾ ವಿಶ್ವವಿದ್ಯಾಲಯಗಳ ಸಂಯೋಜನೆ ಅಡಿಯಲ್ಲಿರುವ ಮಹಾವಿದ್ಯಾಲಯಗಳು ಈ ಪದವಿಯನ್ನು ನೀಡಬಹುದು. ಆದರೆ ಪಿಜಿಡಿಎಂ ಅಥವಾ ಸ್ನಾತಕೋತ್ತರ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಸ್ವಾಯತ್ತ ಸಂಸ್ಥೆಗಳು ನೀಡುವುದು ಡಿಪ್ಲೊಮಾ ಕೋರ್ಸ್ ಆಗಿದೆ.

ಆದರೆ ದೇಶದ ಎಲ್ಲಾ ಐಐಎಂಗಳು ಎಂಬಿಎ ಪದವಿ ನೀಡುತ್ತಿಲ್ಲ. ಮಾರುಕಟ್ಟೆಯಲ್ಲಿ ಪಿಜಿಡಿಎಂ ಕೋರ್ಸ್‌ನ ಹೆಸರಿನ ಮೌಲ್ಯ (ಬ್ರಾಂಡ್ ಇಕ್ವಿಟಿ) ಹೆಚ್ಚಾಗಿರುವುದರಿಂದ ಕೆಲವು ಐಐಎಂಗಳು ಎಂಬಿಎ ಪದವಿ ಕೊಡಲು ಹಿಂದೇಟು ಹಾಕುತ್ತಿವೆ. ಐಐಎಂ ಬೆಂಗಳೂರು 2018ರಲ್ಲಿ ಎಂಬಿಎ ನೀಡಿದ ಮೊದಲ ಐಐಎಂ ಆಗಿದೆ.

ಅರ್ಹತೆ

ಪದವಿ ಮುಗಿಸಿದ ಎಲ್ಲಾ ವಿದ್ಯಾರ್ಥಿಗಳು ಎಂಬಿಎ ಹಾಗೂ ಪಿಜಿಡಿಎಂ ಪ್ರವೇಶಕ್ಕೆ ಅರ್ಹರು. ಸಾಮಾನ್ಯವಾಗಿ ಎಂಬಿಎ ನೀಡುವ ವಿಶ್ವವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳು ಆಯಾ ರಾಜ್ಯ ಸರ್ಕಾರ ನಡೆಸುವ ಪಿಜಿ ಸಿಇಟಿ ಅಭ್ಯರ್ಥಿಯು ಪಡೆದುಕೊಳ್ಳುವ ರ‍್ಯಾಂಕಿಂಗ್ ಮೇಲೆ ಪ್ರವೇಶ ನೀಡುತ್ತವೆ. ಮ್ಯಾನೇಜ್‌ಮೆಂಟ್ ಕೋಟಾದಡಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕಾಮೆಡ್-ಕೆ ಎಂಬ ಪ್ರವೇಶ ಪರೀಕ್ಷೆಯನ್ನು ತೆಗೆದು ಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ಪಿಜಿಡಿಎಂ ನೀಡುವ ಸಂಸ್ಥೆಗಳು ಕ್ಯಾಟ್ (ಸಿಎಟಿ) ಮ್ಯಾಟ್ (ಎಂಎಟಿ) ಜಿಮ್ಯಾಟ್ ಐಐಎಫ್‌ಟಿ, ಎಸ್‌ಎನ್‌ಎಪಿ, ಐಆರ್‌ಎಂಎಎಸ್‌ಎಟಿ, ಎಕ್ಸ್‌ಎಟಿ, ಸಿ-ಮ್ಯಾಟ್, ಎನ್ ಮ್ಯಾಟ್ ಮುಂತಾದ ಪರೀಕ್ಷೆಗಳಲ್ಲಿ ಅಭ್ಯರ್ಥಿಯು ಗಳಿಸಿರುವ ಅಂಕಗಳು, ಗುಂಪು ಚರ್ಚೆ ಹಾಗೂ ವೈಯಕ್ತಿಕ ಸಂದರ್ಶನದ ಮೂಲಕ ಆಯ್ಕೆ ಮಾಡುತ್ತವೆ.

ಎಂಬಿಎಯಲ್ಲಿ ಬೋಧಿಸುವ ಪಠ್ಯಕ್ರಮವು, ಆಯಾ ವಿಶ್ವವಿದ್ಯಾಲಯಗಳು ನಿರ್ಧರಿಸಿದಂತೆ ಇರುತ್ತದೆ. ಪಠ್ಯ ಪುಸ್ತಕದಲ್ಲಿರುವ ಥಿಯರಿಗೆ ಹೆಚ್ಚು ಒತ್ತು ನೀಡುತ್ತಾರೆ. ವಿಶ್ವವಿದ್ಯಾಲಯದಿಂದ ಅಥವಾ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳು ನಡೆಸುವ ಅಂತಿಮ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕಾಗುತ್ತದೆ.

ಪಿಜಿಡಿಎಂ ನೀಡುವ ಸಂಸ್ಥೆಗಳು ಪ್ರತಿ ಎರಡು ವರ್ಷಗಳಿಗೊಮ್ಮೆ ಪಠ್ಯಕ್ರಮವನ್ನು ಪರಿಷ್ಕೃತಗೊಳಿಸುತ್ತವೆ. ಅದರಲ್ಲಿ ಉದ್ಯಮ ಆಧಾರಿತ ಕಾರ್ಯಕ್ರಮಗಳ ಮೇಲೆ ಹೆಚ್ಚು ಗಮನ ಹರಿಸಲಾಗುತ್ತದೆ. ಪ್ರತಿ ಸಂಸ್ಥೆಯು ತನ್ನದೇ ಆದ ಪಠ್ಯಕ್ರಮ ಹೊಂದಿರುತ್ತದೆ.

ಎಂಬಿಎಯಲ್ಲಿ ಸಾಮಾನ್ಯವಾಗಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ. ಆದರೆ ಪಿಜಿಡಿಎಂ ನೀಡುವ ಸಂಸ್ಥೆಗಳು ಟ್ರೈಮಿಸ್ಟರ್ ಪದ್ಧತಿಯನ್ನು ಅನುಸರಿಸುತ್ತಾರೆ.

ಕೋರ್ಸ್ ಅವಧಿ

ಈ ಎರಡೂ ಕೋರ್ಸ್‌ಗಳ ಅವಧಿ ಎರಡು ವರ್ಷ.

ಕೋರ್ಸ್ ಶುಲ್ಕ

ಎಂಬಿಎ ಕೋರ್ಸ್‌ಗೆ ನಿಗದಿಪಡಿಸಿರುವ ಶುಲ್ಕಕ್ಕಿಂತ ಪಿ.ಜಿ.ಡಿ.ಎಂ. ಕೋರ್ಸ್ ಶುಲ್ಕ ಹೆಚ್ಚಾಗಿರುತ್ತದೆ. ಎಂಬಿಎಯನ್ನು ಸುಮಾರು ₹ 2-5 ಲಕ್ಷದಲ್ಲಿ ಮುಗಿಸಿಕೊಳ್ಳಬಹುದು. ಪಿ.ಜಿ.ಡಿ.ಎಂ. ಗೆ ಸುಮಾರು 2- 20 ಲಕ್ಷದವರೆಗೂ ಶುಲ್ಕವಿರುತ್ತದೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಎಂಬಿಎ ವಿಭಾಗ, ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ, ತುಮಕೂರು)

ಪಿಜಿಡಿಎಂ ಕೋರ್ಸ್ ಇರುವ ದೇಶದ ಪ್ರಮುಖ ಸಂಸ್ಥೆಗಳು

- ದೇಶದ ಎಲ್ಲಾ ಐಐಎಂಗಳು ಹಾಗೂ ಐಐಟಿಗಳು
- ಕ್ಸೇವಿಯರ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಜಮ್‌ಶೆಡ್‌ಪುರ್
- ನರ್ಸಿ ಮೋಂಜಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ - ಮುಂಬೈ
- ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ -ಗುರುಗ್ರಾಮ ಹಾಗೂ ಮುರ್ಷಿದಾಬಾದ್
- ಕಿರ್ಲೋಸ್ಕರ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್- ಹರಿಹರ ಹಾಗೂ ಪುಣೆ
- ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ - ಮೈಸೂರು
- ಟಿಎ ಪೈ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ – ಮಣಿಪಾಲ.
- ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್ - ಬೆಂಗಳೂರು.
- ಇಂಡಸ್ ಬ್ಯುಸಿನೆಸ್ ಅಕಾಡೆಮಿ - ಬೆಂಗಳೂರು.
- ಸಿಂಬಿಯಾಸಿಸ್ - ಪುಣೆ

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ರೋಪರ್ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ 2021

- ವಿವರ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ರೋಪರ್, ಡಿಪಾರ್ಟ್‌ಮೆಂಟ್ ಆಫ್ ಮೆಕ್ಯಾನಿಕಲ್ ಎಂಜಿನಿಯರಿಂಗ್ (ಡಿಎಂಇ) ಪೋಸ್ಟ್ ಡಾಕ್ಟರಲ್ ಫೆಲೋಶಿಪ್‌ಗೆ ಪಿಎಚ್‌ಡಿ ಪದವಿ ಪಡೆದವರಿಂದ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪಿಎಚ್‌ಡಿ ಪದವಿ ಪಡೆದ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು. ಅಭ್ಯರ್ಥಿಗಳಿಗೆ ಹೀಟ್, ಮಾಸ್ ಟ್ರಾನ್ಸ್‌ಫರ್ ಹಾಗೂ ನ್ಯೂಮರಿಕಲ್ ಟೂಲ್ಸ್ (ಮ್ಯಾಟ್‌ಲ್ಯಾಬ್ ಅಥವಾ ಎಸ್‌ಸಿಲಾಬ್ ಇತ್ಯಾದಿ) ವಿಷಯಗಳಲ್ಲಿ ಉತ್ತಮ ಜ್ಞಾನವಿರಬೇಕು. ಉತ್ತಮ ಲಿಖಿತ ಮತ್ತು ಮೌಖಿಕ ಸಂವಹನ ಕೌಶಲಗಳನ್ನು ಹೊಂದಿರಬೇಕು. ಪ್ರಬಂಧವನ್ನು ಸಲ್ಲಿಸಿದ ಅಭ್ಯರ್ಥಿಗಳು ಸಹ ಅರ್ಹರು.
- ಆರ್ಥಿಕ ನೆರವು: ತಿಂಗಳಿಗೆ ₹55 ಸಾವಿರ ಭತ್ಯೆ ನೀಡಲಾಗುವುದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 26, 2021
- ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/RME3

ಐಐಟಿ ಬಿಎಚ್‌ಯು ವಾರಾಣಸಿ ಜೂನಿಯರ್ ರಿಸರ್ಚ್ ಫೆಲೋಶಿಪ್

- ವಿವರ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎಚ್‌ಯು) ವಾರಾಣಸಿ ಬಿಎಚ್‌ಯು ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಎಂ.ಟೆಕ್ ಹಾಗೂ ಬಿ.ಟೆಕ್ ಪದವಿ ಪಡೆದವರಿಂದ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: ಗೇಟ್ ಅಥವಾ ಜೆಆರ್‌ಎಫ್, ನೆಟ್ ಅರ್ಹತೆ ಹೊಂದಿರುವ 31 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು. ಅಭ್ಯರ್ಥಿಗಳು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಎಂಜಿನಿಯರಿಂಗ್‌ನಲ್ಲಿ ಕನಿಷ್ಠ ಶೇ 75 (7.5 ಸಿಪಿಐ) ರೊಂದಿಗೆ ಪ್ರಥಮ ದರ್ಜೆ ಅಥವಾ ಬಿಟೆಕ್ ಪದವಿಯೊಂದಿಗೆ ಎಂಟೆಕ್ ಪದವಿಯನ್ನು ಹೊಂದಿರಬೇಕು.
- ಆರ್ಥಿಕ ನೆರವು: ತಿಂಗಳಿಗೆ ₹31,000 ಭತ್ಯೆ ನೀಡಲಾಗುವುದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 25, 2021
- ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/TBV6

ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ಸ್ ಇಸಿಎಸ್ ವಿದ್ಯಾರ್ಥಿವೇತನ 2021-22

- ವಿವರ: ಎಚ್‌ಡಿಎಫ್‌ಸಿ ಬ್ಯಾಂಕ್ 6ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.
- ಅರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು. 6 ರಿಂದ 12ನೇ ತರಗತಿ, ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕುಟುಂಬದ ವಾರ್ಷಿಕ ಆದಾಯ ₹ 2.5 ಲಕ್ಷಕ್ಕಿಂತ ಕಡಿಮೆ ಇರುವ ಹಾಗೂ ಹಿಂದಿನ ಪರೀಕ್ಷೆ ಶೇ 55ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು.
- ಆರ್ಥಿಕ ನೆರವು: ₹ 75,000
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜುಲೈ 31, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/HEC9

ಕೃಪೆ: buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Grandma climbs a tree - Ruskin Bond (contd..)

ಇಂಗ್ಲಿಷ್ · ಎಸ್ಸೆಸ್ಸೆಲ್ಸಿ

Continuing the beautiful and uncanny story of Ruskin Bond's Grandma and her bizarre hobby of climbing trees is now being continued with more delicate sentiments and their consequences.

ರಸ್ಕಿನ್ ಬಾಂಡ್ ಚಿತ್ರ ಕೃಪೆ: ವಿಕಿಪೀಡಿಯಾ

Grandma who learnt climbing the tree at the age of six from her loving brother and practiced it like a hobby hadn't been up, at one time or another but was feared by all about that one bad day which she seldom had till then. They all feared about her having a terrible fall. This is brought about very humbly in lines 13, 15 and 16. Poet remembers a scene created centred on his grandma and her peculiar hobby when their family were in town when she had climbed up a tree and was unable to get down. However, she was rescued safely and later was diagnosed by the doctor who checked her temperature and advised/ recommended her a quiet week in bed without any physical activity. This statement of the doctor is quoted with 'strongly' and is followed by the words like 'sighed with relief' and 'tucked her up well' which doesn't just depict their desperation to make the granny leave her hobby but also their caring and affectionate feelings they had on their beloved elderly family member. Her well-being was their only desire but on the other hand the granny was almost in an unexplainable grief she was in which wouldn't be understood and supported by anyone. Poet calls 'Poor granny' even after knowing the inner desires of his granny but still helpless.

This exquisite battle of emotions has been represented in the lines 22 and 23 of the poem. This was a sweet, silent war between the love of the younger ones towards the elderly of the family and the strong desires of a person towards their passion. He compares that brief period of his granny to being in her bedroom only like being in hell, a symbol of pain and agony. Adding up with some other similar words like summer and dancing leaves showing the happiness on one side and the saddened feeling on the other.

(to be continued)

ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಸಿಟಿ ಹೀಟಿಂಗ್ ಎಫೆಕ್ಟ್ ಆಫ್ ಎಲೆಕ್ಟ್ರಿಕ್ ಕರೆಂಟ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/319FoLz

ವಿಕಿರಣ ಮತ್ತು ದ್ರವ್ಯದ ದ್ವೈತ ಸ್ವಭಾವ

ಭೌತಶಾಸ್ತ್ರ · ದ್ವಿತೀಯ ಪಿಯುಸಿ

1897ರಲ್ಲಿ ಜೆ.ಜೆ. ಥಾಮ್ಸನ್ ಅವರು ಎಲ್ಲಾ ವಸ್ತುಗಳ ಮೂಲಭೂತ ಘಟಕಗಳಲ್ಲಿ ಒಂದಾದ ಎಲೆಕ್ಟ್ರಾನ್ ಅನ್ನು ಪರಿಚಯಿಸಿದರು. ಅದೇ ರೀತಿ ಆರ್.ಎ. ಮಿಲ್ಲಿಕನ್ ಎಣ್ಣೆ-ಹನಿ ಪತನ ಪ್ರಯೋಗದ ಮೂಲಕ ಎಲೆಕ್ಟ್ರಾನ್‌ನ ಆವೇಶವು 1.602×10^{-19}C ಎಂದು ಸಾಧಿಸಿದರು.

ಎಲೆಕ್ಟ್ರಾನ್ ಉತ್ಸರ್ಜನೆ

ಎಲೆಕ್ಟ್ರಾನ್‌ಗಳು ಲೋಹದ ಪರಮಾಣುಗಳಲ್ಲಿ ಆಕರ್ಷಕ ಶಕ್ತಿಗಳಿಂದ ಬಂಧಿತವಾಗಿದ್ದು, ಯಾವಾಗ ಈ ಎಲೆಕ್ಟ್ರಾನ್‌ಗಳು ಬಂಧಿತ ಶಕ್ತಿಗಿಂತ ಅಧಿಕ ಶಕ್ತಿಯನ್ನು ಗಳಿಸುತ್ತವೆಯೋ ಆಗ ಲೋಹ ಮೇಲ್ಮೈಯಿಂದ ಹೊರಬರುತ್ತವೆ. ಯಾವ ಕನಿಷ್ಠ ಶಕ್ತಿಗೆ ಎಲೆಕ್ಟ್ರಾನ್‌ಗಳು ಲೋಹದ ಮೇಲ್ಮೈಯಿಂದ ಹೊರ ಬರುತ್ತದೆಯೋ ಆ ಚೈತನ್ಯವನ್ನು ಕಾರ್ಯಫಲನ (Ø) ಎಂದು ಕರೆಯುತ್ತಾರೆ. ಇದನ್ನು eV ನಲ್ಲಿ ಅಳತೆ ಮಾಡುತ್ತಾರೆ.

1eV: 1 ವೋಲ್ಟ್ ವಿಭವಾಂತರದಲ್ಲಿ ಒಂದು ಎಲೆಕ್ಟ್ರಾನ್ ವೇಗೋತ್ಕರ್ಷದಿಂದ ಚಲಿಸಿದಾಗ ಗಳಿಸಿಕೊಳ್ಳುವ ಶಕ್ತಿ.

ಎಲೆಕ್ಟ್ರಾನ್ ಉತ್ಸರ್ಜನೆಯ ವಿಧಗಳು

1. **ಥರ್ಮೋ ಆಯೋನಿಕ್ ಉತ್ಸರ್ಜಕ:** ಎಲೆಕ್ಟ್ರಾನ್‌ಗಳು ಉತ್ಸರ್ಜಿಸಲು ಬೇಕಾದ ಕಾರ್ಯಫಲನ ಶಕ್ತಿಯನ್ನು ಲೋಹವನ್ನು ಕಾಯಿಸುವುದರ ಮೂಲಕ ಉಷ್ಣಶಕ್ತಿಯಿಂದ ಕೊಡಲಾಗುತ್ತದೆ.
2. **ಕ್ಷೇತ್ರ ಉತ್ಸರ್ಜನ:** ಎಲೆಕ್ಟ್ರಾನ್‌ಗಳು ಉತ್ಸರ್ಜಿಸಲು ಬೇಕಾದ ಕಾರ್ಯಫಲನ ಶಕ್ತಿಯನ್ನು ಪ್ರಬಲವಾದ ವಿದ್ಯುತ್ ಕ್ಷೇತ್ರ ($10^{8}Vm^{-1}$) ವನ್ನು ಅನ್ವಯಿಸಿ ನೀಡಲಾಗುತ್ತದೆ.

3) **ದ್ಯುತಿ ವಿದ್ಯುತ್ ಉತ್ಸರ್ಜನ:** ಎಲೆಕ್ಟ್ರಾನ್‌ಗಳು ಉತ್ಸರ್ಜಿಸಲು ಲೋಹದ ಮೇಲೆ ನಿರ್ದಿಷ್ಟ ಆವೃತ್ತಿಯ ವಿಕಿರಣವನ್ನು ಹಾಯಿಸಿದಾಗ ಅವು ಬೇಕಾದ ಕಾರ್ಯಫಲನ ಶಕ್ತಿಯನ್ನು ಪಡೆದುಕೊಂಡು ಉತ್ಸರ್ಜಿಸುತ್ತವೆ. ಈ ಎಲೆಕ್ಟ್ರಾನ್‌ಗಳನ್ನು ದ್ಯುತಿ ಎಲೆಕ್ಟ್ರಾನ್‌ಗಳು ಎನ್ನುತ್ತಾರೆ.

ದ್ಯುತಿ ವಿದ್ಯುತ್ ಪರಿಣಾಮ

ಲೋಹದ ಮೇಲ್ಮೈ ಮೇಲೆ ನಿರ್ದಿಷ್ಟ ಆವೃತ್ತಿಯ ಬೆಳಕು ಬಿದ್ದಾಗ ಎಲೆಕ್ಟ್ರಾನ್‌ಗಳು ಸಾಕಷ್ಟು ಶಕ್ತಿಯನ್ನು ಹೀರಿಕೊಂಡು ಮೇಲ್ಮೈಯಿಂದ ಹೊರಬರುವ ಪ್ರಕ್ರಿಯೆಯನ್ನು ದ್ಯುತಿ ವಿದ್ಯುತ್ ಪರಿಣಾಮ ಎನ್ನುವರು.

ದ್ಯುತಿ ವಿದ್ಯುತ್ ಪರಿಣಾಮದ ಬಗ್ಗೆ ಹರ್ಡ್ಜ್ ಅವಲೋಕನ

ವಿದ್ಯುತ್ಕಾಂತೀಯ ವಿಕಿರಣಗಳ ಕುರಿತಾದ ಪ್ರಯೋಗಗಳನ್ನು ಮಾಡುವಾಗ ಸ್ಪಾರ್ಕ್ ಡಿಸ್ಚಾರ್ಜ್ ಮೂಲಕ ವಿದ್ಯುತ್ಕಾಂತೀಯ ತರಂಗಗಳ ಉತ್ಪಾದನೆಯ ಅಧ್ಯಯನ ಸಂದರ್ಭದಲ್ಲಿ ಶೋಧಕ ವರ್ತುಲದಲ್ಲಿ ನೇರಳಾತೀತ ಬೆಳಕು ಪತನಗೊಂಡಾಗ ಎಲೆಕ್ಟ್ರಾನ್‌ಗಳು ಲೋಹದ ಮೇಲ್ಮೈಯಿಂದ ಹೊರ ಬರುತ್ತವೆ ಎಂಬುದನ್ನು ಸಾದರಪಡಿಸಿದರು.

ಲಿನಾರ್ಡ್ ಅವಲೋಕನಗಳು

ಎರಡು ಎಲೆಕ್ಟ್ರೋಡ್‌ಗಳಿರುವ ನಿರ್ವಾತ ಗಾಜಿನ ಕೊಳವೆಯಲ್ಲಿರುವ ಉತ್ಸರ್ಜಕ ತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಮಂಡಲದಲ್ಲಿ ವಿದ್ಯುತ್ ಸಂಚಾರವಾಗುವುದನ್ನು ಲಿನಾರ್ಡ್ ಅವಲೋಕಿಸಿದರು.

ನೇರಳಾತೀತ ವಿಕಿರಣಗಳಿಂದ ಎಲೆಕ್ಟ್ರಾನ್‌ಗಳು ಬೇಕಾದ ಶಕ್ತಿಯನ್ನು ಪಡೆದುಕೊಂಡು ಉತ್ಸರ್ಜಿಸಲ್ಪಟ್ಟು ವಿದ್ಯುತ್ ಕ್ಷೇತ್ರವಿರುವುದರಿಂದ ಧನ ಆವೇಶದ ಸಂಗ್ರಹ ತಟ್ಟೆಯಿಂದ ಆಕರ್ಷಿಸಲ್ಪಡುತ್ತವೆ ಎಂದು ಸೂಚಿಸಿದರು. ಗಾಜಿನ ಕೊಳವೆಯಲ್ಲಿನ ವಿದ್ಯುತ್ ಪ್ರವಾಹ, ಬಾಹ್ಯ ಪಟ್ಟೆಯ ವಿಭವನಗಳು ಆವೃತ್ತಿ ತೀವ್ರತೆಗಳ ಮೇಲೆ ಅವಲಂಬಿತವಾಗಿರುವುದನ್ನು ಬಿಂಬಿಸಿದರು.

ಹಾಲ್‌ವಾಕ್‌ನ ಅವಲೋಕನಗಳು

ಋಣ ವಿದ್ಯುದಾವೇಶದ ಸತುವಿನ ತಟ್ಟೆ ಮೇಲೆ ನೇರಳಾತೀತ ವಿಕಿರಣ ಪತನಗೊಂಡಾಗ ಅದು ಧನಾವೇಶವನ್ನು ಹೊಂದಿ ಕೊನೆಗೆ ತಟ್ಟೆಯು ಆವೇಶವನ್ನು ಕಳೆದುಕೊಳ್ಳುವುದನ್ನು ಅವಲೋಕಿಸಿದರು. ಅಂತೆಯೇ ಧನ ಆವೇಶದ ತಟ್ಟೆಯ ಮೇಲೆ ನೇರಳಾತೀತ ವಿಕಿರಣ ಪತನಗೊಂಡಾಗ ತಟ್ಟೆಯ ಆವೇಶವು ವೃದ್ಧಿಗೊಳ್ಳುವುದನ್ನು ಸಾದರಪಡಿಸಿದರು. ಇದರಿಂದ ಸೂಕ್ತ ಶಕ್ತಿಯನ್ನು ಹೊಂದಿರುವ ವಿಕಿರಣಗಳು ಲೋಹಗಳ ಮೇಲ್ಮೈ ಮೇಲೆ ಪತನಗೊಂಡಾಗ ಎಲೆಕ್ಟ್ರಾನ್‌ಗಳು ಉತ್ಸರ್ಜಿತವಾಗುತ್ತವೆ ಎಂಬುದನ್ನು ದೃಢಪಡಿಸಿದರು.

ದ್ಯುತಿ ವಿದ್ಯುತ್ ಪರಿಣಾಮದ ಪ್ರಾಯೋಗಿಕ ಅಧ್ಯಯನ



ಇದು ನಿರ್ವಾತ ನಳಿಕೆಯಲ್ಲಿ ದ್ಯುತಿ ಸೂಕ್ಷ್ಮ c ತಟ್ಟೆ ಮತ್ತು ಇನ್ನೊಂದು ಲೋಹತಟ್ಟೆ A ಯನ್ನು ಒಳಗೊಂಡಿರುತ್ತದೆ. ಮೂಲ S ನಿಂದ ಸಾಕಷ್ಟು ಕನಿಷ್ಠ ತರಂಗಾಂತರವುಳ್ಳ ಏಕವರ್ಣೀಯ ಬೆಳಕನ್ನು ಕಿಟಕಿಯಿಂದ ಸಾಗಿ ದ್ಯುತಿ ಸೂಕ್ಷ್ಮ ಫಲಕದ ಮೇಲೆ ಬೀಳುವಂತೆ ಮಾಡಲಾಗುತ್ತದೆ. ಉತ್ಸರ್ಜನ ತಟ್ಟೆ C ನಿಂದ ಉತ್ಸರ್ಜನೆಗೊಂಡ ಎಲೆಕ್ಟ್ರಾನ್‌ಗಳನ್ನು ಸಂಗ್ರಾಹಕ ತಟ್ಟೆ A ದಲ್ಲಿ ವಿದ್ಯುತ್ಕೋಶದಿಂದ ಸೃಷ್ಟಿಯಾದ ವಿದ್ಯುತ್ ಕ್ಷೇತ್ರವು ಸಂಗ್ರಹಿಸುವಂತೆ ಮಾಡಲಾಗುತ್ತದೆ. ವಿದ್ಯುತ್ಕೋಶವು C ಮತ್ತು A ತಟ್ಟೆಗಳ ನಡುವೆ ಬದಲಾಗಬಹುದಾದ ವಿಭವಾಂತರ ಇರುವಂತೆ ನೋಡಿಕೊಳ್ಳುತ್ತದೆ. ಕಮ್ಯುಟೇಟರ್ ಸಹಾಯದಿಂದ ಫಲಕ A ಮತ್ತು C ಗಳ ಧೃವೀಯತೆಯನ್ನು ಬದಲಾಯಿಸಬಹುದಾಗಿದೆ. ಇದರಿಂದ C ಫಲಕದ ಅನುಗುಣವಾಗಿ A ತಟ್ಟೆ ಧೃವೀಯತೆಯನ್ನು ಧನ ಮತ್ತು ಋಣ ವಿಭವವಾಗುವಂತೆ ನೋಡಿಕೊಳ್ಳಬಹುದು.

ದ್ಯುತಿ ಎಲೆಕ್ಟ್ರಾನ್‌ಗಳು ಉತ್ಸರ್ಜಿತಗೊಂಡಾದ ಮಂಡಲದಲ್ಲಿ ಹರಿಯುವ ದ್ಯುತಿ ವಿದ್ಯುತ್ ಪ್ರವಾಹವನ್ನು ಮೈಕ್ರೋ ಅಮ್ಮೀಟರ್‌ನಿಂದಲೂ ಉತ್ಸರ್ಜಕ ಮತ್ತು ಸಂಗ್ರಾಹಕ ಫಲಕಗಳ ನಡುವಿನ ವಿಭಾವಾಂತರವನ್ನು ವೋಲ್ಟ್‌ಮೀಟರ್ (V) ನಿಂದಲೂ ಅಳೆಯಲಾಗುತ್ತದೆ. ಸೂಕ್ತ ಬಣ್ಣದ ಫಿಲ್ಟರ್ ಅಥವಾ ಗಾಜನ್ನು ಬಳಸಿ ಬೇರೆ ಬೇರೆ ಆವೃತ್ತಿಯ ಬೆಳಕನ್ನು ತಟ್ಟೆಯ ಮೇಲೆ ಬೀಳುವಂತೆ ಮಾಡಿ ದ್ಯುತಿ ವಿದ್ಯುತ್‌ನ ಪ್ರಮಾಣದ ವ್ಯತ್ಯಾಸವನ್ನು ಗಮನಿಸಬಹುದು.

(ಮುಂದುವರಿಯುತ್ತದೆ)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ನ್ಯೂಕ್ಲಿ_ಮಾಸ್, ಸೈಜ್ ಅಂಡ್ ಕಂಪೋಸಿಷನ್ ಆಫ್ ನ್ಯೂಕ್ಲಿಯಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/2PaXI4y



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಮನಸ್ಸೆಂಬ ಮದ್ದಾನೆಗೆ ಮತಿಯಂಕುಶ ಮಾತ್ರವೇ ಮದ್ದು.
-ಕೆ.ಎಸ್.ನಿಸಾರ್ ಅಹಮದ್

ಅಪಾಯಕಾರಿ ರಸ್ತೆ: ಗಂಭೀರವಾಗಿ ಪರಿಗಣಿಸದಿದ್ದರೆ ಕಷ್ಟನಷ್ಟ ತಪ್ಪಿದ್ದಲ್ಲ

ದೇಶದಲ್ಲಿ ಕಳೆದ ವರ್ಷ ಕೋವಿಡ್–19 ಪಿಡುಗಿಗಿಂತಲೂ ರಸ್ತೆ ಅಪಘಾತಗಳೇ ಹೆಚ್ಚು ಜನರನ್ನು ಬಲಿ ಪಡೆದಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಕಳೆದ ವಾರ ಹೇಳಿದ್ದಾರೆ. ಇದು ಸಾಂಕ್ರಾಮಿಕಕ್ಕೆ ಸಿಲುಕಿ ಪ್ರಾಣ ಕಳೆದುಕೊಂಡ ಜನರ ಸಂಖ್ಯೆಯನ್ನೂ, ಅಪಘಾತಗಳಲ್ಲಿ ಸಾಯುವವರ ಸಂಖ್ಯೆಯನ್ನೂ ಹೋಲಿಸಿ, ಯಾವುದು ಹೆಚ್ಚು ಅಪಾಯಕಾರಿ ಎಂದು ವಿವರಿಸಲು ನೀಡಿದ ಹೋಲಿಕೆಯಾಗಿತ್ತು. ಆದರೆ, ರಸ್ತೆ ಅಪಘಾತಗಳನ್ನು ನಾವು ಎಷ್ಟು ಗಂಭೀರವಾಗಿ ಪರಿಗಣಿಸಬೇಕು ಎಂಬುದು ಅವರ ಮಾತಿನ ಹಿಂದಿನ ಆಶಯವಾಗಿದ್ದಿರಬಹುದು. ಅಂತರರಾಷ್ಟ್ರೀಯ ಚಾಲನಾ ತರಬೇತಿ ಕಂಪನಿ ಝುಟೊಬಿ ನಡೆಸಿದ ಅಧ್ಯಯನ ವರದಿಯ ಪ್ರಕಾರ, ವಿಶ್ವದಲ್ಲೇ ಅತ್ಯಂತ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಇದು, ಸುರಕ್ಷಿತ ರಸ್ತೆಗಳು ಇನ್ನೂ ನಮಗೆ ಅದೃಶ್ಯವಾಗಿಯೇ ಇರುವುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ಅಧ್ಯಯನಕ್ಕೆ ಒಳಪಟ್ಟ 56 ದೇಶಗಳ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾ, ಥಾಯ್ಲೆಂಡ್ ಮತ್ತು ಅಮೆರಿಕ ಕ್ರಮವಾಗಿ ಒಂದು, ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ. ರಸ್ತೆ ಅಪಘಾತಗಳಲ್ಲಿನ ಮರಣ ಪ್ರಮಾಣ, ಕಾರಿನಲ್ಲಿ ಮುಂದೆ ಕುಳಿತು ಪ್ರಯಾಣಿಸುವವರಲ್ಲಿ ಸೀಟ್ ಬೆಲ್ಟ್ ಧರಿಸುವವರ ಪ್ರಮಾಣ, ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಅಪಘಾತಕ್ಕೀಡಾಗಿ ಮರಣ ಹೊಂದಿದವರ ಸಂಖ್ಯೆ ಎಂಬಿತ್ಯಾದಿ ಅಂಶಗಳನ್ನು ಅಧ್ಯಯನ ಒಳಗೊಂಡಿತ್ತು. ವಿಶ್ವದಲ್ಲೇ ಅತ್ಯಂತ ಸುರಕ್ಷಿತ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳ ಸಾಲಿನಲ್ಲಿ ನಾರ್ವೆ ಮೊದಲ ಸ್ಥಾನದಲ್ಲಿದ್ದರೆ, ಜಪಾನ್ ಹಾಗೂ ಸ್ವೀಡನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ.

ರಸ್ತೆಗಳ ಸುರಕ್ಷತೆಗೆ ಪೂರಕವಾದ ರಸ್ತೆ ವಿನ್ಯಾಸ, ಕಾಲಕಾಲಕ್ಕೆ ರಸ್ತೆಗಳ ಸಮರ್ಪಕ ನಿರ್ವಹಣೆ ಜತೆಗೆ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದರಿಂದ ಅಪಘಾತಗಳನ್ನು ಕನಿಷ್ಠಗೊಳಿಸಲು ಸಾಧ್ಯ

ಅಪಘಾತಕ್ಕೆ ಎಡೆ ಮಾಡಬಲ್ಲ ಅಸುರಕ್ಷಿತ ತಿರುವುಗಳು, ಕಿತ್ತು ಹೋದ ಡಾಂಬರು, ಹೆಜ್ಜೆ ಹೆಜ್ಜೆಗೂ ಎದುರಾಗುವ ಗುಂಡಿಗಳು, ಸಂಚಾರ ದಟ್ಟಣೆ, ಅವೈಜ್ಞಾನಿಕ ರಸ್ತೆ ಉಬ್ಬುಗಳು, ಪಾರ್ಕಿಂಗ್ ಅವ್ಯವಸ್ಥೆ... ಇವೆಲ್ಲವೂ ವಾಹನ ಸವಾರರಿಗೆ ಸವಾಲು ಎಸೆಯುತ್ತಿವೆ. ನಮ್ಮಲ್ಲಿ ಅನೇಕ ನಗರ ಮತ್ತು ಪಟ್ಟಣಗಳ ಪ್ರಮುಖ ರಸ್ತೆಗಳ ಸ್ಥಿತಿಯೇ ದಾರುಣವಾಗಿರುವುದು ಕಣ್ಣಿಗೆ ಬೀಳುತ್ತದೆ. ಬಡಾವಣೆಗಳ ಒಳರಸ್ತೆಗಳ ಸ್ಥಿತಿಯಂತೂ ಮತ್ತೂ ಶೋಚನೀಯ. ಒಳರಸ್ತೆಗಳಲ್ಲಿ ನಡೆಯುವ ಎಷ್ಟೋ ಅಪಘಾತಗಳು ಮಾಧ್ಯಮಗಳ ಪರಿಮಿತಿಯ ನಿದರ್ಶನಗಳಾಗಿ ಇವೆ. ಇವೆಲ್ಲ, ರಸ್ತೆಯೊಂದು ಅಪಾಯಕಾರಿ ಆಗುವುದಕ್ಕೆ ಇರುವಂತಹ ತಾಂತ್ರಿಕ ಕಾರಣಗಳು. ಆದರೆ ದೇಶದಲ್ಲಿ ನಡೆಯುವ ಬಹುಪಾಲು ಅಪಘಾತಗಳಿಗೆ ಅಜಾಗರೂಕತೆಯಿಂದ ವಾಹನ ಚಲಾಯಿಸುವುದು ಮುಖ್ಯ ಕಾರಣ ಆಗಿರುತ್ತದೆ. ಈ ಮಾತು ಹೇಳಲು ದೊಡ್ಡ ಅಧ್ಯಯನದ ಬಲವೇನೂ ಬೇಕಿಲ್ಲ. ಅಜಾಗರೂಕ ಚಾಲನೆ, ಸಂಚಾರ ನಿಯಮಗಳ ಉಲ್ಲಂಘನೆ, ಪಾದಚಾರಿ ಮಾರ್ಗದ ಒತ್ತುವರಿ, ಚಲಿಸುತ್ತಿರುವ ವಾಹನಗಳಿಗೆ ದಿಢೀರನೆ ಎದುರಾಗುವ ಪಾದಚಾರಿಗಳು, ಸೀಟ್ ಬೆಲ್ಟ್ ಧರಿಸುವುದರ ಮಹತ್ವ ಮನಗಾಣದಿರುವುದು... ಹೀಗೆ ರಸ್ತೆ ಸಂಚಾರವು ಅನೇಕ ಕಾರಣಗಳಿಂದಾಗಿ ಅಪಾಯಕಾರಿ ಆಗುತ್ತಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಪ್ರಮಾಣದ ಅಪಘಾತಗಳು ಸಂಭವಿಸುತ್ತಿರುವ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ ಎಂಬ ವಾಸ್ತವ ಕಣ್ಣೆದುರಿದ್ದರೂ ನಮ್ಮ ರಸ್ತೆಗಳಲ್ಲಿನ ಇಂತಹ ದುಸ್ಥಿತಿಯನ್ನು ಬದಲಿಸುವುದಕ್ಕೆ ಸಾಧ್ಯವಾಗದಿರುವುದು ವಿಪರ್ಯಾಸ. ರಸ್ತೆ ಅಪಘಾತಗಳಿಂದ ಆಗುತ್ತಿರುವ ಕಷ್ಟನಷ್ಟಗಳ ಬಗ್ಗೆ ವಿಶ್ವಬ್ಯಾಂಕ್ ಇತ್ತೀಚೆಗೆ ನೀಡಿದ ವರದಿಯಲ್ಲಿ, ಮಾನವೀಯ ಅಂತಃಕರಣವನ್ನೇ ಕಲಕುವಂತಹ ಹಲವಾರು ವಿವರಗಳಿದ್ದವು. ಪ್ರಾಣಹಾನಿಗೆ ಕಾರಣವಾಗುತ್ತಿರುವ ಅಪಘಾತಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತಿವೆ. ಬಡ ಕುಟುಂಬಗಳು, ಅದರಲ್ಲೂ ದುಡಿಯುವ ಕುಟುಂಬಗಳು ಇಂತಹ ಸನ್ನಿವೇಶಗಳಿಂದ ನಲುಗಿ ಹೋಗುತ್ತಿವೆ. ವೈದ್ಯಕೀಯ ವೆಚ್ಚ ಭರಿಸಲಾಗದೆ ಶಾಶ್ವತವಾಗಿ ಅಂಗವೈಕಲ್ಯಕ್ಕೆ ಒಳಗಾಗುವವರ ಸಂಖ್ಯೆಯೂ ಹೆಚ್ಚಾಗಿದೆ. 'ರಸ್ತೆ ಅಪಘಾತಗಳ ತಡೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದು' ಎಂದು ಗಡ್ಕರಿ ಲೋಕಸಭೆಯಲ್ಲಿ ಭರವಸೆ ನೀಡಿದ್ದಾರೆ. ಆದರೆ, ಸುರಕ್ಷತೆಗೆ ಪೂರಕವಾದ ರಸ್ತೆ ವಿನ್ಯಾಸ, ಕಾಲಕಾಲಕ್ಕೆ ರಸ್ತೆಗಳ ಸಮರ್ಪಕ ನಿರ್ವಹಣೆ, ವಾಹನ ಚಾಲನಾ ಪರವಾನಗಿ ನೀಡಿಕೆಗೆ ಇನ್ನೂ ಕಠಿಣ ನಿಯಮ ಅಳವಡಿಕೆ ಹಾಗೂ ಸಂಚಾರ ನಿಯಮ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸಿದರೆ ಅಪಘಾತಗಳನ್ನು ಕನಿಷ್ಠಗೊಳಿಸಲು ಸಾಧ್ಯ. ವ್ಯಾಪಕವಾದ ಜನಜಾಗೃತಿಯೂ ರಸ್ತೆ ಸುರಕ್ಷತೆಗೆ ಪೂರಕವಾದ ಪ್ರಮುಖ ಕ್ರಮಗಳಲ್ಲಿ ಒಂದು ಎಂಬುದನ್ನು ಮರೆಯಬಾರದು.

ದಿನದ ಟ್ವೀಟ್

ಲಾಕ್‌ಡೌನ್ ಅಗತ್ಯವೇ?



ಅನಗತ್ಯ, ಅವೈಜ್ಞಾನಿಕ ಮತ್ತು ವ್ಯತಿರಿಕ್ತ ಪರಿಣಾಮ ಬೀರುವ ಲಾಕ್‌ಡೌನ್ ವಿರುದ್ಧ ಪ್ರಪಂಚದಾದ್ಯಂತ ಭಾರಿ ಪ್ರತಿಭಟನೆ ನಡೆಯುತ್ತಿರುವುದು ಒಳ್ಳೆಯದು. ಲಾಕ್‌ಡೌನ್ ವಿರುದ್ಧದ ಬ್ಯಾರಿಂಗ್ಟನ್ ಘೋಷಣೆಗೆ ಜಾಗತಿಕವಾಗಿ 50,000ಕ್ಕೂ ಹೆಚ್ಚು ವೈದ್ಯರು ಮತ್ತು ಆರೋಗ್ಯ ವಿಜ್ಞಾನಿಗಳು ಸಹಿ ಹಾಕಿದ್ದಾರೆ.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಶುಕ್ರವಾರ, 22-3-1996

- **ಕಡ್ಡಾಯ ಗುರುತು ಚೀಟಿ ಕೈಬಿಟ್ಟು ಚುನಾವಣೆ**

ನವದೆಹಲಿ, ಮಾರ್ಚ್ 21– ಈ ಬಾರಿ ಲೋಕಸಭೆ ಚುನಾವಣೆಗೂ ಚುನಾವಣಾ ಆಯೋಗ ಕಡ್ಡಾಯ ಗುರುತಿನ ಚೀಟಿಯನ್ನು ಕೈಬಿಟ್ಟಿದೆ.

ಈ ವಿಷಯದಲ್ಲಿ ಆಯೋಗದ ಕಡ್ಡಾಯ ನೀತಿಯನ್ನು ಕಳೆದ ವರ್ಷ ಸುಪ್ರೀಂ ಕೋರ್ಟ್ ತಳ್ಳಿಹಾಕಿದ್ದು ಈಗಿನ ನಿರ್ಧಾರಕ್ಕೆ ನಿಜವಾದ ಕಾರಣವಾಗಿದೆ-ಯಾದರೂ, ಹಲವು ರಾಜ್ಯಗಳು ಫೋಟೊ ಇರುವ ಮತದಾನದ ಗುರುತಿನ ಚೀಟಿಯ ಕಾರ್ಯವನ್ನು ಇನ್ನೂ ಪೂರೈಸಿಲ್ಲವಾದ್ದರಿಂದ ಈ ವರ್ಷವೂ ವಿನಾಯಿತಿ ನೀಡಿದೆ.

ಮತದಾರರಿಗೆ ಫೋಟೊ ಇರುವ ಗುರುತಿನ ಚೀಟಿಯನ್ನು ವಿತರಿಸಬೇಕೆಂದು ಚುನಾವಣೆ ಆಯೋಗ ಎಲ್ಲ ರಾಜ್ಯಗಳಿಗೂ ಸೂಚನೆ ನೀಡಿದೆ. ಅದರಂತೆ ಈ ವಿಷಯದಲ್ಲಿ ಪ್ರತೀ ವಾರವೂ ಪ್ರಗತಿಯ ಮೇಲುಸ್ತುವಾರಿ ನೋಡುತ್ತಿದ್ದರೂ ಹಲವು ರಾಜ್ಯಗಳಲ್ಲಿನ ಈ ಕಾರ್ಯ ಇನ್ನೂ ಮುಕ್ತಾಯಗೊಂಡಿಲ್ಲ ಎಂದು ಆಯೋಗ ಹೇಳಿದೆ.

- **ಪಿಎಸ್‌ಎಲ್‌ವಿ- ಡಿ3 ಯಶಸ್ವಿ ಉಡಾವಣೆ**

ಶ್ರೀಹರಿಕೋಟ, ಮಾರ್ಚ್ 21– ಸಂಪೂರ್ಣ ಸ್ವದೇಶಿ ನಿರ್ಮಿತ ಉಪಗ್ರಹ-ವಾಹಕ 'ಪಿಎಸ್‌ಎಲ್‌ವಿ- ಡಿ3' ಇಂದು ಬೆಳಿಗ್ಗೆ 'ಐಆರ್‌ಎಸ್- ಪಿ3' ಉಪಗ್ರಹವನ್ನು ನಿರಾಳವಾಗಿ ಸೂರ್ಯ ಸಮಾಂತರ ಕಕ್ಷೆಗೆ ಸೇರಿಸುವುದರೊಂದಿಗೆ, ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮತ್ತೊಂದು ಮಹತ್ತರ ಉಡ್ಡಯನಕ್ಕೆ ಭಾರತ ಸಜ್ಜಾಯಿತು.

50 ವರ್ಷಗಳ ಹಿಂದೆ

ಸೋಮವಾರ, 22-3-1971

- **ಭೂಕಂಪಕ್ಕೆ ಕಾರಣ ಜಲಾಶಯದ ನೀರು?**

ಕೊಯ್ನಾ, ಮಾರ್ಚ್ 21– ಕೊಯ್ನಾದಲ್ಲಿ 1967ರಲ್ಲಿ ಸಂಭವಿಸಿದ ಭೂಕಂಪಕ್ಕೆ ಕಾರಣವೇನು?

ಈ ವಿಷಯದ ಬಗ್ಗೆ ಭಾರತ ಹಾಗೂ ವಿದೇಶದಲ್ಲಿಯ ಭೂಕಂಪಶಾಸ್ತ್ರಜ್ಞರು ಮತ್ತು ಭೂಗರ್ಭಶಾಸ್ತ್ರಜ್ಞರ ನಡುವೆ ಇನ್ನೂ ಬಿರುಸಿನ ವಾದ–ವಿವಾದ ನಡೆಯುತ್ತಿದೆ.

ಅಣೆಕಟ್ಟೆಗಳಲ್ಲಿ ಮತ್ತು ಜಲಾಶಯ-ಗಳಲ್ಲಿ ನೀರನ್ನು ಶೇಖರಿಸುವುದರಿಂದ ಉಂಟಾಗುವ ಅನೇಕ ಮಾನವಕಲ್ಪಿತ ಭೂಕಂಪಗಳ ನಿದರ್ಶನಗಳಿಗೆ ಕೊಯ್ನಾವೂ ಒಂದು ಎಂದು ಖ್ಯಾತ ವಿಜ್ಞಾನಿಗಳ ತಂಡವೊಂದು ತನ್ನ ವರದಿಯಲ್ಲಿ ಸೂಚಿಸಿರುವುದೇ ಈ ವಿವಾದ ಮತ್ತೆ ಪುಟಗೊಂಡಿರುವುದಕ್ಕೆ ಕಾರಣ. ಈ ವಿಜ್ಞಾನಿಗಳು ಇತ್ತೀಚೆಗೆ ಪ್ಯಾರಿಸ್ಸಿನಲ್ಲಿ ಸಭೆ ಸೇರಿದ್ದರು. ಯುನೆಸ್ಕೊ ಆಶ್ರಯದಲ್ಲಿ ನಡೆದ ಈ ಸಭೆಯಲ್ಲಿ ಭಾಗವಹಿಸಿದ್ದ ವಿಜ್ಞಾನಿಗಳು ಕೊಯ್ನಾ ಭೂಕಂಪ ಕುರಿತ ತಜ್ಞರ ಸಮಿತಿಯ ಅಭಿಪ್ರಾಯವನ್ನು ವಿರೋಧಿಸಿದರು. ಕೊಯ್ನಾ ಭೂಕಂಪಕ್ಕೆ ಪ್ರಾಕೃತಿಕ ಕಾರಣಗಳಿವೆ ಎಂದು ತಜ್ಞರ ಸಮಿತಿ ಅಭಿಪ್ರಾಯಪಟ್ಟಿತ್ತು.

- **ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಸರ್ಕಾರ ರಚನೆಗೆ ವಿರೋಧ**

ಬೆಂಗಳೂರು, ಮಾರ್ಚ್ 21– ಅವಸರವಸರವಾಗಿ ಸಂಸ್ಥಾ ಕಾಂಗ್ರೆಸ್ ಶಾಸಕರನ್ನು ಸೇರಿಸಿಕೊಂಡು ಮಂತ್ರಿಮಂಡಲ ಉರುಳಿಸಿ, ಸರ್ಕಾರ ರಚಿಸುವ ಆಡಳಿತ ಕಾಂಗ್ರೆಸ್ ಶಾಸಕ ಪಕ್ಷದ ಪ್ರಯತ್ನಕ್ಕೆ ರಾಜ್ಯ ಅಡ್‌ಹಾಕ್ ಸಮಿತಿಯ ಸಂಚಾಲಕ ಶ್ರೀ ಡಿ.ದೇವರಾಜ ಅರಸು ತೀವ್ರ ವಿರೋಧ ವ್ಯಕ್ತಮಾಡಿದ್ದಾರೆ.

ನೀರಡಿಕೆಯಿಂದ ಬಳಲುತ್ತಿರುವ ನಗರಗಳ ನೀರಿನ ದಾಹ ನಿವಾರಿಸುವುದು ಹೇಗೆ?

ಜಲ ಕಾಯುವ ಜಗದ ಕಾಯಕ

ವಿಶ್ಲೇಷಣೆ

ವೆಂಕಿ ರಾಘವೇಂದ್ರ, ಗರ್ವಿತಾ ಗುಲಾಟಿ, ಭಾರತಿ ಮಣೂರ್

ವಿಶ್ವದ ಜನಸಂಖ್ಯೆ 800 ಕೋಟಿ ತಲುಪುತ್ತಿರುವ ಈ ಸಮಯದಲ್ಲಿ ನೀರಿಗಾಗಿ ಹಾಹಾಕಾರ ಕೇಳಿಬರುತ್ತಿರುವುದು ಸಾಮಾನ್ಯ ವಿಷಯ. ವಿಶ್ವಸಂಸ್ಥೆ ಕೈಗೊಂಡ ಅಧ್ಯಯನದ ಪ್ರಕಾರ, 2100ರಲ್ಲಿ ವಿಶ್ವದ ಜನಸಂಖ್ಯೆ 1,100 ಕೋಟಿ ತಲುಪಲಿದ್ದು, ನಾವು ಬೇಗ ಕಾರ್ಯ ಪ್ರವೃತ್ತರಾಗದಿದ್ದರೆ ಗಂಟಲು ಒಣಗಿದ ಇನ್ನೂ ಲಕ್ಷಾಂತರ ಬಾಯಿಗಳು ನೀರಿಗಾಗಿ ತೆರೆದುಕೊಳ್ಳಲಿವೆ.

ನೀರಿನ ಅಸಮಾನ ಬಳಕೆಯು ಅಸಮಾನತೆಗಳನ್ನು ಘಾತೀಯವಾಗಿ ಹೆಚ್ಚಿಸುತ್ತದೆ. ಕೋವಿಡ್-19 ಸಾಂಕ್ರಾಮಿಕ ನಮಗೆ ಮನಃಪೂರ್ವಕವಾಗಿ ಸಂರಕ್ಷಿಸು, ಉಳಿಸು ಮತ್ತು ಕಾಪಾಡು, ಇಲ್ಲವಾದರೆ ಮುಂಬರುವ ಪರಿಣಾಮಗಳನ್ನು ಎದುರಿಸಲು ಸಿದ್ಧವಾಗು ಎಂಬ ಪಾಠಗಳನ್ನು ಈಗಾಗಲೇ ಕಲಿಸಿದೆ.

ಶುದ್ಧನೀರು ಪ್ರತಿಯೊಬ್ಬರ ಹಕ್ಕು ಮತ್ತು ಅಗತ್ಯ. ಇದು ಪ್ರತಿಯೊಬ್ಬರೂ ಉಚಿತವಾಗಿ ಪಡೆಯಲೇಬೇಕಾದ ಸಂಪನ್ಮೂಲವಾದರೂ ದುಬಾರಿಯಾದ ಸರಕುಗಳ ಪಟ್ಟಿಗೆ ಸೇರ್ಪಡೆಯಾಗುತ್ತಿದೆ. ಜಾಗತಿಕ ವಾಣಿಜ್ಯ ಹಿತಾಸಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ನೀರಿನ ಮೇಲೆ ಹೂಡಿಕೆ ಮಾಡುತ್ತಿವೆ, ನೀರಿನ ಸಂಪನ್ಮೂಲಗಳನ್ನು ಖರೀದಿಸುತ್ತಿವೆ. ನೇರವಾಗಿ ನೀರಿನ ಮೂಲಗಳು ಉಪನದಿಗಳಾಗಿರದಿದ್ದರೂ ಪ್ರತಿಯೊಂದು ನೀರಿನ ಮೂಲವೂ ಭೂಅಂತರ್ಜಲಕ್ಕೆ ಸಂಪರ್ಕ ಹೊಂದಿದೆ. ಇದರಿಂದ ನೀರಿನ ಮೂಲದ ಒಂದು ಭಾಗವನ್ನು ಕಲುಷಿತಗೊಳಿಸುವುದು ಇನ್ನೊಂದು ಭಾಗದ ಮೇಲೆ ಪರಿಣಾಮ ಬೀರುತ್ತದೆ.

ನೀರಿನ ಅತಿಯಾದ ಬಳಕೆಯನ್ನು ಸ್ಥಳೀಯವಾಗಿ ಕಡಿಮೆ ಮಾಡುವುದು ಕೇಳಲು ಅಷ್ಟೇನೂ ಹೊಸ ಉಪಾಯವಲ್ಲ ಎಂದೆನಿಸಿದರೂ ಇದೇ ಪರಿಣಾಮಕಾರಿಯಾದ ಮಾರ್ಗ. ಗೃಹಕಾರ್ಯಗಳಿಗೆ ಅವಶ್ಯವಿರುವ ಮತ್ತು ಹಂಚಿಕೆಯಾಗುತ್ತಿರುವ ಜಲಧಾರೆಯ ಮೇಲೆ ನಿಗಾ ಇಟ್ಟು ಅನವಶ್ಯಕ ನೀರಿನ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಇದನ್ನು ಸಾಧಿಸಬಹುದು. ಇದೇ ವಿಚಾರವನ್ನು ಬೆಂಬಲಿಸುತ್ತಾ 'Why Waste?' ಎಂಬ ತಂಡ ತಮ್ಮ ವಿಶೇಷ ಆ್ಯಪ್‌ನೊಂದಿಗೆ ಜಲಸಂರಕ್ಷಣೆಗೆ ಮುಂದೆ ಬಂದಿದೆ. ಈ ತಂಡ ಗ್ರಾಹಕರಿಗೆ ಮೋಜಿನ ಸವಾಲುಗಳ ಮೂಲಕ ತಮ್ಮ ನೀರಿನ ಹೆಜ್ಜೆಯ ಗುರುತುಗಳನ್ನು ಲೆಕ್ಕಹಾಕುವುದನ್ನು ಪ್ರೇರೇಪಿಸಿ, ಎಲ್ಲಿ ಮತ್ತು ಹೇಗೆ ಅವರು ನೀರಿನ ಅಪವ್ಯಯ ಮಾಡುತ್ತಾರೆ ಎಂಬುದನ್ನು ತಿಳಿಸುತ್ತಾ ನೀರಿನ ಸದ್ಬಳಕೆಯನ್ನು ಕಲಿಸುತ್ತದೆ.

ಸರಕುಗಳ ತಯಾರಿಕೆಗೆ ಅಗತ್ಯವಾದ, ಆದರೆ ನಮ್ಮ ಅರಿವಿಗೆ ಬಾರದ ನೀರಿನ ಬಗ್ಗೆ ಜನರಿಗೆ ಶಿಕ್ಷಣ ನೀಡುವುದು ಅನಿವಾರ್ಯವಾಗಿದೆ. ಒಂದು ಚೀಸ್ ಬರ್ಗರ್ ತಯಾರಿಸಲು 700 ಲೀಟರ್ ನೀರು, ಒಂದು ಜೋಡಿ ಜೀನ್ಸ್ ತಯಾರಿಸಲು 2,000 ಲೀಟರ್ ನೀರು, ಒಂದು ಸೆಡಾನ್ ಕಾರು ತಯಾರಿಸಲು 30,000 ಲೀಟರ್ ನೀರು ಬೇಕಾಗುತ್ತದೆ. ಮನುಷ್ಯನ ಕೊಳ್ಳುಬಾಕತನವು ಊಹೆಗೆ ನಿಲುಕದ ವೇಗದಲ್ಲಿ ಸಂಪನ್ಮೂಲಗಳನ್ನು ಬರಿದಾಗಿಸುತ್ತಿದೆ. ಕೊಳ್ಳುವಿಕೆಯನ್ನು ಮಿತಗೊಳಿಸಿ ಆರ್ಥಿಕತೆಯನ್ನು ನಿಭಾಯಿಸುವುದು ಅನಿವಾರ್ಯವಾಗಿದೆ. ಇದನ್ನು ಸುಸ್ಥಿರವಾದ ಕನಿಷ್ಠ ಸಂಪನ್ಮೂಲಗಳನ್ನು ಬಳಸಿ ಸ್ಥಳೀಯವಾಗಿ ತಯಾರಿಸಲಾದ ಉತ್ಪನ್ನಗಳು ಮತ್ತು ಸರಕುಗಳನ್ನು ಪ್ರೋತ್ಸಾಹಿಸುವುದರ ಮೂಲಕ ಸಾಧಿಸಬಹುದು.

ಶುದ್ಧ ನೀರನ್ನು ಒದಗಿಸುವ ದಿಸೆಯಲ್ಲಿ ಪ್ರತೀ ಮನೆಗೂ ಕೊಳವೆ ನೀರಿನ ಪೂರೈಕೆ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ. ಈ ಉದ್ದೇಶ ಸಂಪೂರ್ಣವಾಗಿ ಸಾಕಾರಗೊಳ್ಳುವವರೆಗೂ ನವೀನ ರೀತಿಯ ನೀರಿನ ಉದ್ದಿಮೆಗಳು ಈ ಅಂತರವನ್ನು ಬೆಸೆಯುತ್ತಿವೆ. ದೇಶದಾದ್ಯಂತ ಅನೇಕ ರಾಜ್ಯಗಳು 'ನೀರಿನ ಎಟಿಎಂ' ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿವೆ. ಸಾಮಾನ್ಯ ನಾಗರಿಕರಿಗೆ, ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಜನರು ಅತ್ಯಲ್ಪ ಬೆಲೆಯಲ್ಲಿ ಶುದ್ಧ ನೀರನ್ನು ಪಡೆಯುವ ವ್ಯವಸ್ಥೆ ಇದಾಗಿದೆ. ನಮ್ಮ ರಾಜ್ಯದಾದ್ಯಂತ ಕೂಡ ಈ ಘಟಕಗಳನ್ನು ಎಲ್ಲೆಡೆ ಕಾಣಬಹುದು.

ದೇಶದಾದ್ಯಂತ ಪುರಸಭೆಗಳ ಸಹಭಾಗಿತ್ವದಲ್ಲಿ ನೀರಿನ ಎಟಿಎಂಗಳ ಜೊತೆಗೆ ಜಲ ಜ್ಞಾನ ಸಂಪನ್ಮೂಲ ಕೇಂದ್ರಗಳು ಅನೇಕ ನಗರಗಳಲ್ಲಿ ತಲೆಯೆತ್ತಿವೆ. ಇವು ಜ್ಞಾನ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಾ ಸಾರ್ವಜನಿಕ ಆರೋಗ್ಯವನ್ನು, ವಿಶೇಷವಾಗಿ ಸಾಂಕ್ರಾಮಿಕದ ಸಮಯದಲ್ಲಿ ಸುಧಾರಿಸುತ್ತಾ ನೀರು ಮತ್ತು ನೈರ್ಮಲ್ಯದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಉಂಟುಮಾಡುತ್ತಿವೆ. ಈ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲರೂ, ಅಂದರೆ ನಾಗರಿಕರು, ನೀರು ಸರಬರಾಜು ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು ನೀರಿಗೆ ಸಂಬಂಧಿಸಿದ ತಮ್ಮ ಕುಂದು ಕೊರತೆ ಹಂಚಿಕೊಳ್ಳಲು, ಚರ್ಚಿಸಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಒಟ್ಟಾರೆಯಾಗಿ ಕೈಜೋಡಿಸುತ್ತಿದ್ದಾರೆ. ನೀರಿನ ಬಗ್ಗೆ ಸಾರ್ವಜನಿಕ ಪ್ರಜ್ಞೆಯನ್ನು ಹೆಚ್ಚಿಸಲು, ಸಮುದಾಯಗಳ ತೊಡಗಿಸಿಕೊಳ್ಳುವಿಕೆ ಮತ್ತು ಮುನ್ನಡೆಸುವಿಕೆಗೆ ಅಭಿಯಾನಗಳ ಅವಶ್ಯಕತೆ ಇದೆ.

ನೀರು ಮರುಬಳಕೆ ಮಾಡಬಹುದಾದಂತಹ ಸಂಪನ್ಮೂಲ. ಆದರೆ ಇದರ ಮರುಬಳಕೆ ಪ್ರತಿಯೊಬ್ಬ ಮನುಷ್ಯ ವಿಶೇಷವಾಗಿ, ಸ್ಥಿತಿವಂತರ ಇಚ್ಛಾಶಕ್ತಿಯ ಮೇಲೆ ನಿಂತಿದೆ. ಉದಾಹರಣೆಗೆ, ಬೆಂಗಳೂರಿನ ಕುಡಿಯುವ ನೀರಿನ ಭವಿಷ್ಯ ಚಿಂತಾಜನಕವಾಗಿದೆ. ಆದಾಗ್ಯೂ ಇದನ್ನು ಹೋಗಲಾಡಿಸಲು ಅನೇಕ ಸಕ್ರಿಯ ನಾಗರಿಕ ಸಮುದಾಯಗಳು ದಣಿವರಿಯದೆ ಕೆಲಸ ಮಾಡುತ್ತಿವೆ ಎಂಬುದು ಉಲ್ಲೇಖನೀಯ. ಎಸ್.ವಿಶ್ವನಾಥ್ (ಜೆನ್ ರೈನ್ ಮ್ಯಾನ್) ಅವರಂತಹ ವ್ಯಕ್ತಿಗಳು ಬೆಂಗಳೂರಿನ ನೀರಿನ ಬಿಕ್ಕಟ್ಟನ್ನು ಪರಿಹರಿಸುವ ಪ್ರಯತ್ನಕ್ಕೆ ಉದಾಹರಣೆಯಾಗಿದ್ದಾರೆ. ಅವರ ಮನೆ ಸಂಪೂರ್ಣವಾಗಿ ಮರುಬಳಕೆಯ ಮಳೆನೀರಿನಿಂದ ನಡೆಯುತ್ತದೆ. ಅನೇಕ ವರ್ಷಗಳಿಂದ ನೀರಿಗಾಗಿ ಹಣ ಪಾವತಿಸಿಲ್ಲದ ಅವರು ಈ ಸಂಪನ್ಮೂಲವನ್ನು ಜನರಿಗೆ ತಲುಪಿಸಲು, ಅದನ್ನು ಸಂರಕ್ಷಿಸಲು ಅರಿವು ಮೂಡಿಸುತ್ತಿದ್ದಾರೆ.

ಸಾಂಪ್ರದಾಯಿಕ ನೀರಿನ ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಬೆಂಗಳೂರಿನಾದ್ಯಂತ ಹಲವಾರು ಅಪಾರ್ಟ್‌ಮೆಂಟ್‌ಗಳು ದೊಡ್ಡ ಪ್ರಮಾಣದಲ್ಲಿ ಮಳೆನೀರು ಸಂಗ್ರಹ ಮತ್ತು ಗ್ರೇ ವಾಟರ್ ಮರುಬಳಕೆಯನ್ನು ಕೈಗೊಳ್ಳಲು ಪ್ರಾರಂಭಿಸಿವೆ. 'ಹಾಫ್ ಬಕೆಟ್ ಚಾಲೆಂಜ್'ನಂತಹ ಉಪಕ್ರಮಗಳು ಜನರ ಮನಸ್ಸು ಮತ್ತು ಅಭ್ಯಾಸಗಳಲ್ಲಿ ಭಾರಿ ಬದಲಾವಣೆಯನ್ನು ತರಲು ಸಹಾಯ ಮಾಡಿವೆ. ರೆಸ್ಟೋರೆಂಟ್‌ಗಳಲ್ಲಿ ನೀರನ್ನು ಸಂರಕ್ಷಿಸುವ ತ್ಯಾಜ್ಯ ಏಕೆ? ತಂಡದ 'ಗ್ಲಾಸ್ ಹಾಫ್ ಫುಲ್' ಎಂಬ ಕಾರ್ಯಾಚರಣೆ 2019ರಲ್ಲಿ ವೈರಲ್ ಆಗಿದ್ದಲ್ಲದೆ 'ನ್ಯಾಷನಲ್ ರೆಸ್ಟೋರೆಂಟ್ ಅಸೋಸಿಯೇಶನ್ ಆಫ್ ಇಂಡಿಯಾ'ದ ಸಹಕಾರದೊಂದಿಗೆ ತನ್ನ ಪ್ರಭಾವವನ್ನು ಮುಂದುವರಿಸಿದೆ. ಕೇವಲ 30 ರೆಸ್ಟೋರೆಂಟ್‌ಗಳೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮ ಇದೀಗ 5 ಲಕ್ಷಕ್ಕೂ ಹೆಚ್ಚು ರೆಸ್ಟೋರೆಂಟ್‌ಗಳನ್ನು ತಲುಪಿದೆ.

ಭಾರತದಲ್ಲಿ ನಿರಂತರವಾಗಿ ಬೋರ್‌ವೆಲ್‌ಗಳನ್ನು ಕೊರೆಯುವ ಮೂಲಕ ಪಟ್ಟುಬಿಡದೆ ಅಂತರ್ಜಲದ 'ಗಣಿಗಾರಿಕೆ' ಮಾಡುತ್ತಿದ್ದೇವೆ ಅಂದರೆ ತಪ್ಪಾಗಲಾರದು. ಏಕೆಂದರೆ ಈ ಸಂಪನ್ಮೂಲವನ್ನು ಪುನಃ ತುಂಬಿಸಲು ನಾವು ಏನೂ ಮಾಡುತ್ತಿಲ್ಲ. ವೇಗವಾಗಿ ಕ್ಷೀಣಿಸುತ್ತಿರುವ ಅಂತರ್ಜಲ ಸಂಪನ್ಮೂಲವು ನಮ್ಮ ಕೃಷಿಕೇಂದ್ರಿತ ಆರ್ಥಿಕತೆಗೆ ನಿರ್ಣಾಯಕವಾಗಿದೆ. ನೀರನ್ನು ಉಳಿಸಿಕೊಳ್ಳುವುದರ ಜೊತೆಗೆ ಪುನರ್ಭರ್ತಿ ಮಾಡಬೇಕಾದ ಅವಶ್ಯಕತೆ ಇದೆ. ಅದಕ್ಕೆ ನಗರಗಳು ತಮ್ಮನ್ನು ಸ್ಪಂಜಿನ ನಗರಗಳಾಗಿ ಪರಿವರ್ತಿಸಬಹುದು ಎಂದು ಜರ್ಮನಿಯ ನಗರ ಬರ್ಲಿನ್ ತೋರಿಸಿದೆ. ಆದರೆ ನೀರಿನ ಹಸಿವಿನಿಂದ ಬಳಲುತ್ತಿರುವ ನಗರಗಳನ್ನು ಸ್ಪಂಜಿನ ನಗರಗಳನ್ನಾಗಿ ನಾವು ಹೇಗೆ ಪರಿವರ್ತಿಸಬಹುದು?

ಚೆನ್ನೈ ಮತ್ತು ಶಿಮ್ಲಾದ ನೀರಿನ ಕೊರತೆಯ ಪರಿಸ್ಥಿತಿಯ ಚಿತ್ರಗಳು ಮತ್ತು ನೆನಪುಗಳು ಇನ್ನೂ ಮಾಸಿಲ್ಲ. ಪರಿಸ್ಥಿತಿಯನ್ನು ನಿರ್ಲಕ್ಷಿಸಲು, ಎಲ್ಲವೂ ಸರಿಯಾಗಿದೆ ಎನ್ನುವ ಅಸಡ್ಡೆ ಅಥವಾ ಈ ಸಮಸ್ಯೆಯನ್ನು ಇನ್ನೊಬ್ಬರು ಬಗೆಹರಿಸುತ್ತಾರೆ ಎಂದು ಕೈಕಟ್ಟಿ ಕೂಡಲು ಸಾಧ್ಯವಿಲ್ಲ. ಈ ವಿಶ್ವ ಜಲ ದಿನದಂದು (ಮಾರ್ಚ್ 22) ನಾವು ಒಗ್ಗೂಡಿ ಸಮರೋಪಾದಿಯಲ್ಲಿ ಈ ಸಂಪನ್ಮೂಲವನ್ನು ಉಳಿಸಲು ಪಣ ತೊಡಬೇಕಿದೆ, ಕಾರ್ಯಪ್ರವೃತ್ತರಾಗಬೇಕಿದೆ.



ಚುರುಮುರಿ

ಮುಂದೆ... ನಾವು ಮುಂದೆ!

• ಸುಮಂಗಲಾ

'ಟಾಪ್ ಮೂವತ್ತರಲ್ಲಿ ಇಪ್ಪತ್ತೆರಡು ನಮ್ಮ ದೇಶದಲ್ಲಿ... ಆಹಾ... ಓಹೋ... ನಾವೀಗ ಎಷ್ಟು ಮುಂದೆ...' ಬೆಕ್ಕಣ್ಣ ಅಗದಿ ಭಯಂಕರ ಖುಷಿಯಲ್ಲಿ ಪದ್ಯ ಹಾಡುತ್ತಿತ್ತು.

'ಏನಲೇ' ಎಂದು ರೇಗುವಷ್ಟರಲ್ಲೇ ಪೇಪರ್ ಮುಖಕ್ಕೆ ಹಿಡಿಯಿತು.

'ಮಂಗ್ಯಾನಂಥವ್ನೆ... ಟಾಪ್ ಮೂವತ್ತು ಅತಿಮಾಲಿನ್ಯಯುಕ್ತ ನಗರಗಳಲ್ಲಿ ಇಪ್ಪತ್ತೆರಡು ನಮ್ಮ ದೇಶದಾಗೆ ಐತಿ. ಇದ್ ಖುಷಿ ಸುದ್ದಿ ಅಲ್ಲಲೇ... ಉಸಿರುಗಟ್ಟಿಸೋ ಸುದ್ದಿ...' ಎಂದು ಅದರ ಮೂತಿಗೆ ತಿವಿದೆ.

ಸುದ್ದಿ ಸರಿಯಾಗಿ ಓದಿದ್ದೇ ಬೆಕ್ಕಣ್ಣನ ವರಸೆಯೇ ಬದಲಾಯಿತು. 'ಇದೆಲ್ಲ ಸುಳ್ಳ್ ಸುದ್ದಿ... ನಮ್ಮ ಪ್ರಗತಿ ನೋಡಕ್ಕಾಗದಿದ್ದೋರು ಹಿಂಗೆಲ್ಲ ಸ್ಟಡಿ ಮಾಡೀವಿ ಅಂತಾರ, ನಂಬಬ್ಯಾಡ' ಎಂದು ನನಗೇ ಬುದ್ಧಿವಾದ ಹೇಳಿ ಮತ್ತೆ ಪೇಪರು ಓದತೊಡಗಿತು.

'ಏ... ನೋಡಿಲ್ಲಿ... ವಿಶ್ವದಾಗೆ ನಾಕನೇ ಸ್ಥಾನ ನಮ್ಮದು...' ಖುಷಿಯಿಂದ ಉಲಿಯಿತು.

'ಸರಿಯಾಗಿ ನೋಡಲೇ... ಅದ್ ಹೊಂಡಗುಂಡಿ ರಸ್ತೆಗಳ ವಿಚಾರದಾಗೆ ನಾವು ನಾಕನೇ ಸ್ಥಾನ. ನಾವೀಗ ಫಸ್ಟ್ ಇರಾದು ಶಾಂತಿಯುತ ರೈತರ ಪ್ರತಿಭಟನೆಯಲ್ಲಿ ಮಾತ್ರ...' ಎಂದು ಬೈದೆ.

ಬಿದ್ದರೂ ಮೀಸೆ ಮಣ್ಣಾಗದ ಜಟ್ಟಿಯಂತೆ... 'ಆಗಲೇಳು... ದೊಡ್ಡಣ್ಣ ಅಮೆರಿಕನೇ ಮೂರನೇ ಸ್ಥಾನ, ಅವರಿಗಿಂತ ನಮ್ಮ ಹೊಂಡಗುಂಡಿ ರಸ್ತೇನೆ ಭೇಷ್ ಅಂದಂಗಾತಿಲ್ಲೋ' ಎಂದಿತು.

ಕೊನೆಗೊಂದು ಸುದ್ದಿ ಓದಿದ್ದೇ ಹ್ಯಾಪುಮೂತಿ ಹಾಕಿ ಕೂತ ಬೆಕ್ಕಣ್ಣ 'ನಾವ್ ಪಾಕಿಸ್ತಾನ ಅಥವಾ ಬಾಂಗ್ಲಾ ದೇಶಕ್ಕಾರೂ ಹೋಗಿರೂಣೇನಾ' ಎಂದು ಕೇಳಿತು. ನಾನು ಭಯಗೊಂಡು 'ನಮ್ಮನ್ನ ದೇಶ ದ್ರೋಹಿ ಅಂತ ಜೈಲಿಗಿ ಅಟ್ಟತಾರ, ಸುಮ್ಮಿರಲೇ' ಎಂದು ಅದರ ಬಾಯಿ ಬಿಗಿಹಿಡಿದೆ. ಸುದ್ದಿ ಏನೆಂದರೆ, ವಿಶ್ವ ಸಂತೋಷ ಸೂಚ್ಯಂಕ ವರದಿಯ ಪ್ರಕಾರ, 150 ದೇಶಗಳಲ್ಲಿ ಭಾರತವು ಕೆಳಗಿನ 144ನೇ ಸ್ಥಾನದಲ್ಲಿದ್ದರೆ, ಬಾಂಗ್ಲಾ 101, ಪಾಕಿಸ್ತಾನ 105ನೇ ಸ್ಥಾನದಲ್ಲಿದ್ದವು!

'ಅತಿ ಸಂತೋಷದಿಂದ ಇರುವವರ ದೇಶ ಫಿನ್ಲೆಂಡಿಗೆ ಹೋಗೂದಂತೂ ಆಗಂಗಿಲ್ಲ. ಅದಕ್ಕ ಇಲ್ಲೇ ಅಕ್ಕಪಕ್ಕದಾಗಿರೋ ದೇಶಕ್ಕಾರೂ ಹೋಗೂಣಂತ' ಮೆತ್ತಗೆ ಬಾಯಿಬಿಟ್ಟಿತು ಬೆಕ್ಕಣ್ಣ!

ಸಂಗತ

ಸ್ವಹಿಂಸೆ: ಪ್ರಕೃತಿಯ ಕ್ರೂರ ಅಣಕ

ಶರೀರ ಸೊರಗಿಸಿಕೊಳ್ಳುವುದರಿಂದ ಯಾವ ಸದ್ಗತಿ, ಸೌಖ್ಯ, ಪುರುಷಾರ್ಥ?

• ಯೋಗಾನಂದ

ಚನ್ನಪಟ್ಟಣ ತಾಲ್ಲೂಕಿನ ಗುಡಿಸರಗೂರಿನಲ್ಲಿ ಪ್ರಧಾನ ಅರ್ಚಕರೊಬ್ಬರು ಹೊಂಡ ಹಾಯುವಾಗ ಆಯತಪ್ಪಿ ಬಿದ್ದು ಗಾಯಗೊಂಡಿದ್ದರಿಂದ ಮೃತಪಟ್ಟ ಸುದ್ದಿ (ಪ್ರ.ವಾ. ಮಾರ್ಚ್ 14) ವಿಷಾದ, ಬೇಸರ ತರುವಂಥದ್ದು. ವಿಷಾದವು ದಾರುಣ ಸಾವಿಗಾಗಿ ಮತ್ತು ಬೇಸರವು ಬೆಂಕಿಯ ಅಸಲಿಯತ್ತು ತಿಳಿದೂ ಕೈಯಾರೆ ಹೀಗೆ ಅವಘಡ ತಂದುಕೊಂಡಿದ್ದಕ್ಕಾಗಿ.

ಕಾಳಿದಾಸ ತನ್ನ 'ಕುಮಾರಸಂಭವಮ್' ಮಹಾಕಾವ್ಯದಲ್ಲಿ 'ಶರೀರಮಾದ್ಯಮ್ ಖಲು ಧರ್ಮ ಸಾಧನಮ್'- ಶರೀರದ ಮೂಲಕವೇ ಧರ್ಮವನ್ನು ಅರ್ಜಿಸತಕ್ಕದ್ದು ಎಂದಿದ್ದಾನೆ. ಈ ಅದ್ಭುತ ನುಡಿಯನ್ನು ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ತನ್ನ ಧ್ಯೇಯವಾಕ್ಯವಾಗಿಸಿಕೊಂಡಿದೆ. ತನ್ನ ಚೆನ್ನುಡಿ ಎರಡು ಸಾವಿರ ವರ್ಷಗಳ ನಂತರ ಒಂದು ಮಹಾಸಂಸ್ಥೆಯ ಲಾಂಛನವನ್ನು ಅಲಂಕರಿಸೀತೆಂದು ಆ ಮಹಾಕವಿ ಭಾವಿಸಿರಲಿಕ್ಕಿಲ್ಲ. ದೃಢ ಶರೀರದಲ್ಲಿ ದೃಢ ಮನಸ್ಸಿದ್ದರೇನೆ ಯಶಸ್ವಿಯಾಗಿ ಧರ್ಮಪಾಲನೆ.

ಎರಡನೇ ಪೋಪ್ ಜಾನ್ ಪಾಲ್ ಅವರ ಸಾರ್ವಕಾಲಿಕ ನುಡಿಯಿದು: 'ವಿಜ್ಞಾನವು ಧರ್ಮವನ್ನು ದೋಷ ಹಾಗೂ ಮೌಢ್ಯದಿಂದ ದೂರವಿಡುತ್ತದೆ. ಧರ್ಮವು ವಿಜ್ಞಾನವನ್ನು ನಿರಂಕುಶ ನಿಲುವಿನಿಂದ ಬೇರ್ಪಡಿಸುತ್ತದೆ'. 'ಸಂಪ್ರದಾಯವೆಂಬ ನೀರಿನಲ್ಲಿ ಈಜುವುದು ಸರಿಯೆ, ಆದರೆ ಮುಳುಗುವುದು ಆತ್ಮಹತ್ಯೆಯಾದೀತು' ಎಂದು ಗಾಂಧೀಜಿ ಎಚ್ಚರಿಸಿದ್ದರು.

ಅಂಧಶ್ರದ್ಧೆ, ಮೂಢಾಚರಣೆಗಳಿಗೆ ಶಿಕ್ಷಣದ ಕೊರತೆಯನ್ನೇ ಗುರಿಯಾಗಿಸುತ್ತೇವೆ. ಆದರೆ ಅನಕ್ಷರಸ್ಥರಿಗಿಂತಲೂ ಸಾಕ್ಷರರಲ್ಲೇ ಹೆಚ್ಚಾಗಿ ಅವು ತಾಂಡವವಾಡುತ್ತವೆ! ಏನೋ ನಮ್ಮ ಪೂರ್ವಜರು ಹೀಗೆ ನಡೆದುಕೊಳ್ಳುತ್ತಿದ್ದರು, ನಾವೂ ಪಾಲಿಸುತ್ತಿದ್ದೇವೆ ಎಂಬ (ಅ)ಸಮರ್ಥನೆಗಳು. ಅವರವರ ನಂಬಿಕೆ ಬಿಡಿ ಎನ್ನುವ ಇತರರ ವಕಾಲತ್ತುಗಳೂ ಕಂದಾಚಾರಗಳಿಗೆ ದಕ್ಕಿರುತ್ತವೆ. ದಸರೆ ಸಂದರ್ಭದಲ್ಲಿ ಆಂಧ್ರ ಪ್ರದೇಶದ ದೇವರಗಟ್ಟು ದೇಗುಲದಲ್ಲಿ ಭಕ್ತರು ಪರಸ್ಪರ ಹಣೆಗೆ ಪೆಟ್ಟಾಗುವಂತೆ ದೊಣ್ಣೆಗಳಿಂದ ಹೊಡೆದಾಡಿಕೊಳ್ಳುತ್ತಾರೆ. ಕೆಲ ವರ್ಷಗಳ ಹಿಂದೆ ಭಕ್ತಿಯ ಅತಿರೇಕದಲ್ಲಿ ಒಬ್ಬ ತನ್ನ ಎರಡೂ ಕಣ್ಣುಗಳನ್ನು ಕಿತ್ತುಕೊಂಡ ಕರುಣಾಜನಕ ಪ್ರಸಂಗ ನಡೆದಿತ್ತು. ಇಂಥ ಆತ್ಮವಿಕೃತಿಗಳು ಪ್ರಕೃತಿಗೆ ವಿರುದ್ಧದ ನಡೆಗಳು.

ಅಮೆರಿಕದ ಪ್ರಸಿದ್ಧ ದೇವತಾಶಾಸ್ತ್ರಜ್ಞ ವಿಲಿಯಮ್ ಕ್ಯಾವನಾಗ್ 'ಧಾರ್ಮಿಕ ಹಿಂಸೆ' ಧಾರ್ಮಿಕವೇ ಅಲ್ಲ, ಅದೊಂದು ಮೂಲ ಸ್ವರೂಪದ ವಿಕೃತಿ ಎನ್ನುತ್ತಾರೆ. ಭಾರತದ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಮಾನಸಿಕ ದುರ್ಬಲರನ್ನು ಹೊಡೆಯುವ ರೂಢಿಯಿದೆ. ರೋಗ ಪ್ರತಿರೋಧ ಶಕ್ತಿ ಹೆಚ್ಚುವುದೆಂದು ಭಾವಿಸಿ ಮಕ್ಕಳನ್ನು 20-30 ಅಡಿಗಳ ಮೇಲಿನಿಂದ ಎಸೆಯಲಾಗುತ್ತದೆ! ಕೆಳಗೆ ಅವರನ್ನು ಆತುಕೊಳ್ಳಲು ಬಟ್ಟೆ ಹಿಡಿಯುವವರಿರುವುದು ಸರಿ. ಆದರೆ ಕಂದಮ್ಮಗಳು, ಪೋಷಕರು ಅನುಭವಿಸುವ ತಲ್ಲಣ, ಭಯ ಕಲ್ಪಿಸಿಕೊಳ್ಳಲಾಗದು. ಸತ್ಯದ ಪ್ರಮಾಣಕ್ಕೆ ಅಂಗೈಯಲ್ಲಿ ಕರ್ಪೂರ ಉರಿಸುವುದು, ಕಾದ ಎಣ್ಣೆಯಲ್ಲಿ ಕೈ ಅದ್ದುವುದು ಅದೆಷ್ಟು ಭೀಕರ. ನಾಲಿಗೆ ಚುಚ್ಚಿಕೊಳ್ಳುವುದು, ಗಲ್ಲದಿಂದ ಗಲ್ಲಕ್ಕೆ ದಬ್ಬಳ ತೂರಿಸಿಕೊಳ್ಳುವುದು, ತಲೆಯಮೇಲೆ ತೆಂಗಿನಕಾಯಿ ಒಡೆಸಿಕೊಳ್ಳುವುದು, ಮುಳ್ಳಿನ ಮೇಲೆ ನಿಲ್ಲುವಂತಹ ಸ್ವಹಿಂಸೆಗಳು ನೋಡುಗರಿಗೇ ಸಹಿಸುವುದು ಶಿಕ್ಷೆಯಾಗುತ್ತವೆ. ಇವೆಲ್ಲವನ್ನೂ ಮೀರಿಸುವಂತೆ 'ಸಿಡಿ' ಎಂಬ ಅತಿ ಕ್ರೂರ ಸ್ವದಂಡನೆ. ಬೆನ್ನಿಗೆ ಕೊಕ್ಕೆ ಸಿಕ್ಕಿಸಿಕೊಂಡು ಉಯ್ಯಾಲೆಯಾಡುವುದು, ಬಂಡಿ ಎಳೆಯುವುದು. ಶರೀರ ಸೊರಗಿಸಿಕೊಳ್ಳುವುದರಿಂದ ಯಾವ ಸದ್ಗತಿ, ಸೌಖ್ಯ, ಪುರುಷಾರ್ಥ?

ಅಪ್ರತಿಮ ವಿಚಾರವಾದಿ ಬುದ್ಧನ ಕುರಿತ ಒಂದು ಕಥೆ ಸ್ವಾರಸ್ಯಕರವಾಗಿದೆ. ಬುದ್ಧ ತನ್ನ ಆಪ್ತ ಶಿಷ್ಯ ಆನಂದನನ್ನು ಒಂದು ದಿನ ಕರೆದು 'ನೀನಿಂದು ತುರ್ತಾಗಿ ತಲೆ ಬೋಳಿಸಿಕೊಳ್ಳಬೇಕು' ಎಂದು ಆದೇಶಿಸುತ್ತಾನೆ. ಆನಂದ ಗುರುವಿನ ಆಜ್ಞಾನುಸಾರ ನಡೆದುಕೊಳ್ಳುತ್ತಾನೆ. ಈ ಘಟನೆಯಾದ ಆರು ತಿಂಗಳಿಗೆ ಆನಂದ ಆ ತನಕ ತನ್ನ ತಲೆಗೂದಲು ಜಟೆಯಂತೆ ಬೆಳೆದಿದ್ದ ಕಾರಣ ಗುರುವಿನ ಅಪ್ಪಣೆಗೆ ಕಾಯದೆ ತಾನಾಗಿಯೇ ತಲೆ ಬೋಳಿಸಿಕೊಳ್ಳುತ್ತಾನೆ. ಬುದ್ಧ ಶಿಷ್ಯನನ್ನು ಮೆಚ್ಚುವ ಬದಲು ರೇಗುತ್ತಾನೆ. 'ಇದೇನು ವಿಚಿತ್ರ ಗುರುಗಳೇ, ತಾವು ನನ್ನನ್ನು ಹೊಗಳುವಿರೆಂದು ಭಾವಿಸಿದ್ದೆ....ಹೀಗೆ ದೂಷಿಸಿದಿರಲ್ಲ?' ಅಂತ ಖಿನ್ನನಾಗುತ್ತಾನೆ ಆನಂದ.

'ಅಲ್ಲಪ್ಪ, ಅಂದು ಗುಹೆಯೊಳಗೆ ನೀನು ನನಗೆ ಅಮೂಲ್ಯ ತಾಳೆಪತ್ರಗಳನ್ನು ಹುಡುಕುವುದಿತ್ತು. ಕತ್ತಲೆಯನ್ನು ನಿನ್ನ ತಲೆಗೂದಲು ಮತ್ತೂ ಹೆಚ್ಚಿಸದಿರಲಿ ಅಂತ ತಲೆ ಬೋಳಿಸಿಕೊಳ್ಳುವಂತೆ ಸೂಚಿಸಿದೆ. ಇಂದು ನಿನಗೆ ಆ ಕೆಲಸವಿಲ್ಲ, ಬೋಳಿಸುವ ಅಗತ್ಯವೂ ಇಲ್ಲ. ಅಂದೇ ನೀನು ನನ್ನನ್ನು ಏಕೆ, ಏನು ಅಂತ ವಿಚಾರಿಸ ಬಹುದಿತ್ತು. ಅದಕ್ಕೇ ಹೇಳುವುದು, ಪ್ರಶ್ನಿಸದೆ ಯಾವುದೇ ಕೆಲಸ ಮಾಡಬಾರದೆಂದು' ಎಂದನಂತೆ ಬುದ್ಧ. ಎರಡೂವರೆ ಸಹಸ್ರಮಾನಗಳ ಹಿಂದೆಯೇ ಆವಿರ್ಭವಿಸಿತ್ತು ಆ ಪ್ರಖರ ವೈಚಾರಿಕತೆ. ಕ್ರಾಂತಿಯೋಗಿ ಬಸವೇಶ್ವರರು 'ಮಂಡೆ ಬೋಳಾದರೇನು ಮನ ಬೋಳಾಗದನಕ್ಕ' ಎಂದಿದ್ದಾರೆ. ಧರ್ಮ, ಧಾರ್ಮಿಕ ಆಚರಣೆಗಳಿಗಿಂತ ಮನುಷ್ಯನೇ ದೊಡ್ಡವನು.

ಪುರುಷ ಮತ್ತು ಸ್ತ್ರೀಯರಿಗೆ ಸಮಾನ ಶಿಕ್ಷಣ ನೀಡಿಕೆಯು ಮೌಢ್ಯಾಚರಣೆಗಳನ್ನು ಹತ್ತಿಕ್ಕುವ ಪ್ರಬಲ ಅಸ್ತ್ರ. ಇದಕ್ಕೆ ಪೂರಕವಾಗಿ ಅಂಧಶ್ರದ್ಧೆಯ ದುಷ್ಪರಿಣಾಮಗಳನ್ನು ಬಿಂಬಿಸುವ ಬೀದಿ ನಾಟಕಗಳ ಏರ್ಪಾಟು, ಚರ್ಚೆ ಹಾಗೂ ಸಂವಾದಗಳು ವ್ಯಾಪಕವಾಗಿ ಸಾಗಿದರೆ ಜನಜಾಗೃತಿ ಮೂಡುತ್ತದೆ. ತನ್ನ ಆತ್ಮಸಾಕ್ಷಿ ಮೆಚ್ಚುವಂತೆ ನಡೆದರೆ ಅದಕ್ಕಿಂತ ಪ್ರಮಾಣ ಬೇಡ. ಪ್ರಕೃತಿಯ ಕ್ರೂರ ಅಣಕವಾದ ಆತ್ಮಹಿಂಸೆ ಒಂದು ವ್ಯಸನ, ಭ್ರಮೆ. ಅದರ ಶಮನಕ್ಕೆ ಆತ್ಮವಿಶ್ವಾಸವೆಂಬ ಸಂಜೀವಿನಿಯನ್ನು ಸ್ವತಃ ದಕ್ಕಿಸಿಕೊಳ್ಳುವುದೇ ಶ್ರೇಷ್ಠ ಮಾರ್ಗ.

ವಾಚಕರ ವಾಣಿ

ಯಥಾ ಜನಪ್ರತಿನಿಧಿ ತಥಾ...

'ಯಥಾ ರಾಜ ತಥಾ ಪ್ರಜಾ' ಎಂಬ ಮಾತು ಸರ್ವಕಾಲಕ್ಕೂ ಅನ್ವಯವಾಗುತ್ತದೆ ಎಂಬುದನ್ನು ಆರೋಗ್ಯ ಸಚಿವರ ಅಂಗರಕ್ಷಕ ಮತ್ತು ಚಾಲಕ ಸಾಬೀತುಪಡಿಸಿದ್ದಾರೆ. ಇವರಿಬ್ಬರೂ ಬೀದಿಯಲ್ಲಿ ಪರಸ್ಪರ ಗುದ್ದಾಡಿರುವ ಸುದ್ದಿಗೆ ಮಹತ್ವ ಕೊಡುವ ಅವಶ್ಯಕತೆ ಇಲ್ಲ. ಏಕೆಂದರೆ, ನೋಡಿ ಕಲಿ ಮಾಡಿ ನಲಿ ಎಂಬಂತೆ, ಇವರುಗಳು ಸೇವೆ ಸಲ್ಲಿಸುವ ಜನಪ್ರತಿನಿಧಿಗಳು (ಪಕ್ಷಾತೀತವಾಗಿ) ಸದನದೊಳಗೆ ಗುದ್ದಾಡುತ್ತಾರೆ, ಆ ಒಂದು ಮುಲಾಜಿನ ಮೇಲೆ ಇವರು ಹೊರಗೆ ಗುದ್ದಾಡಿದ್ದಾರೆ.

ಸಮಾಜಕ್ಕೆ ಮಾರ್ಗದರ್ಶಕರಾಗಬೇಕಾದವರಲ್ಲೇ ಶಿಸ್ತು, ಸಂಯಮ ಇಲ್ಲದಾದಾಗ ಇತರರಲ್ಲಿ ಅದನ್ನು ಕಾಣಬಯಸುವುದು ಮೂರ್ಖತನ. ಇನ್ನಾದರೂ ನಮ್ಮನ್ನು ಆಳುವ ನಾಯಕರು ಸದನದೊಳಗೆ ಸಭ್ಯತೆ, ಸಜ್ಜನಿಕೆಯ ವರ್ತನೆಯಿಂದ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನಿಸಲಿ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಈ ಬಗೆಯ 'ಸ್ವಾರಸ್ಯಕರ' ಚರ್ಚೆ ತರವೇ?

'ಬಟ್ಟೆ ಹಾಕೋ ಬಗ್ಗೆ ಮಾತನಾಡಿ, ಕಳಚೋ ಬಗ್ಗೆ ಬೇಡ' ಎಂಬ ತಲೆಬರಹದಡಿ ಪ್ರಕಟವಾಗಿರುವ, ಸದನದಲ್ಲಿ ನಡೆದ ಸ್ವಾರಸ್ಯಕರ ಚರ್ಚೆ ಕುರಿತ ಸುದ್ದಿ (ಪ್ರ.ವಾ., ಮಾರ್ಚ್ 20) ಓದಿದಾಗ, ಸದನದ ಅಮೂಲ್ಯ ಸಮಯವನ್ನು ಜನಪ್ರತಿನಿಧಿಗಳು ತಮ್ಮ ವೈಯಕ್ತಿಕ ಅಭಿರುಚಿಯ ಬಗ್ಗೆ, ಉಡುಪಿನ ಬಗ್ಗೆ, ಊಟದ ಬಗ್ಗೆ ಚರ್ಚಿಸಲು ಬಳಸುವುದು ಸಮಂಜಸವೇ ಎಂಬ ಪ್ರಶ್ನೆ ಮೂಡಿತು. ಈ ತರಹದ 'ಸ್ವಾರಸ್ಯಕರ ಚರ್ಚೆಗಳು' ಸದನದಲ್ಲಿ ಆಗಾಗ ನಡೆಯುತ್ತಿರುತ್ತವೆ. ಪ್ರಜ್ಞಾವಂತ ಜನಪ್ರತಿನಿಧಿಗಳು ಇವುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ಉತ್ತಮ. ಇಂತಹ ಚರ್ಚೆಗಳನ್ನು ಬೇಕಾದರೆ ತಮ್ಮ ಖಾಸಗಿ ವಲಯದಲ್ಲಿ ನಡೆಸಬಹುದು.

ಡಾ. ಮಲ್ಲಿಕಾರ್ಜುನ ಸಜ್ಜನರ, ಬಾಗಲಕೋಟೆ

ಸೌಜನ್ಯದ ವರ್ತನೆ ಹೊಸದಲ್ಲ

ಕೋವಿಡ್ ವ್ಯಾಕ್ಸಿನ್ ಪಡೆದವರು ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರ ಹಾಕಿ, ಒಂದು ಸಣ್ಣ ಟಿಪ್ಪಣಿ ಹಾಕುತ್ತಿದ್ದಾರೆ. ಇತರರಿಗೆ ಧೈರ್ಯ ತುಂಬುವ ದಿಸೆಯಲ್ಲಿ ಇದು ಸ್ವಾಗತಾರ್ಹ. ಆದರೆ ಟಿಪ್ಪಣಿಯಲ್ಲಿ ಕೆಲವರು 'ಸರ್ಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ಸಿಬ್ಬಂದಿ ತುಂಬಾ ಸೌಜನ್ಯದಿಂದ ವರ್ತಿಸಿದರು' ಎಂಬ ಮಾತು ಸೇರಿಸಿರುತ್ತಾರೆ. ಆದರೆ ಈ ಆರೋಗ್ಯ ಸಿಬ್ಬಂದಿ, ಅದರಲ್ಲಿಯೂ ಕ್ಷೇತ್ರ ಕಾರ್ಯಕರ್ತರು ಲಾಗಾಯ್ತಿನಿಂದಲೂ ಅತ್ಯಂತ ಪ್ರತಿಕೂಲ ಸನ್ನಿವೇಶದಲ್ಲಿಯೂ ಸಹನೆಯಿಂದ, ಸೌಜನ್ಯದಿಂದ ವರ್ತಿಸಿದ್ದಾರೆ. ತುಂಬಾ ದಕ್ಷತೆಯಿಂದ ಸಮರ್ಪಕವಾಗಿ ಕೆಲಸ ಮಾಡಿದ್ದಾರೆ. ಹೀಗಾಗಿಯೇ ನಮ್ಮ ಜನನ ದರ ಮತ್ತು ಮರಣ ದರ ಗಮನಾರ್ಹ ಪ್ರಮಾಣದಲ್ಲಿ ಇಳಿಯಲು ಸಾಧ್ಯವಾಗಿದೆ. ಲಸಿಕೆಯಿಂದ ತಡೆಯಬಹುದಾದ ಅನೇಕ ಸಾಂಕ್ರಾಮಿಕ ರೋಗಗಳು ನಿಯಂತ್ರಣಕ್ಕೆ ಬಂದಿವೆ. ರಾಜ್ಯದಲ್ಲಿ ತಾಯಂದಿರು– ಮಕ್ಕಳ ಸಾವು ನೋವು ಕಡಿಮೆಯಾಗಿದೆ. ಅದು ದೇಶದ ಅಭಿವೃದ್ಧಿಯ ಸೂಚ್ಯಂಕವೂ ಹೌದು. ಇದು ಯಾವುದೇ ಮಂತ್ರದಂಡದಿಂದ ಆಗಲಿಲ್ಲ.

ಇದಕ್ಕಾಗಿ ಆರೋಗ್ಯ ಕಾರ್ಯಕರ್ತರು ಲೋಕದ ಕಣ್ಣಿಗೆ ಕಾಣಿಸಿಕೊಳ್ಳದೆ ನೇಪಥ್ಯದಲ್ಲಿಯೇ ಸೇವೆ ಮಾಡಿದ್ದಾರೆ. ಆದರೆ ಆಗ ನಮಗೆ ನೋಡುವ ಕಣ್ಣುಗಳಿರಲಿಲ್ಲ. ಆ ಕಾರಣಕ್ಕೇ ಈಗ 'ಸೌಜನ್ಯ ಮತ್ತು ಪ್ರೀತಿಯಿಂದ ಸೇವೆ ನೀಡಿದರು' ಎಂದು ಹೇಳುತ್ತಿದ್ದೇವೆ. ಈ ಅನುಭವದಿಂದಲಾದರೂ ಸರ್ಕಾರಿ ಆಸ್ಪತ್ರೆಗಳು ಉಳಿಯುವಂತೆ ಆಗಬೇಕು.

ಕೆ.ವೆಂಕಟರಾಜು, ಚಾಮರಾಜನಗರ

ಅಂತರ್ಜಾತಿ ಮದುವೆ: ಚರ್ಚೆ ದಾರಿ ತಪ್ಪದಿರಲಿ

ಸಾರ್ವಜನಿಕ ಚರ್ಚೆಗಳು ಹೇಗೆ ದಾರಿ ತಪ್ಪುತ್ತವೆ ಅಥವಾ ಅವನ್ನು ದಾರಿ ತಪ್ಪಿಸಲಾಗುತ್ತದೆ ಎಂಬುದಕ್ಕೆ ಪೇಜಾವರ ಮಠಾಧೀಶರು ಅಂತರ್ಜಾತಿ ವಿವಾಹಗಳನ್ನು ತಡೆಯಲು ನೀಡಿದ ಸೂಚನೆಯನ್ನೋ, ಸಲಹೆಯನ್ನೋ ಕುರಿತು 'ವಾಚಕರ ವಾಣಿ'ಯಲ್ಲಿ ನಡೆದಿರುವ ಚರ್ಚೆ ಒಂದು ಉದಾಹರಣೆಯಾಗಿದೆ. ಏಕೆಂದರೆ, ಈ ಸಂಬಂಧ ನಿಜವಾಗಿ ಚರ್ಚೆಯಾಗಬೇಕಿದ್ದುದು ಮಠಗಳೆಲ್ಲವೂ ಜಾತಿ ಮಠಗಳಾಗಿರುವ ಇಂದಿನ ದಿನಗಳಲ್ಲಿ ಮಠಾಧೀಶರು ಅಂತರ್ಜಾತಿ ವಿವಾಹಗಳ ವಿರುದ್ಧ ಏಕೆ ಮಾತನಾಡುವರು ಎಂಬುದರ ಬಗ್ಗೆ. ಅಂದರೆ ಇದಕ್ಕೆ ಕಾರಣ ಜಾತಿ ವ್ಯವಸ್ಥೆ ಧರ್ಮದ ಅವಿಭಾಜ್ಯ ಅಂಗ ಎಂಬ ಅವರ ನಂಬಿಕೆಯೇ ಅಥವಾ ಅವರ ಮಠದ ಜಾತಿ ಬಲ ಕುಗ್ಗುವ ಅವರ ಆತಂಕವೋ ಎಂಬುದು ಚರ್ಚೆಗೆ ಗ್ರಾಸವಾಗಬೇಕಿತ್ತು. ತಂತಮ್ಮ ಮಠಗಳ ಜಾತಿಬಲದ ಗಾತ್ರ ಕುಗ್ಗದಂತೆ ನೋಡಿಕೊಳ್ಳುವುದು ಆಯಾ ಮಠಾಧಿಪತಿಗಳ ಅಗತ್ಯ ಕಾಳಜಿಯೇ ಇರಬಹುದು. ಆದರೆ ಜಾತಿ ವ್ಯವಸ್ಥೆ ನಮ್ಮ ಧರ್ಮದ ಅವಿಭಾಜ್ಯ ಅಂಗವೆಂದು ನಂಬುವುದು ಮತ್ತು ಅದನ್ನು ವಿವಿಧ ರೂಪಗಳಲ್ಲಿ ಪ್ರತಿಪಾದಿಸುವುದು ಎಷ್ಟು ಸರಿ ಎನ್ನುವುದು ತುರ್ತಾಗಿ ಸಾರ್ವಜನಿಕ ಚರ್ಚೆಯಾಗಬೇಕಾದ ವಿಷಯವಾಗಿದೆ. ಏಕೆಂದರೆ, ಇಂತಹ ಪ್ರತಿಪಾದನೆಗೆ ಸಾರ್ವಜನಿಕವಾಗಿ ಹಿಂಜರಿಯುತ್ತಿದ್ದ ಜನಕ್ಕೆ ಈಗ ಇದನ್ನು ಹೀಗೆ ಪ್ರತಿಪಾದಿಸಬಲ್ಲ ವಿಶ್ವಾಸ ಎಲ್ಲಿಂದ ಬಂದಿದೆ ಎಂಬುದೂ ಚಿಂತನಾರ್ಹ ವಿಷಯವೇ ಆಗಿದೆ. ಈ 'ವಿಶ್ವಾಸ' ಹೀಗೇ ಮುಂದುವರಿದು ಬಲಗೊಂಡರೆ, ಅಸ್ಪೃಶ್ಯತೆಯ ಆಚರಣೆ, ವಿಧವಾ ವಿವಾಹ ನಿಷೇಧ ಮುಂತಾದವೂ ನಮ್ಮ ಧರ್ಮದ ಅವಿಭಾಜ್ಯ ಅಂಗಗಳು, ಅವುಗಳ ವಿರುದ್ಧದ ಕಾರ್ಯಕ್ರಮಗಳನ್ನೂ ತಡೆಯಬೇಕು ಎಂಬ ಕರೆಯೂ ಹುಟ್ಟಿಕೊಂಡು, ಅದು ಸಮರ್ಪಕವಾಗಿ ಕಾಣುವ ದಿನಗಳೂ ಬೇಗ ಬಂದಾವು.

ಅಂತರ್ಜಾತಿ ವಿವಾಹಗಳ ಪ್ರಸ್ತಾಪ ಬಂದಾಗಲೆಲ್ಲ ಸಹಬಾಳ್ವೆಯ ಚರ್ಚೆ ಮಾಡುವವರು ಮೂಲತಃ ಸದರಿ ಮಠಾಧಿಪತಿಗಳ ಕರೆಯ ಬಗ್ಗೆ ಸಹಾನುಭೂತಿ ಹೊಂದಿದವರೇ ಎಂದು ಹೇಳಬೇಕು. ಏಕೆಂದರೆ ಮದುವೆ ಸಜಾತಿಯದೇ ಆಗಿರಲಿ, ಅಂತರ್ಜಾತಿಯದೇ ಆಗಿರಲಿ, ಅದು ಮದುವೆಯೇ. ಗಂಡು– ಹೆಣ್ಣು ಸಹಬಾಳ್ವೆ ನಡೆಸಲು ಮಾಡಿಕೊಂಡ ಒಂದು ಒಪ್ಪಂದ. ಅಂತರ್ಜಾತಿ ಮದುವೆಗಳಲ್ಲಿ ಒಡೆದುಹೋಗುವ ಮದುವೆಗಳ ಸಂಖ್ಯೆ ಹೆಚ್ಚು ಎಂಬ ಸುದ್ದಿ ಪ್ರಚಲಿತದಲ್ಲಿರಲು ಕಾರಣ ಇಂತಹ ಮದುವೆಗಳು ಹೆಚ್ಚು ಸುದ್ದಿಯಾಗುವುದೇ ಆಗಿದೆ. ಸಾಂಪ್ರದಾಯಿಕ ಮದುವೆಗಳಲ್ಲಿ ಸಹಬಾಳ್ವೆ ಎಂಬುದು ಹಲವು ಪ್ರಸಂಗಗಳಲ್ಲಿ ದಂಪತಿಗಳ ಮೇಲಿನ ಒಂದು ಸಾಮಾಜಿಕ ನಿರ್ಬಂಧವಾಗಿ, ದಿನನಿತ್ಯದ ಹಿಂಸೆಯಾಗಿ ಕಾಡಬಲ್ಲದು. ಇದು ಅಂತರ್ಜಾತಿ ಮದುವೆಗಳಲ್ಲಿ ಕಂಡುಬರುವ ಒಡಕು, ದಂಪತಿಗಳಿಬ್ಬರಿಗೂ ನೆಮ್ಮದಿ ಒದಗಿಸುವ ವಿಚ್ಛೇದನಗಳಲ್ಲಿ ಕೊನೆಗೊಳ್ಳುವುದಕ್ಕಿಂತ ಹೆಚ್ಚು ಉತ್ತಮ ಎನ್ನುವವರು ಮಾತ್ರ ಇಂತಹ ಸಹಬಾಳ್ವೆಯ ಬರಡು ಚರ್ಚೆಯನ್ನು ಆರಂಭಿಸುತ್ತಾರೆ ಎನಿಸುತ್ತದೆ.

ಸವಿತಾ ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ನೀರ ನೆಮ್ಮದಿ’ಯ ಕಟ್ಟಗಳು

• ಸಂಧ್ಯಾ ಹೆಗಡೆ

ದಕ್ಷಿಣ ಕನ್ನಡ ಮತ್ತು ಕಾಸರಗೋಡು ಭಾಗದಲ್ಲಿ ಹರಿವ ತೊರೆಗಳು, ತೋಡುಗಳು, ಹಳ್ಳ–ಹೊಳೆಗಳಿಗೆ ನಿರ್ಮಾಣ ಮಾಡುವ ಸಣ್ಣ ಒಡ್ಡುಗಳಿಗೆ ‘ಕಟ್ಟ’ ಎನ್ನುತ್ತಾರೆ. ಇದು ತಾವು ಕಲಿತ ನೆಲಮೂಲದ ಜ್ಞಾನದಿಂದ ರೈತರೇ ನಿರ್ಮಾಣ ಮಾಡಿಕೊಳ್ಳುವ ಪಾರಂಪರಿಕ ಜಲ ಸಂರಕ್ಷಣಾ ರಚನೆ.

ಪ್ರತಿ ವರ್ಷ ಮಳೆಗಾಲ ಮುಗಿದ ನಂತರ, ಬೇಸಿಗೆ ಆರಂಭಕ್ಕೆ ಮುನ್ನ ಕಟ್ಟ ನಿರ್ಮಾಣ ಕೆಲಸ ಶುರು. ಈ ಸಮಯದಲ್ಲಿ ಹಳ್ಳ–ಹೊಳೆಗಳಿಗೆ ಕಟ್ಟ ಕಟ್ಟಿದರೆ ಮಾತ್ರ ಬೇಸಿಗೆಯಲ್ಲಿ ಕೃಷಿಗೆ, ಮನೆ ಬಳಕೆಗೆ ನೀರು, ಇಲ್ಲದಿದ್ದರೆ ಜಲ ಕ್ಷಾಮ. ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಹಳ್ಳಿಗಳು ಜಲಕ್ಷಾಮದ ಭಯವಿಲ್ಲದೇ ಬೇಸಿಗೆಯಲ್ಲಿ ತಂಪಾಗಿರುತ್ತವೆ. ಇದಕ್ಕೆ ಕಾರಣ, ‘ಕಟ್ಟ’ಗಳು ಅರ್ಥಾತ್ ಸಣ್ಣ ಒಡ್ಡುಗಳು.

‘ಕಟ್ಟ ಸಂಸ್ಕೃತಿ 75 ವರ್ಷಗಳಷ್ಟು ಹಳೆಯದೆಂದು ಭಾವಿಸಿದ್ದೆವು. ಆದರೆ, 1934ರ ಬ್ರಿಟಿಷರ ಆಳ್ವಿಕೆಯಲ್ಲಿ ಆಗಿನ ಡಿಸ್ಟ್ರಿಕ್ಟ್ ಕಲೆಕ್ಟರ್, ಕೃಷಿಕರಿಗೆ ಕಟ್ಟ ಕಟ್ಟಲು ತಿಳಿಸಿರುವ ದಾಖಲೆಗಳು ಸಿಕ್ಕ ಮೇಲೆ, ಅದಕ್ಕಿಂತ ಪುರಾತನ ಹಿನ್ನೆಲೆ ಇರುವುದು ಗೊತ್ತಾಯಿತು’ ಎನ್ನುತ್ತಾರೆ ಏತಡ್ಕದಲ್ಲಿ ಕಟ್ಟ ಸಂಸ್ಕೃತಿಗೆ ಮರುಜೀವ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಚಂದ್ರಶೇಖರ ಏತಡ್ಕ.

80ರ ದಶಕದ ಆರಂಭದವರೆಗೂ ಕಟ್ಟ ನಿರ್ಮಾಣ ವಾರ್ಷಿಕ ಕಾರ್ಯಸೂಚಿಯ ಭಾಗವಾಗಿತ್ತು. ಬರನಿರೋಧಕಗಳಾಗಿ ಕೆಲಸ ಮಾಡಿದ ಕಟ್ಟಗಳು ಕೃಷಿ ವಿಸ್ತರಣೆಗೆ ನೆರವಾದವು. ಆಧುನಿಕ ಯಂತ್ರಗಳು ಹಳ್ಳಿಗೆ ನುಗ್ಗಿ ಬೋರ್‌ವೆಲ್ ಕೊರೆಯಲಾರಂಭಿಸಿದಾಗ, ನಿಧಾನವಾಗಿ ಕಟ್ಟಗಳ ಬಗ್ಗೆ ಉದಾಸೀನ ಬೆಳೆಯಿತು. ಆದರೆ, ಹಿರಿಯರು, ಜಲತಜ್ಞರ ಎಚ್ಚರದಿಂದಾಗಿ ಪುನಃ ಕಟ್ಟಗಳ ನಿರ್ಮಾಣಕ್ಕೆ ಒತ್ತು ದೊರೆಯಿತು’ ಎಂದು ಚಂದ್ರಶೇಖರ್ ಹೆಮ್ಮೆಯಿಂದ ಹೇಳುತ್ತಾರೆ.

> **ದಕ್ಷಿಣ ಕನ್ನಡ, ಕಾಸರಗೋಡು ಭಾಗದಲ್ಲಿ ಜನರಿಂದಲೇ ಕಟ್ಟಗಳು ನಿರ್ಮಾಣವಾಗುತ್ತವೆ. ಪಾಲುದಾರಿಕೆಯಲ್ಲಿ ಲಕ್ಷಾಂತರ ರೂಪಾಯಿ ವ್ಯಯಿಸುತ್ತಾರೆ. ಹೊಸ ಪೀಳಿಗೆಯವರೂ ಅತ್ಯುತ್ಸಾಹದಿಂದ ದೇಗುಲ ಕಟ್ಟುವಷ್ಟು ಶ್ರದ್ಧೆಯಿಂದ ಇಲ್ಲಿ ಕಟ್ಟ ಕಟ್ಟುತ್ತಾರೆ**
> **ಶ್ರೀಪಡ್ರೆ**, ಜಲತಜ್ಞ

ಕಳೆದೊಂದು ದಶಕದಿಂದ ಈ ಭಾಗದ ಕೃಷಿಕರು ಕಟ್ಟ ನಿರ್ಮಾಣವನ್ನು ಆಂದೋಲನ ಮತ್ತು ಹಬ್ಬ ರೀತಿ ನಡೆಸುತ್ತಾರೆ. ಏತಡ್ಕದಲ್ಲಿ ನವೆಂಬರ್ 15 ಅನ್ನು ‘ಕಟ್ಟ ದಿನ’ ಎಂದು ಆಚರಿಸುತ್ತಾರೆ. ಅಂದರೆ, ಅಂದಿನಿಂದ ಕಟ್ಟ ನಿರ್ಮಾಣದ ಸಿದ್ಧತೆಗಳು ಆರಂಭವಾಗುತ್ತವೆ. ಡಿಸೆಂಬರ್ ಮಧ್ಯದೊಳಗೆ ತೋಡಿನ ನಡುವೆ ಎತ್ತರದ ಒಡ್ಡುಗಳು ಮೇಲೆದ್ದು, ಓಡುವ ಜಲಕ್ಕೆ ಲಗಾಮು ಹಾಕುತ್ತವೆ. ಹಳ್ಳಿಗರಿಗೆ ಇದು ಬರೀ ನೀರಲ್ಲ, ಪವಿತ್ರ ಗಂಗೆ. ಹೀಗಾಗಿಯೇ ಅವರು ಕಟ್ಟ ಕಟ್ಟುವಾಗ ಕಾಲಿಗೆ ಚಪ್ಪಲಿಯನ್ನೂ ಧರಿಸುವುದಿಲ್ಲ. ಕೆಲಸ ಪೂರ್ಣಗೊಂಡ ಮೇಲೆ ಕಟ್ಟಕ್ಕೆ ಪ್ರಾರ್ಥನೆ ಸಲ್ಲಿಸುತ್ತಾರೆ.

ಕೃಷಿಕರು ನಿರ್ಮಿಸಿರುವ ಸಾಂಪ್ರದಾಯಿಕ ಕಟ್ಟಗಳ ಮಾದರಿಯಿಂದ ಉತ್ತೇಜನಗೊಂಡ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ರಾಜ್ ಮೋಹನ್ ಅವರು, ಜಿಲ್ಲೆಯ ವಿವಿಧೆಡೆ ನೂರಾರು ಕಟ್ಟಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸಿದ್ದಾರೆ ಎಂದು ಚಂದ್ರಶೇಖರ ಏತಡ್ಕ ಹೇಳುತ್ತಾರೆ.

ಏತಡ್ಕದಲ್ಲಿ ಈಗಲೂ ಸಾಂಪ್ರದಾಯಿಕ ರೀತಿಯಲ್ಲಿ ಕಲ್ಲು ಮತ್ತು ಮಣ್ಣಿನಿಂದ ಕಟ್ಟುತ್ತಿರುವ ಓಡಂಗಲ್ಲು ಕಟ್ಟ

> ಜಲಕ್ಷಾಮ ಈ ಜಗತ್ತಿನ ಮುಂದೆ ಇರುವ ಬಿಕ್ಕಟ್ಟುಗಳಲ್ಲಿ ಅತ್ಯಂತ ಗಂಭೀರವಾದುದು. ನಮ್ಮ ದೇಶದಲ್ಲಿ ಕೂಡ ಈ ಸಮಸ್ಯೆ ತೀವ್ರವಾಗಿದೆ. ಒಟ್ಟು ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಶುದ್ಧ ಕುಡಿಯುವ ನೀರು ದೊರಕುತ್ತಿಲ್ಲ ಎಂದು ವರದಿಗಳು ಹೇಳುತ್ತಿವೆ. ಹಾಗಾಗಿಯೇ ನೀರು ಸಂರಕ್ಷಣೆ ಈಗಿನ ಜರೂರು. ರಾಜ್ಯದ ವಿವಿಧೆಡೆ ನಡೆದಿರುವ ಜಲಸಂರಕ್ಷಣೆಯ ಪ್ರಯತ್ನಗಳ ಬಗೆಗಿನ ವರದಿ ಇಲ್ಲಿವೆ. ಇದು **ವಿಶ್ವ ಜಲದಿನ**ದ ವಿಶೇಷ.

ಕಲ್ಯಾಣಿಗಳ ಪುನಶ್ಚೇತನ

• ಆರ್.ಜಿತೇಂದ್ರ

ಚಂದುರಾಯನಹಳ್ಳಿ ಸಮೀಪದ ಸಿದ್ದಗಂಗಯ್ಯನ ಪಾಳ್ಯದ ದೇವಾಲಯದ ಬಳಿ ಇಳಿಜಾರಿನಲ್ಲಿ ನೀರು ಹರಿದು ಹೋಗುತ್ತಿತ್ತು. ಆ ಹರಿಯುವ ನೀರಿನ ಜಾಡು ಹಿಡಿದು ಹೊರಟಾಗ ಮುಳ್ಳುಕಂಟಿಗಳಿಂದ ತುಂಬಿದ್ದ ಜಾಗದಲ್ಲಿ ಒಂದು ಕಲ್ಯಾಣಿ ಕಂಡಿತು!

ಕಲ್ಯಾಣಿ ನೋಡಿದ ಹಿರಿಯರು ‘ಮೊದಲು ಇದೇ ಕಲ್ಯಾಣಿಯಿಂದಲೇ ದೇವಾಲಯಕ್ಕೆ ನೀರು ತೆಗೆದುಕೊಂಡು ಹೋಗುತ್ತಿದ್ದೆವು’ ಎಂದು ನೆನಪಿಸಿ ಕೊಂಡರು. ಆ ಕಲ್ಯಾಣಿಯನ್ನು ಪುನಶ್ಚೇತನಗೊಳಿಸಲಾಗಿದೆ. ಅದರಲ್ಲೀಗ ಮಳೆ ನೀರು ಸಂಗ್ರಹವಾಗಿದೆ. ಪರಿಣಾಮ, ಸುತ್ತಲಿನ ನಾಲ್ಕಾರು ಕೊಳವೆಬಾವಿಗಳು ಮರುಪೂರಣಗೊಂಡಿವೆ.

ರಾಮನಗರ ಜಿಲ್ಲೆಯಲ್ಲಿ ಇಂಥ ನೂರಕ್ಕೂ ಹೆಚ್ಚು ಕಲ್ಯಾಣಿಗಳನ್ನು ಜಿಲ್ಲಾ ಪಂಚಾಯ್ತಿಯವರು ಪತ್ತೆ ಮಾಡಿದ್ದಾರೆ. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲೂ ಹತ್ತಾರು ಕಲ್ಯಾಣಿಗಳು ಸಿಕ್ಕಿವೆ. ಅದರಲ್ಲೂ ಮಾಗಡಿಯಲ್ಲಿ ಹೆಚ್ಚು ಕಲ್ಯಾಣಿಗಳು ಪತ್ತೆಯಾಗಿ, ಪುನಶ್ಚೇತನಗೊಂಡಿವೆ.

‘ನರೇಗಾ’ ನೆರವು

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿ ರಾಮನಗರ ಜಿಲ್ಲೆಯಲ್ಲಿರುವ ಕಲ್ಯಾಣಿಗಳಿಗೆ ಮರು ಜೀವ ನೀಡಲಾಗುತ್ತಿದೆ. ಕಳೆದೊಂದು ವರ್ಷದಿಂದ ನಡೆಯುತ್ತಿರುವ ‘ಕಲ್ಯಾಣಿ ಪುನಶ್ಚೇತನ’ದ ಈ ಆಂದೋಲನದಲ್ಲಿ ಪುರಾತನ ಕಲ್ಯಾಣಿಗಳು ಪತ್ತೆಯಾಗಿವೆ. ಕೆಲವು ಕಡೆ ಮುಳ್ಳುಕಂಟಿಗಳು ತುಂಬಿ ಗುರುತು ಸಿಗದಿರುವ ಪ್ರದೇಶಗಳಲ್ಲಿ ಉತ್ಖನನ ನಡೆಸಿದಾಗ ಕಲ್ಯಾಣಿಗಳು ಪತ್ತೆಯಾಗಿವೆ. ಒಂದು ಭಾಗದಲ್ಲಿ 40ರಿಂದ 50 ಅಡಿಯಷ್ಟು ಆಳದ ಕಲ್ಯಾಣಿ ಪತ್ತೆಯಾಗಿದ್ದನ್ನು ಕಂಡು ಗ್ರಾಮಸ್ಥರು ಬೆರಗಾಗಿದ್ದಾರೆ.

ಕೆಂಪೇಗೌಡರ ಆಡಳಿತ ಕೇಂದ್ರವಾಗಿದ್ದ ಮಾಗಡಿ ಸುತ್ತಲಿನ ಹಳ್ಳಿಗಳಲ್ಲಿ ಹೆಚ್ಚು ಕಲ್ಯಾಣಿಗಳು ಪತ್ತೆ ಆಗುತ್ತಿವೆ. ಈ ತಾಲ್ಲೂಕು ಒಂದರಲ್ಲಿಯೇ 49 ಕಲ್ಯಾಣಿಗಳನ್ನು ಗುರುತಿಸಲಾಗಿದೆ. ಚಂದುರಾಯನ ಹಳ್ಳಿ ವ್ಯಾಪ್ತಿಯ ಸಿದ್ದಗಂಗಯ್ಯನ ಪಾಳ್ಯದ ದೇಗುಲದ ಸಮೀಪ ಪತ್ತೆಯಾದ ಕಲ್ಯಾಣಿ ಕೂಡ ಮಾಗಡಿ ವ್ಯಾಪ್ತಿಗೆ ಸೇರುತ್ತದೆ.

ರಾಮನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇಕ್ರಂ ಈ ಕಲ್ಯಾಣಿಗಳ ಹುಡುಕಾಟ ಮತ್ತು ಪುನರುಜ್ಜೀವದ ನೇತೃತ್ವ ವಹಿಸಿದ್ದಾರೆ. ಇದಕ್ಕಾಗಿ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಅಧಿಕಾರಿಗಳ ತಂಡ ರಚಿಸಿ, ಸ್ಥಳೀಯರಿಂದ ಮಾಹಿತಿ ಪಡೆದು, ನಕ್ಷೆಗಳನ್ನು ಹುಡುಕಿ ಜಲ ಸಂರಕ್ಷಣಾ ರಚನೆಗಳನ್ನು ಗುರುತು ಮಾಡುತ್ತಾರೆ. ನಂತರ ನರೇಗಾ ಯೋಜನೆ ಅಡಿ ಸ್ಥಳೀಯರನ್ನು ಬಳಸಿಕೊಂಡು ಆ ಜಲಮೂಲದ ಸುತ್ತಲಿರುವ ಗಿಡಗಂಟಿಗಳನ್ನು ತೆಗೆಸಿ, ಕಲ್ಯಾಣಿಗೆ ಮೂಲ ಸ್ವರೂಪ ನೀಡುತ್ತಾರೆ.

ಕಲ್ಯಾಣಿಗಳಿಗೆ ಹೊಸ ರೂಪ

ಪ್ರತಿ ತಾಲ್ಲೂಕಿನಲ್ಲೂ ಕಲ್ಯಾಣಿಗಳನ್ನು ಪತ್ತೆ ಮಾಡಿ, ಪುನಶ್ಚೇತನಗೊಳಿಸಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ 11, ರಾಮನಗರದಲ್ಲಿ 27 ಹಾಗೂ ಚನ್ನಪಟ್ಟಣದಲ್ಲಿ 25 ಕಲ್ಯಾಣಿಗಳನ್ನು ಗುರುತಿಸಲಾಗಿದ್ದು, ಇವುಗಳಲ್ಲಿ ಅರ್ಧದಷ್ಟು ಜಲಮೂಲಗಳು ಈಗಾಗಲೇ ಹೊಸ ಜೀವ ಪಡೆದು ತನ್ನೊಡಲಲ್ಲಿ ಮಳೆ ನೀರು ಸಂಗ್ರಹಿಸಿಕೊಂಡಿವೆ.

‘ಈ ಅಭಿಯಾನದಲ್ಲಿ ನಮ್ಮ ನಿರೀಕ್ಷೆಗೆ ಮೀರಿದ ಪ್ರಮಾಣದಲ್ಲಿ ಜಲಮೂಲಗಳು ಪತ್ತೆಯಾಗಿವೆ. ನೆಲಮಟ್ಟದಿಂದ 40ರಿಂದ 50 ಅಡಿ ಆಳದವರೆಗೂ ಮಣ್ಣಿನಲ್ಲಿ ಹುದುಗಿ ಹೋಗಿದ್ದ ಜಲಮೂಲಗಳನ್ನು ಪತ್ತೆ ಹಚ್ಚಿ, ಹೂಳು ತೆಗೆದು ಸ್ವಚ್ಛಗೊಳಿಸಲಾಗಿದೆ’ ಎಂದು ವಿವರಿಸುತ್ತಾರೆ ಇಕ್ರಂ.

‘ನಾವು ಪುನಶ್ಚೇತನಗೊಳಿಸಿದ ಕಲ್ಯಾಣಿಗಳಿಗೆ ಜನ ಪೂಜೆ ಸಲ್ಲಿಸಿದ್ದಾರೆ. ಪುನರುಜ್ಜೀವನಗೊಂಡ ಕಲ್ಯಾಣಿಗಳಲ್ಲಿ ನೀರು ನಿಂತಿದೆ. ಇದರಿಂದ ಮಳೆ ನೀರು ಸಂಗ್ರಹವಾಗಿ, ಅಂತರ್ಜಲ ಮಟ್ಟ ಸುಧಾರಣೆಯಾಗಲಿದೆ’ ಎಂದು ಇಕ್ರಂ ವಿವರಿಸುತ್ತಾರೆ.

ಚನ್ನಪಟ್ಟಣ ತಾಲ್ಲೂಕಿನ ಚಕ್ಕರೆ ಗ್ರಾಮದಲ್ಲಿರುವ ಕಲ್ಯಾಣಿ ಪುನಶ್ಚೇತನ ಮುನ್ನ ಹೀಗಿತ್ತು.

ಶೇ 60ರಷ್ಟು ಪುನಶ್ಚೇತನದ ಬಳಿಕ ಚಕ್ಕರೆ ಗ್ರಾಮದ ಕಲ್ಯಾಣಿ

ಸ್ಫೂರ್ತಿಯ ಮಾತುಗಳಿಗೆ ಚಿಮ್ಮಿದ ಜೀವಜಲ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಅಂದು ಗ್ರಾಮದೇವತೆ ಜಾತ್ರೆಯಲ್ಲಿ ಸ್ವಾಮೀಜಿಯವರು ಹೇಳಿದ ಒಂದು ಸ್ಫೂರ್ತಿಯ ಮಾತು, ಗ್ರಾಮಸ್ಥರಲ್ಲಿ ಕೆರೆ ಪುನಶ್ಚೇತನದ ಸಂಕಲ್ಪಕ್ಕೆ ಪ್ರೇರಣೆ ನೀಡಿತು. ತಜ್ಞರು, ಸ್ವಾಮೀಜಿ, ಹಿರಿಯರ ಮಾರ್ಗದರ್ಶನ, ಊರಿನವರ ಸಹಕಾರದಿಂದಾಗಿ ಒಂದು ವರ್ಷದೊಳಗೆ ಕೆರೆ ಪುನಶ್ಚೇತನಗೊಂಡಿತು. ಅದೃಷ್ಟವಶಾತ್ ಆ ವರ್ಷ ಉತ್ತಮ ಮಳೆಯಾಯಿತು. ಪುನಶ್ಚೇತನಗೊಂಡಿದ್ದ ಕೆರೆ ಭಾಗಶಃ ತುಂಬಿತು. ಬೇಸಿಗೆಯಲ್ಲಿ ತಲೆದೋರುತ್ತಿದ್ದ ಗ್ರಾಮದ ನೀರಿನ ಸಮಸ್ಯೆಗೆ ಪರಿಹಾರವೂ ದೊರೆಯಿತು.

– ಇದು ಗದಗ ಜಿಲ್ಲೆ ನರೇಗಲ್ ಗ್ರಾಮದಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಕೆರೆ ಪುನಶ್ಚೇತನಗೊಳಿಸಿದ ಯಶೋಗಾಥೆ.

ನರೇಗಲ್‌ನಲ್ಲಿ ಗ್ರಾಮದೇವತೆ ಜಾತ್ರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಲಕಾರ್ಯಕರ್ತ ಶಿವಾನಂದ ಕಳವೆ, ಹಾಲಕೆರೆ ಮಠದ ಅನ್ನದಾನ ಸ್ವಾಮೀಜಿ, ‘ಈಗ ಮಳೆ ನೀರನ್ನು ಹಿಡಿಯದಿದ್ದರೆ, ಭವಿಷ್ಯದಲ್ಲಿ ಕಠಿಣ ಜಲಕ್ಷಾಮ ಎದುರಿಸ ಬೇಕಾಗುತ್ತದೆ’ ಎಂದು ಎಚ್ಚರಿಸಿದರು. ‘ನಮ್ಮೂರ ಮೇಲೆ ಸುರಿದು, ವ್ಯರ್ಥವಾಗಿ ಹರಿಯುವ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಬೇಕು. ಈಗ ಈ ಪ್ರಯತ್ನ ಮಾಡಿದರೆ, ಭವಿಷ್ಯದಲ್ಲಿ ಕಷ್ಟಕಾಲದಲ್ಲಿ ಕೈ ಹಿಡಿಯುತ್ತದೆ’ ಎಂಬ ಸಲಹೆ ನೀಡಿದರು.

ತಕ್ಷಣವೇ ಸಮಾನ ಮನಸ್ಕರೆಲ್ಲರೂ ಸೇರಿ ನೆಲ–ಜಲ ಸಂರಕ್ಷಣಾ ಸಮಿತಿ ರಚಿಸಿ, ಹಿರೇಕೆರೆಯ ಪುನಶ್ಚೇತನ ಕಾರ್ಯಕ್ಕೆ ಟೊಂಕ ಕಟ್ಟಿ ನಿಂತರು. ನಂತರ ಸಮುದಾಯದ ಸಹಭಾಗಿತ್ವದಲ್ಲಿ ಜಲ ಸಂರಕ್ಷಣೆ ಕುರಿತು ಊರಿನಲ್ಲಿ ಸಭೆ ನಡೆಯಿತು. ಆ ಸಭೆಯಲ್ಲಿ ‘ಕೆರೆ ಪುನಶ್ಚೇತನ’ದ ನೀಲ ನಕ್ಷೆ ಸಿದ್ಧವಾಯಿತು.

ಕೆರೆ ಹೂಳೆತ್ತಲು ಮಾನವ ಶ್ರಮವೊಂದೇ ಸಾಲದು, ಯಂತ್ರಗಳೂ ಬೇಕು. ಅದಕ್ಕಾಗಿ ಆ ಸಭೆಗೆ, ಜೆಸಿಬಿ ಮಾಲೀಕರನ್ನೂ ಆಹ್ವಾನಿಸಿ, ಗ್ರಾಮದ ಜಲಸಂರಕ್ಷಣೆ ಕೆಲಸಕ್ಕೆ ಕೈಜೋಡಿಸುವಂತೆ ಸಮಿತಿಯವರು ಮನವಿ ಮಾಡಿದರು. ಕಡಿಮೆ ವೆಚ್ಚದಲ್ಲಿ ಅಂದರೆ, ಒಂದು ಲೋಡ್ ಹೂಳು ಸಾಗಿಸಲು ರೈತರಿಂದ ₹ 70 ಬಾಡಿಗೆ ಪಡೆಯುವಂತೆ ಜೆಸಿಬಿ ಮಾಲೀಕರ ಮನವೊಲಿಸಲಾಯಿತು.

‘ಕೆರೆ ಅಭಿವೃದ್ಧಿಗೆ ಬೇಕಾದ ಹಣಕ್ಕಾಗಿ ಊರಿನವರೇ ಸಂಗ್ರಹಕ್ಕೆ ನಿಂತರು. ಸಮಿತಿ ಸದಸ್ಯರು ತಲಾ ₹5 ಸಾವಿರ ದೇಣಿಗೆ ನೀಡಿದರು. ಹಾಲಕೆರೆ ಮಠದ ಅನ್ನದಾನ ಸ್ವಾಮೀಜಿ ₹1 ಲಕ್ಷ ಹಣ ನೀಡಿದರು. ಸಂಘ ಸಂಸ್ಥೆಗಳೂ ಸಹಾಯ ಮಾಡಿದವು’ ಎಂದು ನೆನಪಿಸಿಕೊಂಡರು ಸಮಿತಿ ಅಧ್ಯಕ್ಷ ಗುರುರಾಜ ಕುಲಕರ್ಣಿ.

‘ಸಮುದಾಯದ ನಿರಂತರ ಶ್ರಮದಿಂದ 31 ಎಕರೆಯ ವಿಸ್ತಾರವಾದ ಕೆರೆಯಲ್ಲಿ ನಾಲ್ಕು ಸಣ್ಣ ಕೆರೆಗಳನ್ನು ಮಾಡಿ, ಅದರಲ್ಲಿ ಎರಡನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಯಿತು’ ಎಂದರು ನೆಲ–ಜಲ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ ಬಸವರಾಜ ವಂಕಲಕುಂಟಿ.

ದಶಕಗಳ ನಂತರ ತುಂಬಿತು

ಕೆರೆ ಕಾಮಗಾರಿ ಪೂರ್ಣಗೊಂಡಿತು. ಆ ವರ್ಷದಲ್ಲೇ ಉತ್ತಮ ಮಳೆಯೂ ಸುರಿಯಿತು. ಕೆರೆಯಲ್ಲಿ ಹೂಳು ತೆಗೆದಿದ್ದರಿಂದ ಹನಿ ಹನಿ ಮಳೆ ನೀರೂ ಕೆರೆಯಲ್ಲಿ ಸಂಗ್ರಹವಾಯಿತು. ‘ನಮ್ಮೂರ ಕೆರೆ ತುಂಬಿ ನಾಲ್ಕೈದು ದಶಕಗಳಾಗಿತ್ತು. ಇದೇ ಮೊದಲ ಬಾರಿಗೆ ಮಳೆಗಾಲದಲ್ಲಿ ಹಿರೇಕೆರೆಗೆ ನೀರು ಹರಿದು ಬಂದಿದೆ’ ಎಂದು ಗ್ರಾಮಸ್ಥರು ಸಂಭ್ರಮ ವ್ಯಕ್ತಪಡಿಸಿದರು. ಮಳೆಗಾಲದಲ್ಲಿ ಕೆರೆಗೆ ಹರಿದು ಬಂದ ನೀರು ಈಗ ಬೇಸಿಗೆಯಲ್ಲೂ ಉಳಿದಿದೆ.

ಸರ್ಕಾರಿ ವೆಚ್ಚಕ್ಕಿಂತ ಕಡಿಮೆ..

‘ಸರ್ಕಾರದ ಲೆಕ್ಕದಲ್ಲಿ ಕೋಟ್ಯಂತರ ರೂಪಾಯಿ ಖರ್ಚಾಗುತ್ತಿದ್ದ ಕೆರೆ ಪುನಶ್ಚೇತನದ ಕೆಲಸ, ಸಮುದಾಯದ ಸಹಕಾರದಿಂದ ಬಹಳ ಕಡಿಮೆ ವೆಚ್ಚದಲ್ಲಿ ಮಾಡಿಸಿದ್ದೇವೆ’ ಎನ್ನುತ್ತಾರೆ ಬಸವರಾಜ ವಂಕಲಕುಂಟಿ.

‘ಕೆರೆ ಪಕ್ಕದಲ್ಲಿ ಮಠಕ್ಕೆ ಸೇರಿದ ಒಂದು ಎಕರೆಯಷ್ಟು ಜಮೀನಿದೆ. ಅದನ್ನು ಕೆರೆ ವಿಸ್ತರಣೆಗೆ ಬಳಸಿಕೊಳ್ಳುವಂತೆ ಅನ್ನದಾನ ಸ್ವಾಮೀಜಿ ಹೇಳಿದ್ದಾರೆ’ ಎಂದು ಅಧ್ಯಕ್ಷ ಗುರುರಾಜ ಕುಲಕರ್ಣಿ ತಿಳಿಸಿದ್ದಾರೆ.

ಹೊಯ್ಸಳ ಕೆರೆಗೆ ಮರುಜೀವ

• ಬಿ.ಜೆ.ಧನ್ಯಪ್ರಸಾದ್

ವರ್ಷದ ಹಿಂದೆ ಅಕ್ಷರಶಃ ಮುಚ್ಚಿಹೋಗಿದ್ದ ಚಿಕ್ಕಮಗಳೂರು ನಗರದ ಹಳೆಉಪ್ಪಳ್ಳಿಯ ಹೊಯ್ಸಳ ಕೆರೆಗೆ ಈಗ ಮರುಜೀವ ಸಿಕ್ಕಿದೆ. ಈಗ ಕೆರೆಯು ಜಲ ಸಂಪತ್ತಿನಿಂದ ನಳನಳಿಸುತ್ತಿದೆ. ಜಾನುವಾರುಗಳಿಗೆ ನೀರಾಸರೆಯಾಗಿದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಗೊಂಡಿದೆ.

ಹೂಳು ತುಂಬಿಕೊಂಡು, ಗಿಡಗಂಟಿ ಬೆಳೆದು ಮುಚ್ಚಿ ಹೋಗಿದ್ದ ಹೊಯ್ಸಳ ಕೆರೆಗೆ ಮರು ಜೀವ ನೀಡಿದ್ದು ‘ವಿಷನ್ ಚಿಕ್ಕಮಗಳೂರು ಟ್ರಸ್ಟ್’. ಕಾಫಿನಾಡಿನ ಊರುಗಳಲ್ಲಿ ಜನಾಂದೋಲನದ ಮೂಲಕ ಕೆರೆ, ಗೋಕಟ್ಟೆ, ಕಲ್ಯಾಣಿಗಳ ಸಂರಕ್ಷಣೆಯಂತಹ ಜಲಾಂದೋಲನ ನಡೆಸುತ್ತಿರುವ ಈ ಟ್ರಸ್ಟ್, ಆಂದೋಲನದ ಭಾಗವಾಗಿ ಹಳ್ಳೆಉಪ್ಪಳ್ಳಿ ಗ್ರಾಮದವರ ಸಹಭಾಗಿತ್ವದಲ್ಲಿ ಹೊಯ್ಸಳ ಕೆರೆಯನ್ನು ಅಭಿವೃದ್ಧಿಪಡಿಸಿದೆ. ಈ ಟ್ರಸ್ಟ್‌ನ ಅಧ್ಯಕ್ಷ, ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಅವರೇ ಈ ‘ಆಂದೋಲನ’ದ ರೂವಾರಿ.

ಚಿಕ್ಕಮಗಳೂರಿನ ಹಳೆಉಪ್ಪಳಿಯ ಹೊಯ್ಸಳ ಕೆರೆಯ ಒಡಲು ತುಂಬಿರುವುದು

ಹೇಗಿತ್ತು ಹೇಗಾಯ್ತು...

ಗಿಡ–ಗಂಟಿ ಬೆಳೆದುಕೊಂಡು ಒಂದು ಅರ್ಥದಲ್ಲಿ ಕಣ್ಮರೆಯೇ ಆಗಿದ್ದ ಹೊಯ್ಸಳ ಕೆರೆಯಲ್ಲಿ ಎಂಟು ತಿಂಗಳ ಹಿಂದೆ ಟ್ರಸ್ಟ್‌ನವರು, ಜನರ ಸಹಭಾಗಿತ್ವದಲ್ಲಿ ಶ್ರಮದಾನ ಮಾಡಿದರು. ಶ್ರಮದಾನದಲ್ಲಿ ಗಿಡಗಂಟಿ ತೆರವುಗೊಳಿಸಿ, ಕೆರೆ ಅಂಗಳ ಸ್ವಚ್ಛಗೊಳಿಸಿದರು. ಈ ಭಾಗದಲ್ಲಿ ಬಿದ್ದ ಮಳೆಯ ನೀರು ಕೆರೆ ಸೇರುವಂತೆ, ನೀರು ಹರಿಯುವ ದಾರಿಗಳನ್ನು ಸ್ವಚ್ಛಗೊಳಿಸಿದರು.

ಕೆರೆ ಸ್ವಚ್ಛಗೊಳಿಸುವ ಜತೆಗೆ, ಕೆರೆಗೆ ಏರಿ ನಿರ್ಮಿಸಿದರು. ಗ್ರಾಮಸ್ಥರು, ದಾನಿಗಳು ನೀಡಿದ ₹ 12 ಲಕ್ಷ ನೆರವಿನಲ್ಲಿ ಈ ಕೆರೆ ನಿರ್ಮಾಣ ಕಾರ್ಯ ನಡೆದಿದೆ. 3,016 ಚದರ ಮೀಟರ್ ವಿಸ್ತೀರ್ಣದ ಈ ಕೆರೆಯ ಜಲಸಂಗ್ರಹಣೆ ಸಾಮರ್ಥ್ಯ 1.20 ಕೋಟಿ ಲೀಟರ್.

ಜನಸಹಭಾಗಿತ್ವಕ್ಕೆ ಒತ್ತು

‘ಜನರ ಸಹಭಾಗಿತ್ವದಲ್ಲಿ ಜಲ ಸಂರಕ್ಷಣೆ ಕಾರ್ಯಗಳು ನಡೆಯಬೇಕು. ಇದರ ಬಗ್ಗೆ ಅರಿವು ಮೂಡಿಸಬೇಕು’ ಎಂಬುದು ವಿಷನ್ ಚಿಕ್ಕಮಗಳೂರು ಟ್ರಸ್ಟ್‌ನ ಉದ್ದೇಶ. ಇಂಥ ಮಹತ್ವದ ಉದ್ದೇಶವಿಟ್ಟುಕೊಂಡಿರುವ ಈ ಟ್ರಸ್ಟ್‌ನಲ್ಲಿ ಅಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಎ.ಆರ್. ಪ್ರಕಾಶ್ ಸೇರಿದಂತೆ 15 ಟ್ರಸ್ಟಿಗಳಿದ್ದಾರೆ. ‘ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ, ನಮ್ಮ ಭೂಮಿ ನಮ್ಮ ಹೆಮ್ಮೆ’ ಎಂಬ ಧ್ಯೇಯದೊಂದಿಗೆ ಟ್ರಸ್ಟ್ ಮುನ್ನಡೆಯುತ್ತಿದೆ.

ಚಿಕ್ಕಮಗಳೂರು ತಾಲ್ಲೂಕಿನ ಹಲವು ಕೆರೆ ಕಟ್ಟೆಗಳ ಅಭಿವೃದ್ಧಿಗೆ ಟ್ರಸ್ಟ್ ಮುಂದಾಗಿದೆ. ಕೆರೆ, ಕಟ್ಟೆ ಪುನಶ್ಚೇತನಕ್ಕೆ ಸಮುದಾಯವನ್ನು ಸಜ್ಜುಗೊಳಿಸಲು ‘ನಮ್ಮೂರ ಕೆರೆ ಹಬ್ಬ’ ದಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕೆರೆ ಅಭಿವೃದ್ಧಿಯ ನಂತರ, ಅದರ ನಿರ್ವಹಣೆಗಾಗಿ, ಸ್ಥಳೀಯರನ್ನೇ ಸೇರಿಸಿ ‘ಕೆರೆ ನಿರ್ವಹಣಾ ಸಂಘ’ವನ್ನು ಟ್ರಸ್ಟ್ ರಚಿಸುತ್ತಿದೆ.

‘ಟ್ರಸ್ಟ್ ವತಿಯಿಂದ ಕೆರೆಗಳ ಪುನರುಜ್ಜೀವನ, ಒತ್ತುವರಿ ತೆರವು, ಜಲಮೂಲಗಳ ರಕ್ಷಣೆಗೆ ಪ್ರಯತ್ನಿಸುತ್ತಿದ್ದೇವೆ. ‘ಕೆರೆಗಳು ಊರಿನ ಜೀವನಾಡಿಗಳು’ ಎಂಬುದನ್ನು ಜನರಿಗೆ ಮನದಟ್ಟು ಮಾಡುತ್ತಿದ್ದೇವೆ. ಪುನರುಜ್ಜೀವನದ ನಂತರ ಕೆರೆ ತುಂಬಿದರೆ ಜನರು ಖುಷಿಯಾಗುತ್ತಾರೆ. ಅದೇ ನಮಗೆ ಸ್ಫೂರ್ತಿ’ ಎನ್ನುತ್ತಾರೆ ನಾಗರಾಜ್.

ಹೊಯ್ಸಳ ಕೆರೆ ಅಭಿವೃದ್ಧಿಪಡಿಸಿದ ನಂತರ, ಮಳೆ ಬಂದು ಕೆರೆ ತುಂಬಿದೆ. ಕೆರೆಯಲ್ಲಿ ನೀರು ತುಂಬಿಕೊಂಡಿರುವುದು ಸ್ಥಳೀಯರಲ್ಲಿ ಉತ್ಸಾಹ ಮೂಡಿಸಿದೆ. ‘ಹೊಯ್ಸಳರ ಕಾಲದ ನಮ್ಮೂರಿನ ಕೆರೆಗೆ ನಾಗರಾಜ್ ಮತ್ತು ಪ್ರಕಾಶ್ ಅವರ ಕೃಪೆಯಿಂದಾಗಿ ಹೊಸ ಸ್ಪರ್ಶ ಸಿಕ್ಕಿದೆ. ಗಲೀಜಾಗಿದ್ದ ಪ್ರದೇಶವನ್ನು ಸುಂದರ ತಾಣವಾಗಿಸಿದ್ದಾರೆ’ ಎಂದು ಹಳೆಉಪ್ಪಳ್ಳಿ ಗ್ರಾಮಸ್ಥ ಚಂದ್ರಶೇಖರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೇಹ-ಆತ್ಮಗಳ ಸಮತೋಲನ

ಕಾಯಮಾತ್ರದುದಲ್ಲವಾತ್ಮಮಾತ್ರದುದಲ್ಲ - |
ವಾಯೆರಡುವೊಂದಾಗಲದು ಜೀವಲೀಲೆ ||
ತಾಯಿವೊಲು ನಿನಗಾತ್ಮ, ಮಡದಿಯೊಲು ಕಾಯವವ - |
ರಾಯವನು ಸರಿನೋಡು – ಮಂಕುತಿಮ್ಮ || 399 ||

ಪದ-ಅರ್ಥ: ಕಾಯಮಾತ್ರದುದಲ್ಲ = ಕಾಲ + ಮಾತ್ರದದು + ಅಲ್ಲ, ಆತ್ಮಮಾತ್ರದುದಲ್ಲ = ಆತ್ಮ + - ಮಾತ್ರದದು + ಅಲ್ಲ, ತಾಯಿವೊಲು = ತಾಯಿಯ ಹಾಗೆ, ನಿನಗಾತ್ಮ = ನಿನಗೆ + ಆತ್ಮ, ಕಾಯವವರಾಯವನು = ಕಾಯ + ಅವರ + ಆಯವನು(ವಿಸ್ತಾರವನ್ನು)

ವಾಚ್ಯಾರ್ಥ: ಬದುಕಿನ ಸಾಧನೆ ಕೇವಲ ದೇಹದಿಂದಾಗಲಿ, ಕೇವಲ ಆತ್ಮದಿಂದಾಗಲಿ ಸಾಧ್ಯವಿಲ್ಲ. ಅವೆರಡು ಒಂದಾದಾಗ ಜೀವಲೀಲೆ ಸಾಧ್ಯ. ಆತ್ಮ ನಿನಗೆ ತಾಯಿ ಇದ್ದಂತೆ, ದೇಹ ಮಡದಿ ಇದ್ದಂತೆ. ಅವರ ಪ್ರೀತಿ, ವಾತ್ಸಲ್ಯಗಳ ವಿಸ್ತಾರವನ್ನು ಕಂಡು ಬದುಕು.

ವಿವರಣೆ: ಈಗಾಗಲೇ ಅನೇಕ ಕಗ್ಗದ ಚೌಪದಿಗಳಲ್ಲಿ ಬಂದಂತೆ, ಇದರಲ್ಲೂ ಆತ್ಮ ಮತ್ತು ದೇಹಗಳ ಸಹಭಾಗಿತ್ವದ ಚಿಂತನೆ ಇದೆ. ದೇಹವಿಲ್ಲದೆ ಆತ್ಮಕ್ಕೆ ಸ್ಥಳವಿಲ್ಲ. ಆತ್ಮವಿಲ್ಲದ ದೇಹ ನಿರ್ಜೀವ. ಅವರೆಡರ ಹೊಂದಾಣಿಕೆಯೆ ಜೀವಲೀಲೆ.

ಆದಿಕಾಲದ ಮನುಷ್ಯ ಮನಸ್ಸನ್ನೇ ಆತ್ಮವೆಂದು ಭಾವಿಸುತ್ತಿದ್ದ. ಆತ್ಮದೇಹದೊಳಗಿರುತ್ತದೆಂದೂ, ಅದರಿಂದ ದೇಹಕ್ಕೆ ಯಾವ ಪ್ರಯೋಜನವಾಗಲೀ, ಅಪಕಾರವಾಗಲೀ ಇರುವುದಿಲ್ಲವೆಂದು ತಿಳಿದಿದ್ದ. ಆತ್ಮವೊಂದು ಪಂಜರದ ಗಿಳಿಯಂತೆ, ಪಂಜರದ ಬಾಗಿಲನ್ನು ತೆರೆದರೆ ಹಾರಿಹೋಗುವಂತೆ, ಸಾಯುವಾಗ ಅದು ದೇಹವನ್ನು ಬಿಟ್ಟು ಹೋಗುತ್ತದೆ ಎಂಬುದು ಕಲ್ಪನೆಯಾಗಿತ್ತು. ಗ್ರೀಕ್ ದಾರ್ಶನಿಕರು ಪ್ರಾಣ, ಪ್ರಜ್ಞೆ ಮತ್ತು ಆತ್ಮವನ್ನು ಸೈಕೀ ಎಂಬ ಪದದಿಂದ ಗುರುತಿಸುತ್ತಿದ್ದರು. ಅರಿಸ್ಟಾಟಲ್ ಆತ್ಮವೆಂಬುದು ಸಂತತ ಕಾರ್ಯಪ್ರವೃತ್ತವೂ, ಸೃಷ್ಟಿಶೀಲವೂ ಆದ ವಿವೇಕ ಮತ್ತು ಅದು ಸಾವಿಲ್ಲದ ದೈವೀ ಪ್ರಕೃತಿ ಎಂದು ಸಾಧಿಸಿದ್ದ. ಆಧುನಿಕ ಪಾಶ್ಚಾತ್ಯ ದರ್ಶನ ಪ್ರವರ್ತಕನಾದ ಡೇಕಾರ್ಟೆ ದೇಹ ಮತ್ತು ಆತ್ಮಗಳ ದ್ವೈತ ರೂಪವನ್ನು ಪ್ರತಿಪಾದಿಸಿದ.

ಭಗವದ್ಗೀತೆಯ ಎರಡನೆಯ ಅಧ್ಯಾಯದ ಮೂಲಚಿಂತನೆಯೇ ದೇಹ ಮತ್ತು ಆತ್ಮಗಳ ಗುಣಗಳದ್ದು. ಆತ್ಮ ಅವನಾಶಿಯಾದರೂ ಅದು ಕಾರ್ಯಪ್ರೇರಕವಾಗುವುದು ದೇಹದ ಮೂಲಕವೇ. ಆದ್ದರಿಂದ ಅದರ ಪೋಷಣೆ ಬಲು ಮುಖ್ಯ. ಬರೀ ದೇಹದಿಂದ ಏನೂ ಸಾಧ್ಯವಿಲ್ಲ. ಆತ್ಮಪ್ರಜ್ಞೆಯನ್ನು ಸದಾಕಾಲ ಜಾಗ್ರತವಾಗಿ ಇಟ್ಟುಕೊಳ್ಳುವುದೂ ಅಷ್ಟೇ ಮುಖ್ಯ.

ಅದಕ್ಕೇ ಈ ಕಗ್ಗ ಒಂದು ಸುಂದರವಾದ ಉಪಮೆಯನ್ನು ಕೊಡುತ್ತದೆ. ತಾಯಿ ಆತ್ಮವಿದ್ದಂತೆ ಮತ್ತು ದೇಹ ಹೆಂಡತಿಯಿದ್ದಂತೆ. ಒಬ್ಬ ವ್ಯಕ್ತಿಯ ಬದುಕಿನಲ್ಲಿ ಇವರಿಬ್ಬರ ಪಾತ್ರ ಬಹು ಮುಖ್ಯವಾದದ್ದು. ಅತ್ತೆ, ಸೊಸೆಯರ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಗಂಡನ ಪರಿಸ್ಥಿತಿಯ ಅರಿವು ನಮಗಿದೆ. ಆತ ತಾಯಿಯ ಮಾತು ಕೇಳಬೇಕೋ, ಹೆಂಡತಿಯ ಮಾತಿಗೆ ಒಪ್ಪಿಗೆ ಕೊಡಬೇಕೋ ತಿಳಿಯದೆ ಒದ್ದಾಡುತ್ತಾನೆ. ಅವನಿಗೆ ತಾಯಿಯ ವಾತ್ಸಲ್ಯ ಮತ್ತು ಹೆಂಡತಿಯ ಪ್ರೀತಿ ಎರಡೂ ಬೇಕು. ಎರಡನ್ನೂ ಸರಿಯಾಗಿ ತೂಗಿಸಿಕೊಂಡು ಹೋದಾಗ ಬದುಕು ಚೆಂದವಾಗುತ್ತದೆ. ಇವರಿಬ್ಬರಲ್ಲಿ ಯಾರೊಬ್ಬರ ಮೇಲೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರೆ, ಮನೆಯಲ್ಲಿ ಅಶಾಂತಿ ನೆಲೆಯಾಗುತ್ತದೆ. ಅವರಿಬ್ಬರಿಗೆ ಸಲ್ಲಬೇಕಾದ ಗೌರವ, ಪ್ರೀತಿಗಳನ್ನು ಸರಿಯಾಗಿ ನೀಡಬೇಕಾಗುತ್ತದೆ. ಅಂತೆಯೇ ದೇಹಕ್ಕೆ ಅತಿಯಾದ ಪ್ರಾಮುಖ್ಯತೆ ಕೊಟ್ಟರೆ ಜೀವನ ಭೋಗಮಯವಾಗುತ್ತದೆ, ದೇಹವನ್ನು ನಿರ್ಲಕ್ಷಿಸಿ, ಕೇವಲ ಆತ್ಮದ ಚಿಂತನೆ ಮಾಡಿದರೆ ಬದುಕು ರಸಹೀನವಾಗುತ್ತದೆ. ಅವುಗಳ ವಿಸ್ತಾರ, ವ್ಯಾಪ್ತಿಯನ್ನು ಸರಿಯಾಗಿ ತೂಗಿ ಬದುಕುವುದು ಕ್ಷೇಮ.

ದಿನ ಭವಿಷ್ಯ

ಸೋಮವಾರ 22 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ನವಮಿ ಗಂ. 56-52 (ಬೆ.ಝಾ. 5-14) ಸೋಮವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ. 26-41 (ಸಾ. 5-10) ಸೌಭಾಗ್ಯ ನಾಮ ಯೋಗ ಗಂ. 6-47 ಬಾಲ ಕರಣ ಗಂ. 25-40 ವಿಷ ಗಂ. 58-28 ಅಮೃತ ಗಂ. 9-58 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-27 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 4, 9

ಮೇಷ: ಉದ್ಯೋಗಸ್ಥ ಮಹಿಳೆಯರಿಗೆ ಆದಾಯದಲ್ಲಿ ವೃದ್ಧಿ. ಉದ್ಯೋಗ ನಿಮಿತ್ತ ವಿದೇಶ ಪ್ರಯಾಣ ಸಾಧ್ಯತೆ. ಗುರುಹಿರಿಯರ ಆಶೀರ್ವಾದ ಪಡೆಯುವಿರಿ. ಧಾನ್ಯ ಮಾರಾಟಗಾರರಿಗೆ ಆದಾಯದಲ್ಲಿ ಹೆಚ್ಚಳ.

ವೃಷಭ: ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ದೊರಕುವ ಸಾಧ್ಯತೆ ಇದ್ದು ಸ್ವಯಂ ತರಬೇತಿ ತರಗತಿಗಳನ್ನು ನಡೆಸುವ ಯೋಜನೆಯು ಕೈಗೂಡಲಿದೆ. ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಹೆಚ್ಚಿನ ವಿನಿಯೋಗ ಮಾಡಲಿದ್ದೀರಿ.

ಮಿಥುನ: ರಾಜಕೀಯ ಉನ್ನತಿಗಾಗಿ ಚಿಂತನ ಮಂತನ ನಡೆಸಲಿದ್ದೀರಿ. ಹೆಚ್ಚಿನ ಪರಿಶ್ರಮದಿಂದ ಕೆಲಸ–ಕಾರ್ಯಗಳಲ್ಲಿ ಯಶಸ್ಸು. ಸಹೋದರಿಯರಿಗೆ ಹೆಚ್ಚಿನ ಉಡುಗೊರೆ ನೀಡಿ ಸಂತಸ ಪಡಲಿದ್ದೀರಿ.

ಕರ್ಕಾಟಕ: ಕೇಂದ್ರ ಸರ್ಕಾರದ ಹುದ್ದೆಯೊಂದು ದೊರಕುವ ಸಾಧ್ಯತೆ ಇದ್ದು ತನ್ನಿಮಿತ್ತ ದೂರದ ಪ್ರಯಾಣ ಮಾಡಬೇಕಾದೀತು. ಆದಾಯದಲ್ಲಿ ಹೆಚ್ಚಳದಿಂದಾಗಿ ನೆಮ್ಮದಿ. ಹಿರಿಯರಿಗೆ ವಿಶ್ರಾಂತಿಯ ಅವಶ್ಯಕತೆ ಇದೆ.

ಸಿಂಹ: ಅರೆಕಾಲಿಕ ನೌಕರರಿಗೆ ಸುದಿನ. ರಾಜಕಾರಣಿಗಳು, ಸರ್ಕಾರಿ ಅಧಿಕಾರಿ ವರ್ಗದವರಿಗೆ ಉತ್ತಮ ದಿನ. ಮಗಳ ಸಲುವಾಗಿ ಉಳಿತಾಯ ಮಾಡುವುದು ಉತ್ತಮ. ಸಂಗಾತಿಯ ಆಲೋಚನೆಗಳಿಗೆ ಪುರಸ್ಕಾರ ನೀಡಿ.

ಕನ್ಯಾ: ಆರ್ಥಿಕ ಸದೃಢತೆಯಿಂದಾಗಿ ಆಸ್ತಿ ಖರೀದಿ ಮಾಡುವ ಸಾಧ್ಯತೆ. ವಿದ್ಯಾರ್ಥಿಗಳು ಮುಂದಿನ ಅಭ್ಯಾಸದ ವಿಚಾರದಲ್ಲಿ ಅತ್ಯಂತ ಕುತೂಹಲ ಮತ್ತು ಮುತುವರ್ಜಿ ವಹಿಸಲಿದ್ದೀರಿ. ರೈತಾಪಿ ವರ್ಗದವರಿಗೆ ಉತ್ತಮ ಬೆಳೆಯ ನಿರೀಕ್ಷೆ.

ತುಲಾ: ವಿದೇಶಿ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುವ ವಿಚಾರದಲ್ಲಿ ಸ್ನೇಹಿತರು ಬಂಧು ಬಾಂಧವರೊಂದಿಗೆ ಚರ್ಚೆ ನಡೆಸಲಿದ್ದೀರಿ. ಹಣಕಾಸಿನ ವಿಚಾರದಲ್ಲಿ ಸ್ಥಿರತೆ ಕಾಪಾಡುವಿರಿ. ಬರಹಗಾರರೊಬ್ಬರ ಅನಿರೀಕ್ಷಿತ ಭೇಟಿ.

ವೃಶ್ಚಿಕ: ಸಗಟು ವ್ಯಾಪಾರಗಳಲ್ಲಿ ಗಣನೀಯ ಪ್ರಗತಿ ಕಂಡುಬರಲಿದ್ದು ಆದಾಯದಲ್ಲಿ ಹೆಚ್ಚಳ. ನೌಕರಿಯಲ್ಲಿರುವವರಿಗೆ ಬಿಡುವು ದೊರಕುವ ಸಾಧ್ಯತೆ. ಮಕ್ಕಳಿಗಾಗಿ ಖರ್ಚು. ಸಂಗಾತಿಯ ಸಹಕಾರದಿಂದಾಗಿ ಸಂತಸ.

ಧನು: ಚಿನ್ನ, ಬೆಳ್ಳಿ ಮುಂತಾದ ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರ. ಕೃಷಿ ಕಾರ್ಯಗಳಿಗಾಗಿ ಧನ ವಿನಿಯೋಗ ಮಾಡಬೇಕಾದೀತು. ಸಿಹಿ ಪದಾರ್ಥಗಳ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರದಿಂದಾಗಿ ಲಾಭ.

ಮಕರ: ವಾಹನ ಮಾರಾಟದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಕಳೆದುಕೊಂಡ ವಸ್ತುವೊಂದು ಪುನಃ ಕೈ ಸೇರುವ ಸಾಧ್ಯತೆ. ಕ್ರೀಡಾಪಟುಗಳಿಗೆ ಉತ್ತಮ ಆಸಕ್ತಿ ಮೂಡುವುದರ ಜೊತೆಗೆ ಅವಕಾಶಗಳು ತೆರೆದುಕೊಳ್ಳಲಿವೆ.

ಕುಂಭ: ಕುಟುಂಬದಲ್ಲಿ ಸುಖ, ಸಂತೋಷ ನೆಮ್ಮದಿ ಕಾಣಲಿದ್ದೀರಿ. ಹಿತೈಷಿಗಳೊಂದಿಗೆ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಓದಿನ ವಿಷಯದಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ.

ಮೀನ: ಸರ್ಕಾರದಿಂದ ಆಗಬೇಕಾದ ಕೆಲಸದ ವಿಚಾರದಲ್ಲಿ ಪ್ರತಿಷ್ಠಿತ ವ್ಯಕ್ತಿಯೊಬ್ಬರ ಸಹಾಯ ದೊರಕಲಿದೆ. ಶತ್ರುಬಾಧೆ ನಿವಾರಣೆ. ಸಹೋದರರಿಂದ ಉತ್ತಮ ಸಹಾಯ. ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಚಿಂತೆ ಎದುರಾಗಲಿದೆ.

ನಿಮ್ಮ ಜನ್ಮದಿನ 22-ಮಾರ್ಚ್ ಈ ದಿನ ಅತ್ಯಂತ ಶುಭಕರ. ಪಿತ್ರಾರ್ಜಿತ ಆಸ್ತಿಗಳು ನಿಮ್ಮ ಕೈ ಸೇರುವ ಸಾಧ್ಯತೆ. ನಿಮ್ಮ ಜೀವನದ ಬಹು ಮುಖ್ಯವಾದ ಹೊಸ ಯೋಜನೆಗಳನ್ನು ಈ ವರ್ಷದ ಆರಂಭದಲ್ಲಿಯೇ ಕೈಗೊಳ್ಳಲಿದ್ದೀರಿ. ಆರೋಗ್ಯದ ಬಗ್ಗೆ ಹೆಚ್ಚೇನೂ ಗಮನ ಹರಿಸುವ ಅವಶ್ಯಕತೆ ಇಲ್ಲ. ಮಹಿಳಾ ಉದ್ಯಮಿಗಳಿಗೆ ಉತ್ತಮ ವರ್ಷವಾಗಿ ಪರಿಣಮಿಸಲಿದೆ.

ಪದಬಂಧ 4544

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಾದಿಯನ್ನು ತೋರುವವನೀತ (5)
4.ಈತ ನೀಚ! (3)
5.ಭೂತ ಇಲ್ಲಿಗೆ ಬಂದಿದೆಯಲ್ಲಾ? (3)
9.ಶ್ರಮ ನಿರ್ವಹಿಸುವುದು (2)
10.ದಪ್ಪವಾದ ಸೂಜಿಯಿದು (3)
11.ಮಂಡೂಕವಿರುವ ಬಾವಿ (2)
12.ಕನಸು ಇಲ್ಲಿ ದಿಟವಾಗಿದೆ (3)
14.ಕಾಟ ನೀಡಿದ್ದಕ್ಕೇ ಈ ಹೋರಾಟ! (3)
15.ಅಂತರಂಗ ಸ್ಪರ್ಶಿಯಾದುದು (5)

ಮೇಲಿಂದ ಕೆಳಕ್ಕೆ
1.ಕಂದರದಲ್ಲಿರುವ ಚಿಕ್ಕ ಕೂಸು (2)
2.ತಾಯಿಯ ತಮ್ಮ (2)
3.ಪಿನಾಕದ ಹತ್ತಿರ ಮಂಗವಿದೆಯಲ್ಲಾ? (2)
4.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
6.ಮನಸ್ಸು ಬದಲಾಗುವಿಕೆ (5)
7.ಚಿನ್ನದಲ್ಲಿ ಹರಳನ್ನು ಕೂರಿಸುವ ಕೆಲಸ (3)
8.ಶರ ಹಿಡಿದು ಅಡುಗೆ ಮಾಡುವವ! (3)
13.ಸುಗಮವಾಗಿ ಕಿತ್ತಿರುವ ಹೂವು (2)
14.ಉತ್ತರಭಾಗದಿಂದ ಬಂದಿರುವ ಚಿಕ್ಕಪ್ಪ (2)
16.ಪರಸ್ಪರ ಸಂಧಿಸುವುದು (2)



4543ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಂಬ 3.ಆಯಾಸ 5.ವಸನ 7.ಕುಡಿನೋಟ 9.ವರದಿ 10.ಕನಲು 11.ನವೀಕೃತ 13.ಮಣಕ 15.ರಥಿಕ 16.ವಪೆ
ಮೇಲಿಂದ ಕೆಳಕ್ಕೆ: 2.ಬಡವ 3.ಆನನ 4.ಸರಕು 6.ಸರದಿ 8.ಟಪಾಲು 9.ವಪನ 10.ಕಲ್ಯಾಣ 12.ತತ್ವರ 13.ಮಸ್ತಕ 14.ಕಕವ

ಸುಡೊಕು 4930

2		4	1	5			8	
	1			8		5		9
8		3			9		1	
3		9	5		1			
				9				
5		1	6		8			
	7			3	5	2		4
4		5						
	8			6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4929 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

‘ತನಿಖೆಯನ್ನು ಬೇರೆ ಸಂಸ್ಥೆಗೆ ವಹಿಸುವುದಿಲ್ಲ’

ಧಾರವಾಡ: ‘ಸಿ.ಡಿ. ಪ್ರಕರಣದ ತನಿಖೆಯನ್ನು ಎಸ್‌ಐಟಿ ಸಮರ್ಥವಾಗಿ ನಡೆಸುತ್ತಿದೆ. ಹೀಗಾಗಿ ಈ ಪ್ರಕರಣದ ತನಿಖೆಯನ್ನು ಬೇರೆ ಸಂಸ್ಥೆಗೆ ವಹಿಸುವುದಿಲ್ಲ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವೈಕುಂಠ ಸಮಾರಾಧನೆ

ಶ್ರೀಮತಿ. ರಾಮಕ್ಕ
(ದಿವಂಗತ ಪಾಳ್ಯದ ಬಿ.ಪಿ.ವೆಂಕಟಸ್ವಾಮಿ ರೆಡ್ಡಿ ಅವರ ಪತ್ನಿ, ಬೆಳ್ಳಂದೂರು)

ದಿನಾಂಕ 12-3-2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಸಂಬಂಧಿತ ವೈಕುಂಠ ಸಮಾರಾಧನೆಯನ್ನು ಸೋಮವಾರ ದಿನಾಂಕ 22-3-2021 ರಂದು ಜಯನಗರದ ಅವರ ಸ್ವಗೃಹದಲ್ಲಿ ಬೆಳಿಗ್ಗೆ 10:30ಕ್ಕೆ ನೆರವೇರಿಸಲಾಗುತ್ತಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ನಮ್ಮೆಲ್ಲರ ಪ್ರಾರ್ಥನೆ.

ದು:ಖತಪ್ತರು
ಬಿ.ವಿ.ದಯಾನಂದ್,
ಕಮಲಮ್ಮ, ಮೀನಾಕ್ಷಿ ಹಾಗೂ ಮೊಮ್ಮಕ್ಕಳು
9972805555

ಸಿ.ಡಿ ಪ್ರಕರಣ: ಬ್ಯಾಂಕ್ ಮಾಹಿತಿ ಕೋರಿದ ಎಸ್‌ಐಟಿ

ಬೆಂಗಳೂರು:ಸಿ.ಡಿ ಪ್ರಕರಣದ ಆರೋಪಿಗಳು ಎನ್ನಲಾಗಿರುವವರ ಜೊತೆ ಸಂಪರ್ಕ ಹಾಗೂ ಆರೋಪಿಗಳಿಗೆ ನೆರವು ನೀಡಿರುವ ಆರೋಪದಡಿ ಗ್ರಾನೈಟ್ ಉದ್ಯಮಿ ಶಿವಕುಮಾರ್ ಎಂಬುವರ ಮನೆ ಮೇಲೆ ದಾಳಿ ನಡೆಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ), ಆತನ ಹಣ ವರ್ಗಾವಣೆ ಸಂಬಂಧ ಬ್ಯಾಂಕ್‌ನಿಂದ ಮಾಹಿತಿ ಕೋರಿರುವುದಾಗಿ ಮೂಲಗಳು ತಿಳಿಸಿವೆ.

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿ ಪ್ರಕರಣದ ಆರೋಪಿಗಳೊಂದಿಗೆ ಶಿವಕುಮಾರ್ ಸಂಪರ್ಕದಲ್ಲಿದ್ದರು ಎಂಬ ಮಾಹಿತಿ ಎಸ್‌ಐಟಿಗೆ ಸಿಕ್ಕಿತ್ತು. ಹಾಗಾಗಿ, ನ್ಯಾಯಾಲಯದಿಂದ ವಾರಂಟ್ ಪಡೆದು, ಜೆ.ಪಿ.ನಗರದಲ್ಲಿದ್ದ ಶಿವಕುಮಾರ್ ಮನೆಯ ಮೇಲೆ ಎಸ್‌ಐಟಿ ಅಧಿಕಾರಿಗಳು ಶನಿವಾರ ದಾಳಿ ನಡೆಸಿದ್ದರು. ದಾಳಿ ವೇಳೆ ಸಿಕ್ಕಿದ್ದ ಕೆಲವು ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದರು.

ಆರೋಪಿಗಳೊಂದಿಗೆ ಒಡನಾಟ ಹಾಗೂ ನೆರವು ನೀಡಿದ್ದ ಮಾಹಿತಿ ಅನ್ವಯ ಶಿವಕುಮಾರ್ ಅವರ ಹಣ ಪಾವತಿ ಹಾಗೂ ವರ್ಗಾವಣೆ ಸಂಬಂಧ ಮಾಹಿತಿ ಕಲೆ ಹಾಕಲು ಎಸ್‌ಐಟಿ ಮುಂದಾಗಿದ್ದು, ಈ ಬಗ್ಗೆ ಮಾಹಿತಿ ನೀಡುವಂತೆ ಶಿವಕುಮಾರ್ ಅವರು ಖಾತೆ ಹೊಂದಿರುವ ಬ್ಯಾಂಕ್‌ಗೆ ಪತ್ರ ಬರೆದಿರುವುದಾಗಿ ಮೂಲಗಳು ತಿಳಿಸಿವೆ.

ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ

ಶ್ರೀಮತಿ ಸಿ. ಲಕ್ಷ್ಮಮ್ಮ ನವರು
ವೈಕುಂಠ ಸಮಾರಾಧನೆ: ದಿನಾಂಕ: 22.3.2021ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ.
ದು:ಖತಪ್ತರು: ಶ್ರೀ ಎಚ್. ಶಾಮಯ್ಯ ಮತ್ತು ಮಕ್ಕಳು ಹಾಗೂ ಕುಟುಂಬದವರು
ಇಂದಿರಾನಗರ, ಬೆಂಗಳೂರು
ಮೊ: 9844453333

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

‘ಕಾವೇರಿ ಕೂಗು’ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್

ವನ್ಯಜೀವಿ ರಕ್ಷಣೆಗೆ ಲಿಡಾರ್ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವನ್ಯಜೀವಿ–ಮಾನವ ಸಂಘರ್ಷ ಹೆಚ್ಚುತ್ತಿದೆ. ಆಹಾರ–ನೀರು ಅರಸಿ ಪ್ರಾಣಿಗಳು ನಗರ ಪ್ರವೇಶಿಸುತ್ತಿವೆ. ಲಿಡಾರ್ ತಂತ್ರಜ್ಞಾನವನ್ನು ಬಳಸಿ ಅವುಗಳು ಇರುವಲ್ಲಿಯೇ ಆಹಾರ–ನೀರು ಒದಗಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಜಾರಿಗೆ ತರುತ್ತಿದೆ’ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದರು.

ನಗರದಲ್ಲಿ ಭಾನುವಾರ ಈಶ ಫೌಂಡೇಷನ್‌ನ ‘ಕಾವೇರಿ ಕೂಗು’ ಅಭಿಯಾನದ ಎರಡನೇ ಹಂತದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮಾನವ–ಆನೆ ಸಂಘರ್ಷದಲ್ಲಿ ಪ್ರತಿ ವರ್ಷ 500 ಜನ ಸಾವಿಗೀಡಾಗುತ್ತಿದ್ದರೆ, 100 ಆನೆಗಳೂ ಮರಣ ಹೊಂದುತ್ತಿವೆ’ ಎಂದರು.

‘ಲಿಡಾರ್ (ಲೈಟ್ ಡಿಟೆಕ್ಷನ್ ಅಂಡ್ ರೇಂಜಿಂಗ್) ತಂತ್ರಜ್ಞಾನವು ಅರಣ್ಯ-ಪ್ರದೇಶದ ಸಂಪೂರ್ಣ ಚಿತ್ರಣವನ್ನು ನೀಡುತ್ತದೆ’ ಎಂದರು.

‘ದೂರಸಂವೇದಿ ವಿಧಾನಗಳ ಮೂಲಕ ಭೂಮಿಯ ಮೇಲ್ಮೈಯನ್ನು ಈ ತಂತ್ರಜ್ಞಾನದ ಮೂಲಕ ತಿಳಿಯಲಾಗುತ್ತದೆ. ಪ್ರಾಣಿ ಅಥವಾ ವಸ್ತು ಇರುವ ಸ್ಥಳದಿಂದ ನೀರಿನ ಲಭ್ಯತೆ ನಿಖರವಾಗಿ ಎಷ್ಟು ದೂರದಲ್ಲಿದೆ ಎಂಬುದನ್ನು ಇದರಿಂದ ತಿಳಿದು, ಅವುಗಳಿಗೆ ಒದಗಿಸುವ ಕಾರ್ಯ ಮಾಡಬಹುದಾಗಿದೆ’ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಬಿ.ಎಸ್‌. ಯಡಿಯೂರಪ್ಪ ಅವರು ರೈತಮಹಿಳೆ ಮಂಗಳಾ ಅವರಿಗೆ ಸಸಿ ನೀಡಿದರು. ಪ್ರಕಾಶ್ ಜಾವಡೇಕರ್, ಜಗ್ಗಿ ವಾಸುದೇವ್ ಇದ್ದಾರೆ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ‘ಅರಣ್ಯ ಸಂರಕ್ಷಣೆಯ ಉದ್ದೇಶಕ್ಕೆ ಈ ಬಾರಿಯ ಬಜೆಟ್‌ನಲ್ಲಿ ₹2,945 ಕೋಟಿ ತೆಗೆದಿರಿಸಲಾಗಿದೆ. 2019ರಲ್ಲಿ ರಾಜ್ಯದಲ್ಲಿ 1,025 ಚದರ ಕಿ.ಮೀ.ನಷ್ಟು ಅರಣ್ಯ ಪ್ರದೇಶ ಅಭಿವೃದ್ಧಿ ಪಡಿಸುವ ಮೂಲಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದೇವೆ’ ಎಂದರು.

‘ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿ ನೆಟ್ಟು ಮೂರು ವರ್ಷ ಪೋಷಿಸುವ ರೈತರಿಗೆ ಪ್ರತಿ ಸಸಿಗೆ ₹125 ಪ್ರೋತ್ಸಾಹ ಧನವನ್ನು ಅರಣ್ಯ ಇಲಾಖೆ ಮೂಲಕ ನೀಡಲಾಗುತ್ತಿದೆ’ ಎಂದು ಹೇಳಿದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ‘ಅಭಿವೃದ್ಧಿಯ ಹೆಸರಲ್ಲಿ ನಾವು ಕಾಂಕ್ರೀಟ್ ಕಾಡುಗಳನ್ನು ಸೃಷ್ಟಿಸುತ್ತಿದ್ದೇವೆ. ನಾವು ಉಳಿಯಬೇಕೆಂದರೆ ಜಲಮೂಲಗಳನ್ನು, ಪರಿಸರವನ್ನು ಸಂರಕ್ಷಿಸಲೇಬೇಕಾಗಿದೆ. ಈ ನಿಟ್ಟಿನಲ್ಲಿ ಕಾವೇರಿ ಕೂಗು ಅಭಿಯಾನ ಅತಿ ಮಹತ್ವದ್ದಾಗಿದೆ’ ಎಂದು ಶ್ಲಾಘಿಸಿದರು.

ಈಶ ಫೌಂಡೇಷನ್ ಸ್ಥಾಪಕ ಜಗ್ಗಿ ವಾಸುದೇವ್, ‘2019ರ ಸೆಪ್ಟೆಂಬರ್‌ನಲ್ಲಿ ಕಾವೇರಿ ಕೂಗು ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಈ ಅವಧಿಯಲ್ಲಿ ಕಾವೇರಿ ಕೊಳ್ಳದ 189 ತಾಲ್ಲೂಕುಗಳಲ್ಲಿ 1.1 ಕೋಟಿ ಸಸಿಗಳನ್ನು ನೆಡಲಾಗಿದೆ. 33 ಸಾವಿರ ರೈತರು ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆ’ ಎಂದು ಮಾಹಿತಿ ನೀಡಿದರು.

‘12 ವರ್ಷಗಳ ಈ ಅಭಿಯಾನದಲ್ಲಿ 242 ಕೋಟಿ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ. ಅರಣ್ಯ ಕೃಷಿಯ ಮೂಲಕ ರೈತರ ಆದಾಯವನ್ನು 8 ಪಟ್ಟು ಹೆಚ್ಚಿಸುವ ಉದ್ದೇಶವಿದೆ. 166 ದೇಶಗಳಿಂದ ದೇಣಿಗೆ ಸಂಗ್ರಹಿಸಲಾಗಿದೆ. ಆದರೆ, ಸಂಗ್ರಹವಾದ ಒಟ್ಟು ಮೊತ್ತವೆಷ್ಟು ಎಂಬುದರ ಬಗ್ಗೆ ಇನ್ನೂ ಲೆಕ್ಕಪರಿಶೋಧನೆ ನಡೆಯುತ್ತಿದೆ’ ಎಂದು ಹೇಳಿದರು.

ಹಿರಿಯ ವಿಜ್ಞಾನಿ ಎ.ಎಸ್. ಕಿರಣ್‌ಕುಮಾರ್ ಹಾಜರಿದ್ದರು.

‘ಮರಕ್ಕೆ ವೈಜ್ಞಾನಿಕ ಬೆಲೆ ನಿಗದಿಯಾಗಲಿ’

‘ರಾಜ್ಯದಲ್ಲಿ ಅರಣ್ಯ ಕೃಷಿ ಹೆಚ್ಚುತ್ತಿದೆ. ವಾಣಿಜ್ಯ ಉದ್ದೇಶದ ಮರಗಳನ್ನು ಬೆಳೆಯುತ್ತಿದ್ದಾರೆ. ಅವುಗಳ ಮಾರಾಟಕ್ಕೆ ಇರುವ ಅಡತಡೆಗಳನ್ನು ನಿವಾರಿಸುವುದರ ಜತೆಗೆ ಪ್ರತಿ ಮರಕ್ಕೆ ವೈಜ್ಞಾನಿಕ ಬೆಲೆ ಒದಗಿಸಲು ಮೌಲ್ಯಮಾಪಕರನ್ನು ನಿಯೋಜಿಸಬೇಕು’ ಎಂದು ಜಗ್ಗಿ ವಾಸುದೇವ್ ಸಲಹೆ ನೀಡಿದರು.

ಕೋವಿಡ್: ಸಕ್ರಿಯ ಪ್ರಕರಣ ಮತ್ತಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸತತ ಆರನೇ ದಿನ ಕೂಡ ಹೊಸ ಪ್ರಕರಣಗಳ ಸಂಖ್ಯೆ ಸಾವಿರದ ಗಡಿ ದಾಟಿದ್ದು, 1,715 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 13,493ಕ್ಕೆ ಏರಿಕೆಯಾಗಿದೆ.

ಕಳೆದ ತಿಂಗಳು ಈ ವೇಳೆಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 6,036ಕ್ಕೆ ಇಳಿಕೆಯಾಗಿತ್ತು. ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿರುವ ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗಿದೆ. ಆರು ದಿನಗಳಲ್ಲಿ 9,000 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು 21 ದಿನಗಳಲ್ಲಿ 19,077 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಸೋಂಕಿತರಲ್ಲಿ ಸದ್ಯ 137 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.70 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಹಾಗೂ ಬೀದರ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,434ಕ್ಕೆ ತಲುಪಿದೆ. ಸೋಂಕಿತರಲ್ಲಿ ಮತ್ತೆ 1,048 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 9.44 ಲಕ್ಷ ದಾಟಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.01 ಲಕ್ಷ ಮಂದಿಗೆ ಪರೀಕ್ಷೆ ಮಾಡಲಾಗಿದೆ. ಈವರೆಗೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 2.03 ಕೋಟಿ ಗಡಿ ದಾಟಿದೆ.

29 ಜಿಲ್ಲೆಗಳಲ್ಲಿ ಪ್ರಕರಣ: ಕೊಪ್ಪಳ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಹೊಸದಾಗಿ 1,039 ಪ್ರಕರಣಗಳು ವರದಿಯಾಗಿವೆ. ಮೂರು ದಿನಗಳ ಅವಧಿಯಲ್ಲಿ 3,262 ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 4.17 ಲಕ್ಷ ದಾಟಿದೆ.

ಉಡುಪಿಯಲ್ಲಿ ಕೂಡ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, ಹೊಸದಾಗಿ 170 ಪ್ರಕರಣಗಳು ದೃಢಪಟ್ಟಿವೆ. ಮೈಸೂರಿನಲ್ಲಿ ಮತ್ತೆ 70 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,811ಕ್ಕೆ ತಲುಪಿದೆ. ಬೀದರ್‌ನಲ್ಲಿ 61, ದಕ್ಷಿಣ ಕನ್ನಡದಲ್ಲಿ 54, ಕಲಬುರ್ಗಿಯಲ್ಲಿ 41, ಹಾಸನದಲ್ಲಿ 40 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ರಾಜ್ಯದಲ್ಲಿ ಭಾನುವಾರ 781 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 11,948 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಲಸಿಕೆ ಪಡೆದವರಲ್ಲಿ 7,933 ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 24.67 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.21 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.17 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಲಸಿಕೆ ಪಡೆದುಕೊಂಡ ಹಿರಿಯ ನಾಗರಿಕರ ಸಂಖ್ಯೆ 10.90 ಲಕ್ಷ ತಲುಪಿದೆ.



ಬಿಜೆಪಿ ಸರ್ಕಾರದ ‘ಏಕ ಗವಾಕ್ಷಿ’ ಕೊನೆಗಾಣಿಸಿ

ಬೆಂಗಳೂರು: ‘ರಾಜ್ಯದ ಜನರ ತೆರಿಗೆ ಹಣ ಮತ್ತು ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ನುಂಗಿ ಹಾಕುತ್ತಿರುವ ಬಿಜೆಪಿ ಸರ್ಕಾರದ ‘ಏಕ ಗವಾಕ್ಷಿ’ ವ್ಯವಸ್ಥೆಯನ್ನು ಮೊದಲು ಕೊನೆಗಾಣಿಸಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟ್ವಿಟರ್‌ನಲ್ಲಿ ಆಗ್ರಹಿಸಿದ್ದಾರೆ.

‘ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ ಅಳಿಯನ ಕೇಂದ್ರಿತ ಏಕ ಗವಾಕ್ಷಿ ವ್ಯವಸ್ಥೆ ಇದೆ’ ಎಂಬ ಪ್ರಧಾನಿ ಹೇಳಿಕೆಗೆ ಪ್ರತಿಕ್ರಿಯಿಸಿ ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಕರ್ನಾಟಕದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕುರ್ಚಿ ಹಿಂದೆ ಅಡಗಿ ಕುಳಿತಿರುವ, ರಾಜ್ಯದ ಬಿಜೆಪಿ ಸರ್ಕಾರದ ‘ಏಕ ಗವಾಕ್ಷಿ’ ಬಗ್ಗೆ ಬಿಜೆಪಿಯ ಹಿರಿಯ ಶಾಸಕರೇ ಹಾದಿ ಬೀದಿಯಲ್ಲಿ ಗೋಳಾಡುತ್ತಿದ್ದಾರೆ. ಯಡಿಯೂರಪ್ಪ ಕುಟುಂಬದ ಅಕ್ರಮದ ಬಗ್ಗೆ ಬಿಜೆಪಿಯವರೇ ಆರೋಪಿಸುತ್ತಿದ್ದಾರೆ. ಬಿಜೆಪಿ ಸರ್ಕಾರದ ಸ್ವಘೋಷಿತ ‘ಮಹಾನಾಯಕ– ಏಕ ಗವಾಕ್ಷಿ’ ಬಗ್ಗೆ ಮೋದಿ ಮಾತನಾಡುವರೆ’ ಎಂದು ಪ್ರಶ್ನಿಸಿದ್ದಾರೆ.

‘ಕರ್ನಾಟಕದಲ್ಲಿ ‘ಏಕ ಗವಾಕ್ಷಿ’ಯೊಂದು ಇದ್ದು, ಅದನ್ನು ಉದ್ದೇಶಪೂರ್ವಕವಾಗಿ ಪೋಷಿಸುತ್ತಿರುವಾಗ ಮೋದಿ ಅವರು ಮಮತಾ ಬ್ಯಾನರ್ಜಿ ಅವರ ಬಗ್ಗೆ ಟೀಕಿಸುವುದು ಆತ್ಮವಂಚನೆ’ ಎಂದು ಟೀಕಿಸಿದ್ದಾರೆ.

ಪ್ರಧಾನಿಯವರು ರೈತರ ಕುರಿತು ಸಮಾವೇಶದಲ್ಲಿ ಮಾತನಾಡಿದ್ದಾರೆ. 2022ರ ವೇಳೆಗೆ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಅವರು ಭರವಸೆ ನೀಡಿದ್ದರು. ರೈತರ ಆದಾಯ ದ್ವಿಗುಣಗೊಳಿಸಲು ಸಾಧ್ಯವಾಗದೆ, ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸದೇ ಆಡುವ ಮಾತುಗಳು ಪ್ರಾಮಾಣಿಕವೆ? ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯಿಂದ ರಸಗೊಬ್ಬರದ ಬೆಲೆಯೂ ಏರಿದೆ. ಇನ್ನು ಆದಾಯ ದ್ವಿಗುಣಗೊಳ್ಳುವುದು ಎಲ್ಲಿಂದ ಎಂದು ಕೇಳಿದ್ದಾರೆ.

‘ಬಿಜೆಪಿಯವರಿಗೆ ದಾನ ಮಾಡಲು ಬಟ್ಟೆ ಖರೀದಿ’

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ 90 ಜೊತೆ ಬಟ್ಟೆ ಖರೀದಿಸಿರುವ ವಿಷಯ ಈಗ ರಾಜಕೀಯ ವಾಕ್ಸಮರದ ವಸ್ತುವಾಗಿದೆ. ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಈ ಸಂಬಂಧ ನೀಡಿದ್ದ ಹೇಳಿಕೆಗೆ ಸಿದ್ದರಾಮಯ್ಯ ಟ್ವಿಟರ್‌ನಲ್ಲಿ ತಿರುಗೇಟು ನೀಡಿದ್ದಾರೆ.

‘ಕಾಂಗ್ರೆಸ್‌ಗೆ ರಾಜೀನಾಮೆ ನೀಡಲು ಸಿದ್ದರಾಮಯ್ಯ 90 ಜೊತೆ ಬಟ್ಟೆ ಖರೀದಿಸಿದ್ದಾರೆ’ ಎಂದು ನಳಿನ್ ಹೇಳಿಕೆ ನೀಡಿದ್ದರು. ಈ ಕುರಿತು ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ‘ಎಲ್ಲೆಲ್ಲೋ ಹೋಗಿ ಬಟ್ಟೆ ಬಿಚ್ಚಿ ಮರ್ಯಾದೆ ಕಳೆಯುತ್ತಿರುವ ರಾಜ್ಯದ ಬಿಜೆಪಿ ನಾಯಕರಿಗೆ ದಾನ ಮಾಡೋಣ ಎಂದು 90 ಜೊತೆ ಬಟ್ಟೆ ಖರೀದಿ ಮಾಡಿದ್ದೇನೆ’ ಎಂದರು.

‘ಬೇಕಿದ್ದರೆ ಕಟೀಲ್ ಅವರಿಗೂ ಒಂದೆರಡು ಜೊತೆ ಬಟ್ಟೆ ದಾನ ಮಾಡ್ತೀನಿ. ಇನ್ನೂ 19 ಸಿ.ಡಿ ಇವೆಯಂತೆ. ಎಲ್ಲವೂ ಹಿಡಿತದಲ್ಲಿರಲಿ, ನಾಳಗೆ ಕೂಡ’ ಎಂದು ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಎದಿರೇಟು: ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, ‘ಮೊನ್ನೆ ಸದನದಲ್ಲಿ ಅಂಗಿ ಬಿಚ್ಚಿದವರಿಗೂ ಒಂದೆರಡು ಅಂಗಿ ಕೊಟ್ಟುಬಿಡಿ. ಕಳೆದ ಬಾರಿ ಸ್ವಕ್ಷೇತ್ರದಲ್ಲಿ ಸೋತ ಹಾಗೆ ಮುಂದಿನ ಬಾರಿ ಬದಾಮಿಯಲ್ಲೂ ಸೋತು ಮತ್ತೊಂದು ಜಾಗಕ್ಕೆ ವಲಸೆ’ ಎಂದು ಛೇಡಿಸಿದೆ.

ಸಿದ್ದರಾಮಯ್ಯ ಅವರನ್ನು ‘ಮಜಾವಾದಿ’ ಎಂದು ಟೀಕಿಸಿರುವ ಬಿಜೆಪಿ, ‘ಸಾರ್ವಜನಿಕ ಸ್ಥಳದಲ್ಲಿ ಹೇಗೆ ವರ್ತಿಸಬೇಕೆಂಬ ಸಾಮಾನ್ಯ ಜ್ಞಾನ ನಿಮಗೆ ಇಲ್ಲದೇ ಹೋದದ್ದು ವಿಪರ್ಯಾಸ’ ಎಂದು 2019ರ ಜನವರಿಯಲ್ಲಿ ಮೈಸೂರಿನ ಸಭೆಯೊಂದರಲ್ಲಿ ಮಹಿಳೆಯೊಬ್ಬರ ಜತೆ ವಾಗ್ವಾದ ನಡೆಸಿದ ವಿಡಿಯೊ ತುಣಕನ್ನು ಟ್ವೀಟ್ ಮಾಡಿದೆ.

ರಾಜಕಾಲುವೆ ಮರಳಲ್ಲಿ ಮಗು ಅಂತ್ಯಕ್ರಿಯೆ • ದಲಿತರು, ಬಡವರಿಗಿಲ್ಲ ಸ್ಮಶಾನ

ಗುಂಡಿಯಲ್ಲಿಟ್ಟಿದ್ದ ಮಗುವಿನ ಶವ ಹೊರತೆಗೆಸಿದರು!

• ಎ.ಆರ್.ಚಿದಂಬರ

ಕೊರಟಗೆರೆ (ತುಮಕೂರು):ತಾಲ್ಲೂಕಿನ ಜಂಪೇನಹಳ್ಳಿ ಕ್ರಾಸ್ ಬಳಿ ಸ್ಮಶಾನದಲ್ಲಿ ಭಾನುವಾರ ಶವಸಂಸ್ಕಾರಕ್ಕಾಗಿ ಗುಂಡಿಯಲ್ಲಿಟ್ಟಿದ್ದ ಮೂರು ತಿಂಗಳ ಮಗುವಿನ ಶವವನ್ನು ಹೊರತೆಗೆಸಿ, ಬೇರೆಡೆ ಕಳಿಸಿದ ಘಟನೆ ನಡೆದಿದೆ.

ಎತ್ತಿನಹೊಳೆ ಪೈಪ್‌ಲೈನ್ ಕಾಮಗಾರಿಗಾಗಿ ಕಲ್ಲುಬಂಡೆ ಸಿಡಿಸಿದ ಶಬ್ದಕ್ಕೆ ಬೆಚ್ಚಿಬಿದ್ದು ಮಲಗಿದ್ದ ಮೂರು ತಿಂಗಳ ಮಗುವೊಂದು ಶನಿವಾರ ರಾತ್ರಿ ಮೃತಪಟ್ಟಿತ್ತು. ಪೋಷಕರು ಭಾನುವಾರ ಸ್ಮಶಾನದಲ್ಲಿ ಮಗುವಿನ ಅಂತ್ಯಸಂಸ್ಕಾರ ಮಾಡುವಾಗ ಅಲ್ಲಿಗೆ ಧಾವಿಸಿದ ಪಕ್ಕದ ಜಮೀನಿನ ಕಾವಲುಗಾರ ಶವಸಂಸ್ಕಾರ ಮಾಡದಂತೆ ಅಡ್ಡಿಪಡಿಸಿದ್ದಾನೆ.

ಎಷ್ಟು ಮನವಿ ಮಾಡಿದರೂ ಆತ ಪಟ್ಟು ಸಡಿಲಿಸದ ಕಾರಣ ಗುಂಡಿಯಲ್ಲಿ ಇಟ್ಟಿದ್ದ ಮಗುವಿನ ಶವವನ್ನು ಸಮೀಪದ ರಾಜಕಾಲುವೆಯಲ್ಲಿ ಶವಸಂಸ್ಕಾರ ಮಾಡಲಾಗಿದೆ. ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಕಾವಲುಗಾರ ಮತ್ತು ಗಾರ್ಮೆಂಟ್ಸ್ ಕಂಪನಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಮಗುವಿನ ಸಮಾಧಿ ಎದುರು ಕಣ್ಣೀರಿಡುತ್ತಿರುವ ಪೋಷಕರು ಮತ್ತು ಸಂಬಂಧಿಗಳು.

ಗುಂಡಿಯಿಂದ ಶವ ಹೊರತೆಗೆಸಿದರು: ‘ಧಾರ್ಮಿಕ ವಿಧಿವಿಧಾನ ಮುಗಿಸಿದ ಬಳಿಕ ಮಗುವನ್ನು ಗುಂಡಿಯಲ್ಲಟ್ಟು ಮಣ್ಣು ಹಾಕಬೇಕು ಎನ್ನುವಷ್ಟರಲ್ಲಿ ಅಲ್ಲಿಗೆ ಬಂದ ವ್ಯಕ್ತಿಯೊಬ್ಬ ನಮ್ಮನ್ನು ತಡೆದ. ಇದು ಗಾರ್ಮೆಂಟ್ಸ್ ಕಂಪನಿಗೆ ಸೇರಿದ ಜಾಗ. ಶವ ಹೂಳುವಂತಿಲ್ಲ ಎಂದು ಗಲಾಟೆ ಮಾಡಿದ’ ಎಂದು ಪೋಷಕರಾದ ರಂಗನಾಥ್ ಮತ್ತು ನೇತ್ರಾವತಿ ಕಣ್ಣೀರಾದರು.

‘ಎಷ್ಟೇ ಮನವಿ ಮಾಡಿದರೂ ಆತನ ಮನ ಕರಗಲಿಲ್ಲ. ಗುಂಡಿಯಲ್ಲಿಟ್ಟಿದ್ದ ಶವವನ್ನು ಹೊರತೆಗೆದು ಹೆಗಲ ಮೇಲೆ ಹೊತ್ತೊಯ್ದು ಪಕ್ಕದಲ್ಲಿನ ರಾಜಕಾಲುವೆಯಲ್ಲಿ ಗುಂಡಿ ತೆಗೆದು ಮುಚ್ಚಿದೆವು’ ಎಂದು ಅಳಲು ತೋಡಿಕೊಂಡರು.

ಗ್ರಾಮದಲ್ಲಿರುವ ಸರ್ಕಾರಿ ಜಾಗದಲ್ಲಿ ಸ್ಮಶಾನವಿದೆ. ಅದರ ಪಕ್ಕದಲ್ಲಿ ಬೆಂಗಳೂರಿನ ಗಾರ್ಮೆಂಟ್ಸ್ ಕಂಪನಿಯೊಂದು ಜಮೀನು ಖರೀದಿಸಿ, ಸುತ್ತಲೂ ಕಾಂಪೌಂಡ್ ಕಟ್ಟಿದ್ದಾರೆ. ಕಾವಲುಗಾರರನ್ನೂ ನೇಮಕ ಮಾಡಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದರು.

ಸ್ಮಶಾನದ ಜಾಗ ಗಾರ್ಮೆಂಟ್ಸ್ ಕಂಪನಿಗೆ ಸೇರುತ್ತದೆ. ಅಲ್ಲಿ ಶವಸಂಸ್ಕಾರ ಮಾಡುವಂತಿಲ್ಲ ಎಂಬುವುದು ಕಾವಲುಗಾರನ ವಾದ. ಸ್ಮಶಾನ ಸರ್ಕಾರಿ ಜಮೀನಿನಲ್ಲಿದ್ದು, ಗಾರ್ಮೆಂಟ್ಸ್ ಕಂಪನಿ ಜಾಗ ಮತ್ತು ಸ್ಮಶಾನದ ಮಧ್ಯೆ ರಾಜಕಾಲುವೆ ಇದೆ. ಈ ಸ್ಮಶಾನದಲ್ಲಿ ಮುಂಚಿನಿಂದಲೂ ಶವಸಂಸ್ಕಾರ ಮಾಡಲಾಗುತ್ತಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಘಟನೆ ನಂತರ ಸ್ಥಳಕ್ಕೆ ಕೊರಟಗೆರೆ ತಹಶೀಲ್ದಾರ್ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ಮನುಷ್ಯತ್ವ ಮರೆತು ಮೃಗದಂತೆ ವರ್ತಿಸಿದ ಕಾವಲುಗಾರ ಹಾಗೂ ಗಾರ್ಮೆಂಟ್ಸ್ ಮಾಲೀಕನ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾಡುವಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ. 9916766429

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 9611715755

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

Marketing & Sales

ಬೇಕಾಗಿದ್ದಾರೆ
ಹೆಸರಾಂತ ಮಾರ್ಕೆಟಿಂಗ್ ಕಂಪನಿಗೆ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಟೆಲಿಕಾಲರ್ಸ್ ಮತ್ತು ಅಕೌಂಟೆಂಟ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ವೇತನ ರೂ. 12,000/- ರಿಂದ ಪ್ರಾರಂಭ
ಕೂಡಲೇ ಸಂಪರ್ಕಿಸಿ:
95356 77634
76764 98707

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ,ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 9108059956, 7338376317

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ವಯಸ್ಸದವರೀಗೆ ನೂಡೀಕೂಳ್ಳಲು ಮಹಿಳೆಯರು ಬೆಕಾಗಿದ್ದಾರೆ ವಯಸ್ಸು 18ರಿಂದ 45ರ ವರೆಗೆ. ಉಚಿತ ಊಟ ವಸತಿಯೋಂದಿಗೆ 12000 ರಿಂದ 20000ದವರೆಗೆ ಸಂಬಳ ದೂರೆಯುತ್ತದೆ. ಫೋ: 8139962883

ತಕ್ಷಣ ಬೇಕಾಗಿದ್ದಾರೆ VOLVO, TVS, TOYOTA, ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ಗಳಿಗೆ ಯುವಕಯುವತಿಯರು ವಸತಿಯೂಟದೊಂದಿಗೆ 15,800/- 55000/-. 8951036487, 8951036488

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

Business Offers

Finance

ಬಿಸಿನೆಸ್ ಮಾಡಲು ಸಬ್ಸಿಡಿ ಲೋನ್ ಗಾಗಿ, ಲೇಬರ್ ಕಾರ್ಡ್ ಗಾಗಿ, EDP ಟ್ರೈನಿಂಗ್ ಗಾಗಿ ಸಂಪರ್ಕಿಸಿರಿ. 8792102232, 7204192188, 8147012578.

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಶ್ರೀಚಾಮುಂಡೇಶ್ವರಿದೇವಿ ಆರಾಧಕರು||★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ಯಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★||ವಶಿಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶಿಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಠ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

★||(ಉಚಿತ ಭವಿಷ್ಯ)||★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

★||ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ||★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

ವಶೀಕರಣ ಮಾಂತ್ರಿಕರು, ಪಂಚವಟಿರುದ್ರಾ ದೇವಿಯ ಪವಾಡ ಶಕ್ತಿಗಳಿಂದ ಸ್ತ್ರೀ, ಪುರುಷ ವಶೀಕರಣ, ಶತ್ರುನಾಶ, ಸಾಲಬಾಧೆ, ವ್ಯವಹಾರ, ದಾಂಪತ್ಯ. ಕೇವಲ 1 ಗಂಟೆಯಲ್ಲಿ ಪರಿಹಾರ. 9148244231

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಪಶ್ಚಿಮ ಬಂಗಾಳ ಯುವಕರ ನಿರೀಕ್ಷೆ ನಿಜವಾಗಿಸುವ ಪರಿವರ್ತನೆ ತರುವೆವು: ಪ್ರಧಾನಿ ಮೋದಿ

ಪೂಜೆಗಳ ವಿಘ್ನ ನಿವಾರಣೆ: ಶಾ

ಪ್ರಜಾವಾಣಿ ವಾರ್ತೆ

ಎಗ್ರಾ (ಪಶ್ಚಿಮ ಬಂಗಾಳ): 'ಪಶ್ಚಿಮ ಬಂಗಾಳದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ದುರ್ಗಾಪೂಜೆ, ಸರಸ್ವತಿ ಪೂಜೆಗಳಿಗೆ ತೊಡಕಾಗದಂತೆ ನೋಡಿಕೊಳ್ಳುತ್ತೇವೆ' ಎಂದು ಗೃಹ ಸಚಿವ ಅಮಿತ್ ಶಾ ಭಾನುವಾರ ಹೇಳಿದ್ದಾರೆ.

ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ರ್‍ಯಾಲಿಯಲ್ಲಿ ಮಾತನಾಡುತ್ತಾ, 'ಮಮತಾ ಬ್ಯಾನರ್ಜಿ ಅವರು ಓಲೈಕೆಯ ರಾಜಕಾರಣ ಮಾಡಿದ್ದಾರೆ. ನಾವು ಆ ಹಾದಿಯಲ್ಲಿ ನಡೆಯುವುದಿಲ್ಲ. ಬದಲಿಗೆ, ಮುಂದಿನ ಐದು ವರ್ಷಗಳಲ್ಲಿ 'ಸುವರ್ಣ ಬಂಗಾಳ' (ಸೊನಾರ್ ಬಾಂಗ್ಲಾ) ನಿರ್ಮಿಸುತ್ತೇವೆ ಎಂದು ಪುನರುಚ್ಚರಿಸಿದರು.

'ಟಿಎಂಸಿ ಆಡಳಿತವಿದ್ದಾಗ ಶಾಲೆಯಲ್ಲಿ ಸರಸ್ವತಿ ಪೂಜೆ ಆಯೋಜಿಸಿದ್ದಕ್ಕೆ ಶಾಲಾ ಶಿಕ್ಷಕರನ್ನು ಥಳಿಸಲಾಗಿತ್ತು. ರಾಜ್ಯದಲ್ಲಿ ದುರ್ಗಾಪೂಜೆಯನ್ನು ನೆರವೇರಿಸಲು ನ್ಯಾಯಾಲಯ ಮಧ್ಯಪ್ರವೇಶಿಸಬೇಕಾಗಿ ಬಂದಿತ್ತು. ಇಂಥ ಸರ್ಕಾರವು ನಿಮಗೆ ಬೇಕೇ? ಎಂದು ಶಾ ಪ್ರಶ್ನಿಸಿದರು.

'ಇತ್ತೀಚಿನ ದಿನಗಳಲ್ಲಿ ಬಂಗಾಳದಲ್ಲಿ ಬಿಜೆಪಿಯ 130 ಮಂದಿ ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ. ಅಪರಾಧಿಗಳು ಎಲ್ಲೇ ಅಡಗಿದ್ದರೂ ಅವರನ್ನು ಬೇಟೆಯಾಡುತ್ತೇವೆ' ಎಂದು ಅವರು ಹೇಳಿದರು.

ಸೋಲು ಮನಗಂಡ ಮಮತಾಗೆ ಇವಿಎಂ ಮೇಲೆ ಸಂದೇಹ: 'ಪಶ್ಚಿಮ ಬಂಗಾಳದಲ್ಲಿ ಸೋಲನ್ನು ನಿರೀಕ್ಷಿಸಿರುವ ಮಮತಾ ಬ್ಯಾನರ್ಜಿ ಅವರು ಈಗ ಮತಯಂತ್ರಗಳ ಕಾರ್ಯಕ್ಷಮತೆಯನ್ನು ಪ್ರಶ್ನಿಸಲು ಆರಂಭಿಸಿದ್ದಾರೆ' ಎಂದು ಮೋದಿ ಟೀಕಿಸಿದ್ದಾರೆ.

'ಈ ಮತಯಂತ್ರಗಳೇ 10 ವರ್ಷಗಳ ಹಿಂದೆ ಮಮತಾ ಅವರನ್ನು ಅಧಿಕಾರಕ್ಕೆ ತಂದಿದ್ದವು. ಈಗ ಪುನಃ ಯುವಕರ ನಿರೀಕ್ಷೆಗಳನ್ನು ನಿಜವಾಗಿಸುವಂಥ ಪರಿವರ್ತನೆ ಬಂಗಾಳದಲ್ಲಿ ಕಾಣಿಸುತ್ತಿದೆ. ಭ್ರಷ್ಟಾಚಾರದ ಆಟ ಈಗ ನಡೆಯದು' ಎಂದು ಬಂಕುರಾದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಅವರು ಹೇಳಿದ್ದಾರೆ.

'ನಾನು ತಲೆ ಬಾಗಿಸಿ, ದೇಶದ 130 ಕೋಟಿ ಜನರ ಸೇವೆಯಲ್ಲಿ ತೊಡಗಿದ್ದೇನೆ. ದೀದಿ (ಮಮತಾ) ತಮ್ಮ ಕಾಲನ್ನು ನನ್ನ ತಲೆಯ ಮೇಲಿಟ್ಟು ತುಳಿಯಬಹುದು. ಆದರೆ ಬಂಗಾಳದ ಜನರ ಕನಸುಗಳನ್ನು ತುಳಿಯಲು ನಾನು ಬಿಡುವುದಿಲ್ಲ' ಎಂದು ಮೋದಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಸ್ಸಾಂನ ಕಮರ್‌ಗಾಂವ್‌ನಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಸ್ಮರಣಿಕೆ ನೀಡಲಾಯಿತು — ಪಿಟಿಐ ಚಿತ್ರ

'ಕಾಂಗ್ರೆಸ್ ಲೂಟಿಯ ಯಂತ್ರ': 'ಕಾಂಗ್ರೆಸ್ ಪಕ್ಷವು 'ಲೂಟಿಮಾಡುವ ಯಂತ್ರ'ವಾಗಿದ್ದು ಅಸ್ಸಾಂನಲ್ಲಿ ಶತಾಯಗತಾಯ ಅಧಿಕಾರ ಹಿಡಿಯುವ ಪ್ರಯತ್ನ ನಡೆಸುತ್ತಿದೆ' ಎಂದು ಅಸ್ಸಾಂನ ಬೊಕಾಹಟ್‌ನಲ್ಲಿನ ಚುನಾಣಾ ರ್‍ಯಾಲಿಯಲ್ಲಿ ಮೋದಿ ಹೇಳಿದ್ದಾರೆ.

'ಕಾಂಗ್ರೆಸ್‌ನ ಬೊಕ್ಕಸ ಈಗ ಖಾಲಿಯಾಗಿದೆ. ಅದನ್ನು ತುಂಬಿಸಬೇಕಾದರೆ ಅಧಿಕಾರಕ್ಕೆ ಬರುವುದು ಅನಿವಾರ್ಯ. ಅದಕ್ಕಾಗಿಯೇ ಉದ್ಯೋಗ ಸೃಷ್ಟಿ, ಮಹಿಳಾ ಸಬಲೀಕರಣಗಳಂಥ ಹುಸಿ ಭರವಸೆಗಳನ್ನು ನೀಡಲಾಗುತ್ತಿದೆ. ಕೇಂದ್ರ ಮತ್ತು ಅಸ್ಸಾಂನಲ್ಲಿ ಏಕಕಾಲಕ್ಕೆ ಕಾಂಗ್ರೆಸ್ ಆಡಳಿತವಿದ್ದಾಗಲೂ ಇದೇ ಭರವಸೆಗಳನ್ನು ನೀಡಲಾಗಿತ್ತು. ಆದರೆ ಏನೇನೂ ಮಾಡಿರಲಿಲ್ಲ. ಅಧಿಕಾರ ಹಿಡಿಯಲು ಅವರು ಯಾವ ಹಂತಕ್ಕಾದರೂ ಹೋಗಬಲ್ಲರು ಎಂಬುದಕ್ಕೆ ಪ್ರಣಾಳಿಕೆಯ ಮೂಲಕ ಅವರು ಹೇಳುತ್ತಿರುವ ಸುಳ್ಳುಗಳೇ ಸಾಕ್ಷಿ' ಎಂದರು.

'ಏಕಕಾಲದಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಎರಡು ಪಟ್ಟು ನಿರ್ಲಕ್ಷ್ಯ, ಎರಡುಪಟ್ಟು ಭ್ರಷ್ಟಾಚಾರ, ಎರಡು ಪಟ್ಟು ಒಳನುಸುಳುವಿಕೆಗಳು ಇದ್ದವು. ಈಗ ಅವರು 'ಗ್ಯಾರಂಟಿ' ನೀಡುತ್ತಿದ್ದಾರೆ. ಅವರ ಪ್ರಣಾಳಿಕೆಯು 'ಸುಳ್ಳುಗಳ ಗ್ಯಾರಂಟಿ'ಯಾಗಿದೆ. ಗೊಂದಲ, ಅಭದ್ರತೆ, ಬಾಂಬ್, ಬಂದೂಕು, ಅಡೆತಡೆ, ದಂಗೆ, ಪ್ರತ್ಯೇಕತಾವಾದ, ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತಗಳ ಗ್ಯಾರಂಟಿಗಳಿಂದ ಅವರ ಪ್ರಣಾಳಿಕೆ ತುಂಬಿದೆ' ಎಂದು ಮೋದಿ ಟೀಕಿಸಿದರು.

ಮೋದಿಗೆ 'ಟ್ವೀಟ್' ಚಿಂತೆ

ಜೊರಹಾಟ್ (ಅಸ್ಸಾಂ): 'ನೆರೆಯಿಂದ ಸಂತ್ರಸ್ತರಾಗಿರುವ ಅಸ್ಸಾಂನ ಜನರ ಕಷ್ಟಗಳಿಗಿಂತ ಹೆಚ್ಚಾಗಿ, 22 ವರ್ಷ ವಯಸ್ಸಿನ ಮಹಿಳೆ ಮಾಡಿದ ಒಂದು ಟ್ವೀಟ್‌ನಿಂದ ಮೋದಿ ಚಿಂತೆಗೆ ಒಳಗಾಗಿದ್ದಾರೆ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಲೇವಡಿ ಮಾಡಿದ್ದಾರೆ.

ಶನಿವಾರ ಅಸ್ಸಾಂನ ಪ್ರಚಾರ ರ್‍ಯಾಲಿಯಲ್ಲಿ ಮಾತನಾಡಿದ್ದ ಮೋದಿ ಅವರು, 'ಟೂಲ್‌ಕಿಟ್' ವಿಚಾರವನ್ನು ಪ್ರಸ್ತಾಪಿಸಿ, ಅದರ ಹಿಂದೆ ಕಾಂಗ್ರೆಸ್‌ನ ಸಂಚು ಇದೆ ಎಂದು ಆರೋಪಿಸಿದ್ದರು. ಇದಕ್ಕೆ ಪ್ರತ್ಯುತ್ತರ ನೀಡಿದ ಪ್ರಿಯಾಂಕಾ, 'ಬ್ರಹ್ಮಪುತ್ರ ನದಿ ಪ್ರವಾಹ ಸಮಸ್ಯೆ ಹಾಗೂ ಪೌರತ್ವ (ತಿದ್ದುಪಡಿ) ಕಾಯ್ದೆಯಿಂದ ಸಂಸ್ಕೃತಿಯ ಮೇಲೆ ಆಗುತ್ತಿರುವ ದಾಳಿಯ ವಿಚಾರವಾಗಿ ಮೋದಿ ಮೌನವಹಿಸಿದ್ದಾರೆ. ನಾನು ನಿನ್ನೆ ಮೋದಿ ಅವರ ಭಾಷಣ ಆಲಿಸಿದ್ದೆ. ಅವರು ಅಸ್ಸಾಂನ ಅಭಿವೃದ್ಧಿಯ ಬಗ್ಗೆ ಮಾತನಾಡಬಹುದು ಎಂದು ಭಾವಿಸಿದ್ದೆ. ಆದರೆ, 22 ವರ್ಷ ವಯಸ್ಸಿನ ಮಹಿಳೆಯೊಬ್ಬರು (ದಿಶಾ ರವಿ) ಮಾಡಿದ ಟ್ವೀಟ್ ಬಗ್ಗೆ ಅವರು ಮಾತನಾಡಿದ್ದರು' ಎಂದರು.

ಬಿಜೆಪಿ ಸೇರಿದ ಶಿಶಿರ್ ಅಧಿಕಾರಿ

ಟಿಎಂಸಿಯ ಹಿರಿಯ ಮುಖಂಡ, ಸಂಸದ ಹಾಗೂ ಇತ್ತೀಚೆಗಷ್ಟೇ ಬಿಜೆಪಿ ಸೇರಿರುವ ಸುವೇಂದು ಅಧಿಕಾರಿ ಅವರ ತಂದೆ ಶಿಶಿರ್ ಅಧಿಕಾರಿ ಭಾನುವಾರ ಬಿಜೆಪಿ ಸೇರ್ಪಡೆಯಾಗಿದ್ದಾರೆ.

ಅಮಿತ್ ಶಾ ಸಮ್ಮುಖದಲ್ಲಿ ಬಿಜೆಪಿ ಸೇರಿದ ನಂತರ ಮಾತನಾಡಿದ ಅವರು, 'ಬಹಳ ಕಷ್ಟಪಟ್ಟು ಟಿಎಂಸಿಯಲ್ಲಿ ನಾವು ಉನ್ನತ ಮಟ್ಟಕ್ಕೆ ಏರಿದ್ದೆವು. ಆದರೆ, ನನ್ನನ್ನು ಮತ್ತು ನನ್ನ ಮಗನನ್ನು ಪಕ್ಷ ನಡೆಸಿಕೊಂಡ ರೀತಿ ಸರಿಯಾಗಿರಲಿಲ್ಲ. ಇದರಿಂದ ಟಿಎಂಸಿಯನ್ನು ತ್ಯಜಿಸುವುದು ಅನಿವಾರ್ಯವಾಗಿದೆ' ಎಂದರು.

'ನಮ್ಮಿಬ್ಬರನ್ನು ಪಕ್ಷದಿಂದ ಹೇಗೆ ಹೊರಗೆ ತಳ್ಳಲಾಗಿದೆ ಎಂಬುದು ಇತಿಹಾಸದಲ್ಲಿ ದಾಖಲಾಗಲಿದೆ. ಬಂಗಾಳದಲ್ಲಿ ಎದುರಾಗುವ ಎಲ್ಲಾ ರಾಜಕೀಯ ದಾಳಿಗಳು ಹಾಗೂ ದೌರ್ಜನ್ಯಗಳನ್ನು ಎದುರಿಸಿ ನಾವು ಯಶಸ್ವಿಯಾಗುತ್ತೇವೆ' ಎಂದ ಅವರು, ಜೈ ಶ್ರೀರಾಮ್ ಮತ್ತು ಭಾರತ ಮಾತಾ ಕಿ ಜೈ ಘೋಷಣೆಗಳನ್ನು ಕೂಗಿದರು.

ನಿಜ ಮುಖ ಅರಿಯದ ಕತ್ತೆ ನಾನು: ಮಮತಾ

'ಅಧಿಕಾರಿ (ಶಿಶಿರ್ ಅಧಿಕಾರಿ ಹಾಗೂ ಸುವೇಂದು ಅಧಿಕಾರಿ) ಕುಟುಂಬದವರ ನಿಜವಾದ ಮುಖವನ್ನು ಗುರುತಿಸುವಲ್ಲಿ ವಿಫಲಳಾಗಿರುವ ನಾನು ಒಬ್ಬ ದೊಡ್ಡ ಕತ್ತೆ' ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಕಾಂತಿ ದಕ್ಷಿಣದಲ್ಲಿ ಆಯೋಜಿಸಿದ್ದ ಪ್ರಚಾರ ರ್‍ಯಾಲಿಯಲ್ಲಿ, ಅಧಿಕಾರಿ ಕುಟುಂಬದ ಮೇಲೆ ವಾಗ್ದಾಳಿ ನಡೆಸಿದ ಮಮತಾ, 'ತಪ್ಪು ನನ್ನದೇ. ಅಧಿಕಾರಿ ಕುಟುಂಬವು ₹5,000 ಕೋಟಿ ಮೌಲ್ಯದ ಸಾಮ್ರಾಜ್ಯವನ್ನು ಕಟ್ಟಿದೆ ಎಂಬ ವದಂತಿಗಳನ್ನು ಕೇಳಿದ್ದೇನೆ. ನಾನು ಅಧಿಕಾರಕ್ಕೆ ಮರಳಿ ಬರುತ್ತಿದ್ದಂತೆಯೇ ಈ ವಿಚಾರವಾಗಿ ತನಿಖೆ ನಡೆಸುತ್ತೇನೆ' ಎಂದರು. 'ಅವರು ₹ 5,000 ಕೋಟಿ ಮೌಲ್ಯದ ಸಾಮ್ರಾಜ್ಯ ಹೊಂದಿದ್ದಾರೆ ಎಂದು ಜನರು ಹೇಳುತ್ತಾರೆ. ಇದಕ್ಕಿಂತ ಹೆಚ್ಚಿನದೇನೂ ನನಗೆ ಗೊತ್ತಿಲ್ಲ. ಮತಗಳನ್ನು ಖರೀದಿಸಲು ಅವರು ಹಣವನ್ನು ಬಳಸಬಹುದು. ಆದರೆ ಅವರಿಗೆ ಮತ ನೀಡಬೇಡಿ' ಎಂದು ಮಮತಾ ಮನವಿ ಮಾಡಿದರು.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಅಸ್ಸಾಂನ ಶಿವಸಾಗರ ಜಿಲ್ಲೆಯಲ್ಲಿ ನಡೆದ ರ್‍ಯಾಲಿಯಲ್ಲಿ ಜನರ ಜತೆಗೆ ಬೆರೆತರು —ಪಿಟಿಐ ಚಿತ್ರ

ನಿರಾಶ್ರಿತರತ್ತ ಬಿಜೆಪಿ ನೋಟ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ನಂತರ ನಡೆಯುವ ಮೊದಲ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಜಾರಿಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಬಿಜೆಪಿ ಪ್ರಣಾಳಿಕೆ ಭರವಸೆ ಕೊಟ್ಟಿದೆ. ಸಿಎಎ ಬಗ್ಗೆ ಸಾಕಷ್ಟು ಪರ–ವಿರೋಧ ಚರ್ಚೆಗಳು ನಡೆಯುತ್ತಿರುವ ನಡುವೆಯೇ ಬಿಜೆಪಿ ಈ ಭರವಸೆ ನೀಡಿದೆ.



ಪ್ರಣಾಳಿಕೆ ಬಿಡುಗಡೆ ಮಾಡಿದ ಶಾ

'ಸೋನಾರ್ ಬಾಂಗ್ಲಾ ಸಂಕಲ್ಪ ಪತ್ರ' ಹೆಸರಿನ ಪ್ರಣಾಳಿಕೆ ಬಿಡುಗಡೆ ಮಾಡಿದ ಕೇಂದ್ರ ಗೃಹಸಚಿವ ಅಮಿತ್ ಶಾ, ನಿರಾಶ್ರಿತರ ಪೌರತ್ವವನ್ನು ಕ್ರಮಬದ್ಧಗೊಳಿಸಲು ಸಿಎಎ ಜಾರಿ ಮಾಡಲಿದ್ದೇವೆ ಎಂದು ತಿಳಿಸಿದರು.

ಪ್ರಣಾಳಿಕೆಯಲ್ಲಿ ನಿರಾಶ್ರಿತರಿಗೆ ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಸಿಎಎ ಅಡಿ ಪೌರತ್ವ ಪಡೆಯುವ ನಿರಾಶ್ರಿತರ ಕಲ್ಯಾಣಕ್ಕಾಗಿ ₹100 ಕೋಟಿಗಳ ನಿಧಿ ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ. ಪೌರತ್ವ ಪಡೆದ ಪ್ರತಿ ಕುಟುಂಬಕ್ಕೆ ಐದು ವರ್ಷಗಳ ಕಾಲ ವಾರ್ಷಿಕ ₹10,000 ನೇರ ನಗದು ವರ್ಗಾವಣೆ ಮಾಡಲು ಉದ್ದೇಶಿಸಿದೆ.

ನಿರಾಶ್ರಿತರು ಆಧಾರ್ ಪತ್ರ, ಪಡಿತರ ಪತ್ರ ಹಾಗೂ ಮತದಾನ ಗುರುತಿನ ಚೀಟಿ ಮೊದಲಾದ ದಾಖಲೆಗಳನ್ನು ಪಡೆಯಲು ಏಕಗವಾಕ್ಷಿ ಯೋಜನೆ ಜಾರಿ ಮಾಡಲು ಬಿಜೆಪಿ ನಿರ್ಧರಿಸಿದೆ. ಪೌರತ್ವ ಪಡೆದ ನಾಗರಿಕರು ಸ್ವಂತ ವ್ಯವಹಾರ ನಡೆಸಲು ಸಬ್ಸಿಡಿಯಲ್ಲಿ ಸಾಲ ನೀಡಲು ಪಕ್ಷ ಮುಂದಾಗಿದೆ. ಈ ಕುಟುಂಬಗಳ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲೂ ಉದ್ದೇಶಿಸಿದೆ. ದೇಶ ವಿಭಜನೆ ವೇಳೆ ಪೂರ್ವ ಪಾಕಿಸ್ತಾನದಿಂದ ದೊಡ್ಡ ಪ್ರಮಾಣದಲ್ಲಿ ಪಶ್ಚಿಮ ಬಂಗಾಳಕ್ಕೆ ವಲಸೆ ಬಂದು ನೆಲೆಸಿರುವ 'ಮತುಅ' ದಲಿತ ಸಮುದಾಯಕ್ಕೆ ನೆರವು ನೀಡಲು ಪ್ರಣಾಳಿಕೆ ಉದ್ದೇಶಿಸಿದೆ. ಮತುಅ ದಳಪತಿಗೆ (ಮುಖಂಡ) ಪ್ರತಿ ತಿಂಗಳು ₹3,000 ಪಿಂಚಣಿ ನೀಡುವ ಭರವಸೆ ನೀಡಲಾಗಿದೆ.

ಪ್ರಣಾಳಿಕೆಯಲ್ಲಿ ಏನಿದೆ?

- ಪ್ರತಿ ಕುಟುಂಬದ ಒಬ್ಬರಿಗೆ ಉದ್ಯೋಗ
- ರೈತರ ಆರ್ಥಿಕ ಭದ್ರತೆಗಾಗಿ ₹5,000 ಕೋಟಿ ನಿಧಿ ಸ್ಥಾಪನೆ
- ನೊಬೆಲ್ ಪ್ರಶಸ್ತಿ ಮಾದರಿಯಲ್ಲಿ ಟ್ಯಾಗೋರ್ ಪ್ರಶಸ್ತಿ ಸ್ಥಾಪನೆ
- ಸಣ್ಣ ರೈತರು ಮತ್ತು ಮೀನುಗಾರರಿಗೆ ₹3 ಲಕ್ಷ ವಿಮೆ

ಬೆಳಗಾವಿಯಲ್ಲಿ ಬಿಜೆಪಿಯದ್ದೇ ಪ್ರಾಬಲ್ಯ

• ಎಂ. ಮಹೇಶ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ 6 ರಲ್ಲಿ ಬಿಜೆಪಿ ಶಾಸಕರಿದ್ದಾರೆ. ಎರಡು ಕಡೆ ಮಾತ್ರ ಕಾಂಗ್ರೆಸ್ ಪ್ರತಿನಿಧಿಗಳಿದ್ದಾರೆ. ಜೊತೆಗೆ ಜಿಲ್ಲಾ, ತಾಲ್ಲೂಕು ಪಂಚಾಯ್ತಿಯಲ್ಲೂ ಬಿಜೆಪಿ ಪ್ರಾಬಲ್ಯವೇ ಹೆಚ್ಚಿದೆ. ಅಲ್ಲದೇ, ಈಚೆಗೆ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲೂ ಕಮಲ ಪಕ್ಷದ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿದ್ದಾರೆ. ಇವೆಲ್ಲ ಅಂಶಗಳೂ ಉಪ ಚುನಾವಣೆಯಲ್ಲಿ ಪರಿಣಾಮ ಬೀರಲಿವೆ.

ಬೆಳಗಾವಿ ಉತ್ತರ (ಅನಿಲ ಬೆನಕೆ), ಬೆಳಗಾವಿ ದಕ್ಷಿಣ (ಅಭಯ ಪಾಟೀಲ), ಗೋಕಾಕ (ರಮೇಶ ಜಾರಕಿಹೊಳಿ), ಅರಭಾವಿ (ಕೆಎಂಎಫ್ ಅಧ್ಯಕ್ಷರೂ ಆಗಿರುವ ಬಾಲಚಂದ್ರ ಜಾರಕಿಹೊಳಿ), ರಾಮದುರ್ಗ (ಮಹಾದೇವಪ್ಪ ಯಾದವಾಡ), ಸವದತ್ತಿ ಯಲ್ಲಮ್ಮ (ವಿಧಾನಸಭೆ ಉಪಸಭಾಧ್ಯಕ್ಷರೂ ಆಗಿರುವ ಆನಂದ ಮಾಮನಿ) ಬಿಜೆಯವರು. ಹಲವು ನಿಗಮ–ಮಂಡಳಿಗಳಲ್ಲಿ ಸ್ಥಾನ ಪಡೆದಿರುವುದು ಕ್ಷೇತ್ರ ವ್ಯಾಪ್ತಿಯವರೇ ಆಗಿದ್ದಾರೆ.

ಮನವೊಲಿಸುವ ಹೊಣೆ: 'ಅವರಿಗೆಲ್ಲ ಪಕ್ಷದ ಗೆಲುವಿಗೆ ಶ್ರಮಿಸುವ ಜವಾಬ್ದಾರಿ ನೀಡಲಾಗಿದೆ. ಸರಣಿ ಸಭೆಗಳನ್ನು ನಡೆಸಿ, ವಿವಿಧ ಮೋರ್ಚಾಗಳಿಗೆ ಆಯಾ ಸಮಾಜದ ಮತದಾರರ ಮನವೊಲಿಸುವ ಹೊಣೆ ವಹಿಸಲಾಗಿದೆ' ಎಂದು ಬಿಜಪಿ ಮೂಲಗಳು ತಿಳಿಸಿವೆ.

ಬೆಳಗಾವಿ ಗ್ರಾಮೀಣ (ಕೆಪಿಸಿಸಿ ವಕ್ತಾರೆಯೂ ಆಗಿರುವ ಲಕ್ಷ್ಮಿ ಹೆಬ್ಬಾಳಕರ) ಹಾಗೂ ಬೈಲಹೊಂಗಲ (ಮಹಾಂತೇಶ ಕೌಜಲಗಿ)ದಲ್ಲಿ ಮಾತ್ರ ಕಾಂಗ್ರೆಸ್ ಶಾಸಕರಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ, ಜಿಲ್ಲೆಯ ಪ್ರಭಾವಿ ನಾಯಕರಲ್ಲಿ ಒಬ್ಬರಾದ ಸತೀಶ ಜಾರಕಿಹೊಳಿ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ.

ನಿರ್ಧಾರ ತಿಳಿಸದ ಮುಖಂಡರು: ಕ್ಷೇತ್ರದಲ್ಲಿರುವ ಲಿಂಗಾಯತ ಸಮಾಜದ ಪ್ರಮುಖರನ್ನು ಸೆಳೆಯಲು ಸತೀಶ 'ಗಾಳ' ಹಾಕಿದ್ದಾರೆ. ಗೋಕಾಕ ಕ್ಷೇತ್ರದಲ್ಲಿನ ಪರಾಜಿತ ಅಭ್ಯರ್ಥಿ ಅಶೋಕ ಪೂಜಾರಿ (ಸದ್ಯ ಜೆಡಿಎಸ್ ನಾಯಕ), ಕೆಎಲ್‌ಇ ಸಂಸ್ಥೆ ನಿರ್ದೇಶಕ ಜಯಾನಂದ ಮುನವಳ್ಳಿ, ಮಹಾಂತೇಶ ತಾಂವಶಿ ಮತ್ತಿತರರನ್ನು ಕಳೆದ ತಿಂಗಳು ಭೇಟಿಯಾಗಿ ಪಕ್ಷಕ್ಕೆ ಆಹ್ವಾನಿಸಿದ್ದರು. ಆದರೆ, ಆ ಮುಖಂಡರು ಇನ್ನೂ ನಿರ್ಧಾರ ತಿಳಿಸಿಲ್ಲ. ಜತೆಗೆ, ಚುನಾವಣೆ ಘೋಷಣೆಯಾದ ಬಳಿಕ ದೇವಸ್ಥಾನಗಳಿಗೆ ಭೇಟಿ ನೀಡುತ್ತ ಅವರು ಅಚ್ಚರಿ ಮೂಡಿಸಿದ್ದಾರೆ.

2019ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆ ಕಾಲಕ್ಕೆ ಗೋಕಾಕದ ರಮೇಶ ಜಾರಕಿಹೊಳಿ ಕಾಂಗ್ರೆಸ್‌ನಲ್ಲಿದ್ದರು. ಈ ಬಾರಿ ಅವರು ಬಿಜೆಪಿಯಲ್ಲಿರುವುದು ಆ ಪಕ್ಷದ ಬಲ ವೃದ್ಧಿಸಿದಂತಾಗಿದೆ. ಅವರು ಗೋಕಾಕ ಕ್ಷೇತ್ರದೊಂದಿಗೆ ಗ್ರಾಮೀಣ ಕ್ಷೇತ್ರದಲ್ಲೂ ಹೆಚ್ಚಿನ ಬೆಂಬಲಿಗರನ್ನು ಹೊಂದಿದ್ದಾರೆ. ಈಚೆಗೆ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ವಿಜೇತರಾಗಿರುವ ಹಲವರು ರಮೇಶ ಅವರೊಂದಿಗೆ ಗುರುತಿಸಿಕೊಂಡಿದ್ದಾರೆ. ಈ ಬೆಂಬಲಿಗರು ತಮ್ಮ ನಿಷ್ಠೆಯನ್ನು ಯಾರಿಗೆ ತೋರುತ್ತಾರೆ ಎನ್ನುವುದು ಫಲಿತಾಂಶದ ಮೇಲೆಯೂ ಪರಿಣಾಮ ಬೀರಲಿದೆ.

ಪ್ರತಿಕ್ರಿಯೆ ನೀಡಿಲ್ಲ

ತಮ್ಮ ವಿರುದ್ಧದ ಸಿ.ಡಿ. ಪ್ರಕರಣದಿಂದಾಗಿ ಮುಜುಗರಕ್ಕೆ ಒಳಗಾಗಿರುವ ರಮೇಶ ಜಾರಕಿಹೊಳಿ ಈಗ ಸಚಿವ ಸ್ಥಾನದೊಂದಿಗೆ ಜಿಲ್ಲಾ ಉಸ್ತುವಾರಿಯನ್ನೂ ಕಳೆದುಕೊಂಡಿದ್ದಾರೆ. ಪ್ರಕರಣ ಬೆಳಕಿಗೆ ಬಂದಂದಿನಿಂದ ಜಿಲ್ಲೆ ಹಾಗೂ ಕ್ಷೇತ್ರದತ್ತ ಸುಳಿದಿಲ್ಲ. ಚುನಾವಣೆ ಘೋಷಣೆ ಬಳಿಕವೂ ಆ ಬಗ್ಗೆ ಬಹಿರಂಗವಾಗಿ ಪ್ರತಿಕ್ರಿಯೆ ನೀಡಿಲ್ಲ. ಹೀಗಾಗಿ, ಅವರು ಸಕ್ರಿಯವಾಗಿ ಪ್ರಚಾರ ಮಾಡುವರೇ? ಪಕ್ಷದಿಂದ ನೇಮಿಸಿದ್ದ ಚುನಾವಣಾ ಉಸ್ತುವಾರಿಗಳ ಪಟ್ಟಿಯಲ್ಲೂ ಮುಂದುವರಿಯುವರೇ ಎನ್ನುವ ವಿಷಯ ಸದ್ಯ ಚರ್ಚೆಗೆ ಒಳಗಾಗಿದೆ.

'ಅಭ್ಯರ್ಥಿಗಳು ಯಾರಾಗುತ್ತಾರೆ ಎನ್ನುವುದರ ಮೇಲೆ ಜಾರಕಿಹೊಳ ಸಹೋದರರ ನಡೆ ಅವಲಂಬಿತವಾಗಿದೆ. ಕಾಂಗ್ರೆಸ್‌ನಿಂದ ಸತೀಶ ಜಾರಕಿಹೊಳಿ ಕಣಕ್ಕಿಳಿದರೆ ಚಿತ್ರಣ ಬದಲಾಗಬಹುದು' ಎಂದು ಬಿಜೆಪಿ ನಾಯಕರೊಬ್ಬರು ಪ್ರತಿಕ್ರಿಯಿಸಿದರು.

ಕೇರಳ: ಭಾಷಾ ಅಲ್ಪಸಂಖ್ಯಾತರ ಕಡೆಗಣನೆ

ಕಾಸರಗೋಡು ಕನ್ನಡಿಗರ ಮುಗಿಯದ ಬವಣೆ

• ಅರ್ಜುನ್ ರಘುನಾಥ್

ಕಾಸರಗೋಡು: ಕೇರಳದ ಕಾಸರಗೋಡಿನಲ್ಲಿ ವಿಧಾನಸಭಾ ಚುನಾವಣೆಯ ಪ್ರಚಾರ ಭರ್ಜರಿಯಾಗಿ ನಡೆಯುತ್ತಿದೆ. ಆದರೆ, ಇಲ್ಲಿನ ಭಾಷಾ ಅಲ್ಪಸಂಖ್ಯಾತರಾದ ಕನ್ನಡಿಗರ ಸಮಸ್ಯೆಗಳನ್ನು ಕೇಳುವಲ್ಲಿ ಮತ್ತು ಕನ್ನಡಿಗರ ಬಗ್ಗೆ ಕಾಳಜಿ ತೋರುವಲ್ಲಿ ರಾಜಕೀಯ ಪಕ್ಷಗಳ ನಿರ್ಲಕ್ಷ್ಯ ಮುಂದುವರಿದಿದೆ.

ಕಾಸರಗೋಡಿನಲ್ಲಿ 3 ಲಕ್ಷದಷ್ಟು ಭಾಷಾ ಅಲ್ಪಸಂಖ್ಯಾತರು ಇದ್ದಾರೆ. ಇವರಲ್ಲಿ ಕನ್ನಡಿಗರ ಸಂಖ್ಯೆಯೇ ದೊಡ್ಡದು. ಕೇರಳ ಸರ್ಕಾರವು ಮಲಯಾಳ ಭಾಷೆಗೆ ಆದ್ಯತೆ ನೀಡುವ ಕಾರಣ, ಕನ್ನಡಿಗರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರದ ಬಹುತೇಕ ಎಲ್ಲಾ ಆದೇಶಗಳು, ಸುತ್ತೋಲೆಗಳು ಮತ್ತು ಅರ್ಜಿ ನಮೂನೆಗಳು ಮಲಯಾಳದಲ್ಲಿಯೇ ಇರುತ್ತದೆ. ಇವುಗಳನ್ನು ಅರ್ಥಮಾಡಿಕೊಳ್ಳಲು ಕನ್ನಡಿಗರು ಭಾಷಾಂತರಕಾರರ ಮೊರೆ ಹೋಗಬೇಕಾದುದು ಅನಿವಾರ್ಯ. ಕನ್ನಡವೇ ಗೊತ್ತಿಲ್ಲದ ಅಧಿಕಾರಿಗಳನ್ನು, ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ಇಲ್ಲಿನ 20 ಗ್ರಾಮ ಪಂಚಾಯಿತಿಗಳಿಗೆ ನಿಯೋಜನೆ ಮಾಡಲಾಗಿದೆ.

'ಮುಖ್ಯವಾಹಿನಿಯ ರಾಜಕೀಯ ಪಕ್ಷಗಳು ಕನ್ನಡಿಗರ ಬಗ್ಗೆ ಕಾಳಜಿ ತೋರುವುದೇ ಇಲ್ಲ. ಕನ್ನಡಿಗರ ಮೂಲ ಸಮಸ್ಯೆಗಳ ಬಗ್ಗೆ ಗಮನ ಹರಿಸುವುದೂ ಇಲ್ಲ. ಈಗ ಕನ್ನಡಿಗರ ಪ್ರತಿನಿಧಿಗಳನ್ನು ಭೇಟಿ ಮಾಡಿರುವ ಬಿಜೆಪಿ ಮುಖಂಡರು ನಮ್ಮ ಸಮಸ್ಯೆಗಳನ್ನು ಕೇಳಿಕೊಂಡಿದ್ದಾರೆ' ಎಂದು ಕಾಸರಗೋಡು ಕರ್ನಾಟಕ ಸಮಿತಿಯ ರತ್ನಾಕರ ಮಲ್ಲಮೂಲೆ ಅವರು ಹೇಳಿದ್ದಾರೆ.

2012ರಲ್ಲಿ ಕೇರಳದ ಮಾಜಿ ಮುಖ್ಯ ಕಾರ್ಯದರ್ಶಿ ಪಿ. ಪ್ರಭಾಕರನ್ ನೇತೃತ್ವದ ಆಯೋಗವು ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ವರದಿ ಸಿದ್ಧಪಡಿಸಿತ್ತು. 'ಇಲ್ಲಿನ ಸರ್ಕಾರಿ ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲ. ಅವರು ಮಲಯಾಳದಲ್ಲಿಯೇ ವ್ಯವಹರಿಸುತ್ತಾರೆ. ಆದರೆ ಕನ್ನಡ ಮತ್ತು ತುಳು ಮಾತ್ರವೇ ಗೊತ್ತಿರುವ ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ. ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್‌ಗಳನ್ನು ಮಲಯಾಳದಲ್ಲಿಯೇ ಬರೆಯಲಾಗುತ್ತದೆ. ಎಫ್‌ಐಆರ್‌ನಲ್ಲಿ ಏನಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದೇ ಇದ್ದರೂ, ಭಾಷಾ ಅಲ್ಪಸಂಖ್ಯಾತರು ಅದಕ್ಕೆ ಸಹಿ ಹಾಕಬೇಕಾದ ಪರಿಸ್ಥಿತಿ ಇದೆ' ಎಂದು ವರದಿಯಲ್ಲಿ ವಿವರಿಸಲಾಗಿತ್ತು.

ಪ್ರತಿಭಟನಾರ್ಥ ಸ್ಪರ್ಧೆ

ಕಾಸರಗೋಡು ಜಿಲ್ಲೆ ಹಿಂದುಳಿದಿರುವುದಕ್ಕೆ ರಾಜಕೀಯ ಪಕ್ಷಗಳ ವಿರುದ್ಧ ಪ್ರತಿಭಟನಾರ್ಥವಾಗಿ ವ್ಯಕ್ತಿಯೊಬ್ಬರು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ.

ಎಂ.ಟೆಕ್ ಪದವೀಧರರಾಗಿರುವ ಶ್ರೀನಾಥ್ ಶಶಿ ಅವರು ಕಾಸರಗೋಡಿನ ಕಾಂಞಂಗಾಡ್ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾರೆ. ಕಾಸರಗೋಡು ಉನ್ನತ ಶಿಕ್ಷಣದಲ್ಲಿ ಹಿಂದುಳಿದಿದೆ ಎಂದು ಅವರು ಹೇಳಿದ್ದಾರೆ. 'ಮೂವ್‌ಮೆಂಟ್ ಫಾರ್ ಬೆಟರ್ ಕೇರಳ' ಹೆಸರಿನಲ್ಲಿ ಅವರು ಚುನಾವಣೆ ಎದುರಿಸುತ್ತಿದ್ದಾರೆ.

'ಎಐಎಡಿಎಂಕೆ ಗೆದ್ದರೆ ಬಿಜೆಪಿ ಗೆದ್ದಂತೆ'

ಸ್ಟಾಲಿನ್

ಕಂಚೀಪುರಂ (ಪಿಟಿಐ): 'ಎಐಎಡಿಎಂಕೆ ಒಂದೇ ಒಂದು ಕ್ಷೇತ್ರದಲ್ಲಿ ಗೆದ್ದರೂ, ಅದು ಬಿಜೆಪಿಯ ಗೆಲುವಾಗಿರುತ್ತದೆ. ಆದ್ದರಿಂದ ಆ ಪಕ್ಷಕ್ಕೆ ಮತ ನೀಡಬೇಡಿ' ಎಂದು ಡಿಎಂಕೆ ಮುಖಂಡ ಎಂ.ಕೆ. ಸ್ಟಾಲಿನ್ ಮನವಿ ಮಾಡಿದ್ದಾರೆ.

'ಉಪಮುಖ್ಯಮಂತ್ರಿ ಒ. ಪನ್ನೀರ್‌ಸೆಲ್ವಂ ಅವರ ಪುತ್ರ, ಥೇಣಿ ಲೋಕಸಭಾ ಕ್ಷೇತ್ರದ ಸಂಸದ ಪಿ. ರವೀಂದ್ರನಾಥ್ ಅವರು ಬಿಜೆಪಿಯ ಸಂಸದನಂತೆಯೇ ವರ್ತಿಸುತ್ತಿದ್ದಾರೆ. ಅವರ ಉದ್ದೇಶವೇನು ಎಂಬುದು ಇದರಿಂದ ಅರ್ಥವಾಗುತ್ತದೆ. ಎಐಎಡಿಎಂಕೆಯು ಬಿಜೆಪಿಯ ಒಂದು ಶಾಖೆಯಾಗಿದೆ' ಎಂದು ಚುನಾವಣಾ ಪ್ರಚಾರ ರ್‍ಯಾಲಿಯೊಂದರಲ್ಲಿ ಮಾತನಾಡುತ್ತಾ ಸ್ಟಾಲಿನ್ ಹೇಳಿದರು.

'ನಾವು 200ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದ್ದೇವೆ ಎಂದು ನಾನು ಹಿಂದಿನಿಂದಲೂ ಹೇಳುತ್ತಿದ್ದೆ. ಆದರೆ ವಿವಿಧ ಕ್ಷೇತ್ರಗಳಿಂದ ನಮಗೆ ಬರುವ ಪ್ರತಿಕ್ರಿಯೆಯನ್ನು ನೋಡಿದರೆ, ಎಲ್ಲಾ 234 ಕ್ಷೇತ್ರಗಳಲ್ಲೂ ಡಿಎಂಕೆ ಅಭ್ಯರ್ಥಿಗಳು ಗೆಲುವು ಸಾಧಿಸುವ ವಿಶ್ವಾಸ ಮೂಡಿದೆ. ಪ್ರತಿ ಮನೆಗೆ ಒಂದು ಹೆಲಿಕಾಪ್ಟರ್ ಅಥವಾ ವಿಮಾನ ಕೊಡಿಸುವುದಾಗಿ ಭರವಸೆ ನೀಡಿದರೂ ಎಐಎಡಿಎಂಕೆ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಖಚಿತ' ಎಂದರು.

ಸಿಎಂ ಜತೆ ಒಂದು ತಾಸು ಚರ್ಚಿಸಿದ ಜೆಡಿಎಸ್ ಶಾಸಕ

ವೆಂಕಟರಾವ್ ನಾಡಗೌಡ

ಸಿಂಧನೂರು (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರಕ್ಕೆ ಬಂದು, ಸಿಂಧನೂರಿನ ಸರ್ಕಿಟ್‌ಹೌಸ್‌ನಲ್ಲಿ ತಂಗಿದ್ದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಜೆಡಿಎಸ್ ಶಾಸಕ ವೆಂಕಟರಾವ್ ನಾಡಗೌಡ ಅವರು ಭಾನುವಾರ ಬೆಳಿಗ್ಗೆ ಭೇಟಿಯಾಗಿ ಒಂದು ಗಂಟೆಗೂ ಹೆಚ್ಚು ಹೊತ್ತು ಚರ್ಚಿಸಿದರು. ಇದು ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ಮುಖಂಡ ಪ್ರತಾಪಗೌಡ ಪಾಟೀಲ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಜೆಡಿಎಸ್ ವರಿಷ್ಠರು ಹೇಳಿಕೆ ನೀಡಿದ ಬೆನ್ನಲ್ಲೇ ನಡೆದಿರುವ ಈ ಭೇಟಿಯು ಚರ್ಚೆಗೆ ಗ್ರಾಸವಾಗಿದೆ.

'ನೀರಾವರಿ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಚರ್ಚಿಸಿರುವೆ. ಇದರಲ್ಲಿ ವಿಶೇಷ ಏನಿಲ್ಲ' ಎಂದು ವೆಂಕಟರಾವ್ ನೌಡಗೌಡ ಸುದ್ದಿಗಾರರಿಗೆ ತಿಳಿಸಿದರು.

ಮಹಿಳೆಯರಿಗೆ ಶೇ 50ರಷ್ಟು ಟಿಕೆಟ್: ಎನ್‌ಟಿಕೆ ಮಾದರಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ, ಸಾಮಾನ್ಯ ಕ್ಷೇತ್ರಗಳಲ್ಲಿ ದಲಿತ ಅಭ್ಯರ್ಥಿಗಳು ಕಣಕ್ಕೆ, ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಜನರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ– ಇದು ನಾಮ್ ತಮಿಳರ್ ಕಚ್ಚಿ (ಎನ್‌ಟಿಕೆ) ಪಕ್ಷವು ತಮಿಳುನಾಡು ವಿಧಾನಸಭಾ ಚುನಾವಣೆಗೆ ಟಿಕೆಟ್ ಹಂಚಿಕೆಯಲ್ಲಿ ತೋರಿದ ಮಾದರಿ.

234 ಕ್ಷೇತ್ರಗಳಿಗೆ ಏಪ್ರಿಲ್ 6ರಂದು ನಡೆಯುವ ವಿಧಾನ ಸಭಾ ಚುನಾವಣೆಯಲ್ಲಿ ಎನ್‌ಟಿಕೆ ಪಕ್ಷವು 117 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. 16 ಸಾಮಾನ್ಯ ಮತಕ್ಷೇತ್ರಗಳಲ್ಲಿ ಸ್ಪರ್ಧಿಸಲು ದಲಿತರಿಗೆ ಟಿಕೆಟ್ ನೀಡಿದೆ. ಆದರೆ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ದಲಿತರಿಗೆ ಮೀಸಲಾದ ಕ್ಷೇತ್ರಗಳಲ್ಲಿ ಮಾತ್ರ ಆ ಸಮುದಾಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.



ಎನ್‌ಟಿಕೆ ಮುಖ್ಯಸ್ಥ ಸೀಮನ್

ಸೋಮವಾರ • ಮಾರ್ಚ್ 22, 2021 ಪ್ರಜಾವಾಣಿ

ದೇಶಮುಖ್ ವಿರುದ್ಧ ಮುಂಬೈ ಮಾಜಿ ಪೊಲೀಸ್ ಕಮಿಷನರ್ ಆರೋಪಕ್ಕೆ ಶಿವಸೇನಾ ನಾಯಕ ಸಂಜಯ ಹೇಳಿಕೆ

ಮಹಾ ಸರ್ಕಾರದ ವರ್ಚಸ್ಸಿಗೆ ಧಕ್ಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಮುಂಬೈ ಮಾಜಿ ಪೊಲೀಸ್ ಕಮಿಷನರ್ ಮಾಡಿರುವ ಆರೋಪ ಮತ್ತು ಸಚಿನ್ ವಾಜೆ ಪ್ರಕರಣದಿಂದ ಮಹಾ ವಿಕಾಸ ಅಘಾಡಿ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗಿದೆ ಎಂದು ಶಿವಸೇನಾ ನಾಯಕ ಸಂಜಯ ರಾವುತ್ ಹೇಳಿದ್ದಾರೆ.

ಈಗ ಅಂಟಿರುವ ಕಳಂಕವನ್ನು ತೊಡೆದು ಹಾಕಲು ಆಡಳಿತಾರೂಢ ಮೈತ್ರಿ ಪಕ್ಷಗಳು ಒಗ್ಗಟ್ಟಾಗಿ ಚರ್ಚಿಸಬೇಕಾಗಿದೆ ಎಂದು ಭಾನುವಾರ ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿಗಳು ನಗರದ ಬಾರ್ ಮತ್ತು ರೆಸ್ಟೊರೆಂಟ್‌ಗಳಿಂದ ಪ್ರತಿ ತಿಂಗಳು ₹100 ಕೋಟಿ ಸಂಗ್ರಹಿಸಿ ಕೊಡಬೇಕು ಎಂದು ಗೃಹ ಸಚಿವ ಅನಿಲ್ ದೇಶಮುಖ್ ಸೂಚಿಸಿದ್ದಾರೆ ಎಂದು ಆರೋಪಿಸಿ ಪರಮ್ ಬೀರ್ ಸಿಂಗ್ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಪತ್ರ ಬರೆದಿದ್ದರು.

‘ಸರ್ಕಾರ ಅಥವಾ ಸಚಿವರ ವಿರುದ್ಧ ಮಾಡಿರುವ ಇಂತಹ ಆರೋಪಗಳು ಆಘಾತಕಾರಿಯಾಗಿವೆ. ಸಿಂಗ್ ಅವರ ಪತ್ರದಲ್ಲಿನ ಅಂಶಗಳು ಬಹಳ ಸೂಕ್ಷ್ಮವಾಗಿವೆ. ಪತ್ರದಲ್ಲಿನ ಅಂಶಗಳ ನಿಖರತೆಯ ಪರಿಶೀಲನೆಯ ಪ್ರಕ್ರಿಯೆಯನ್ನು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಕೈಗೊಳ್ಳಲಿದ್ದಾರೆ. ಆದರೆ, ಪ್ರಸ್ತುತ ಸಂದರ್ಭದಲ್ಲಿ ಮೈತ್ರಿ ಪಕ್ಷಗಳು ಸಹ ಆತ್ಮವಿಮರ್ಶೆ ಮಾಡಿಕೊಳ್ಳಬೇಕು’ ಎಂದು ರಾವುತ್ ಹೇಳಿದ್ದಾರೆ.

ಬಿಜೆಪಿ ಕಾರ್ಯಕರ್ತರು ಪುಣೆಯಲ್ಲಿ ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಪರಮ್ ಬೀರ್ ಸಿಂಗ್ ಅವರು ಮಾಡಿರುವ ಆರೋಪಗಳ ಬಗ್ಗೆ ತನಿಖೆ ನಡೆಸುವಂತೆ ದೇಶಮುಖ್ ಅವರೇ ಮುಖ್ಯಮಂತ್ರಿ ಅವರನ್ನು ಕೋರಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಪವಾರ್ ಅವರು ಸರ್ಕಾರ ಉಳಿಸಲು ಪ್ರಯತ್ನಿಸುತ್ತಿದ್ದಾರೆ; ಫಡಣವೀಸ್: (ನಾಗಪುರ ವರದಿ): ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ಮಹಾರಾಷ್ಟ್ರದ ಮಹಾ ವಿಕಾಸ್ ಅಘಾಡಿ (ಎಂವಿಎ) ಸರ್ಕಾರವನ್ನು ಉಳಿಸಲು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಪ್ರಯತ್ನಿಸುತ್ತಿದ್ದಾರೆ ಎಂದು ಮಹಾರಾಷ್ಟ್ರದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ದೂರಿದ್ದಾರೆ.

‘ವಿವಾದಿತ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಕಳೆದ ವರ್ಷ ಮರು ನೇಮಕಾತಿ ಮಾಡಿಕೊಳ್ಳಲು ಮುಖ್ಯಮಂತ್ರಿಯಾಗಲಿ ಅಥವಾ ಗೃಹ ಸಚಿವರಾಗಲಿ ಜವಾಬ್ದಾರರಲ್ಲ’ ಎಂದು ಪವಾರ್ ಅವರು ಹೇಳಿರುವುದು ಸರಿಯಲ್ಲ ಎಂದು ಅವರು ಟೀಕಿಸಿದ್ದಾರೆ.

‘ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಅರಿವಿಲ್ಲದೆ ವಾಜೆ ಅವರನ್ನು ಪ್ರಮುಖ ಹುದ್ದೆಗೆ ನೇಮಿಸುವುದು ಮತ್ತು ಪ್ರಮುಖ ಪ್ರಕರಣಗಳ ವಿಚಾರಣೆಗೆ ನಿಯೋಜಿಸುವುದು ಹೇಗೆ ಸಾಧ್ಯ?’ ಎಂದು ಫಡಣವೀಸ್ ಪ್ರಶ್ನಿಸಿದ್ದಾರೆ.

ಉದ್ಯಮಿ ಹಿರೇನ್ ಸಾವು ಪ್ರಕರಣ; ಇಬ್ಬರ ಬಂಧನ: ಉದ್ಯಮಿ ಮನ್‌ಸುಖ್ ಹಿರೇನ್ ಅನುಮಾನಸ್ಪದವಾಗಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಇಬ್ಬರನ್ನು ಬಂಧಿಸಿದೆ.

ಶನಿವಾರ ತಡ ರಾತ್ರಿ ಪೊಲೀಸ್ ಕಾನ್‌ಸ್ಟೆಬಲ್ ವಿನಾಯಕ ಶಿಂಧೆ ಮತ್ತು ಬೂಕ್ಕಿ ನರೇಶ್ ಧರೆ ಎನ್ನುವವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಇಬ್ಬರನ್ನು ವಿಚಾರಣೆಗಾಗಿ ಎಟಿಎಸ್ ಪ್ರಧಾನ ಕಚೇರಿಗೆ ಕರೆಯಿಸಲಾಗಿತ್ತು. ಸುದೀರ್ಘ ವಿಚಾರಣೆ ಬಳಿಕ ಬಂಧಿಸಲಾಗಿದೆ. ಲಖನ್ ಭಯ್ಯಾ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಶಿಂಧೆ ಅಪರಾಧಿ ಎಂದು ಸಾಬೀತಾಗಿದೆ. ಕಳೆದ ವರ್ಷ ಶಿಕ್ಷೆ ಅವಧಿಯ ರಜೆ ಪಡೆದು ಜೈಲಿನಿಂದ ಬಂದಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರದ ಹಸ್ತಕ್ಷೇಪ ಅಗತ್ಯ: ರಾಜ್ ಠಾಕ್ರೆ

ಕಳೆದ ತಿಂಗಳು ಉದ್ಯಮಿ ಮುಕೇಶ್ ಅಂಬಾನಿ ಅವರ ನಿವಾಸದ ಬಳಿ ಪತ್ತೆಯಾದ ಸ್ಫೋಟಕಗಳು ತುಂಬಿದ್ದ ವಾಹನದ ಹಿಂದಿನ ಸತ್ಯವನ್ನು ಪತ್ತೆಹಚ್ಚಲು ಕೇಂದ್ರ ಸರ್ಕಾರದ ಹಸ್ತಕ್ಷೇಪದ ಅಗತ್ಯವಿದೆ ಎಂದು ಮಹಾರಾಷ್ಟ್ರ ನವ ನಿರ್ಮಾಣ ಸೇನಾ (ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಹೇಳಿದ್ದಾರೆ.

ಈ ಪ್ರಕರಣದಲ್ಲಿನ ಕೆಲ ಮೂಲಭೂತ ಅಂಶಗಳ ಬಗ್ಗೆ ಬೆಳಕು ಚೆಲ್ಲುವಲ್ಲಿ ಮಹಾರಾಷ್ಟ್ರ ಸರ್ಕಾರ ಅಸಮರ್ಥವಾಗಿದೆ ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಪ್ರಕರಣದಲ್ಲಿ ಸತ್ಯವನ್ನು ಹೊರಗೆ ತರಲು ಕೇಂದ್ರವು ಸಹಾಯ ಮಾಡಬೇಕು. ಸ್ಫೋಟಕಗಳಿಂದ ತುಂಬಿದ ವಾಹನವನ್ನು ಅಲ್ಲಿ ಯಾರು ಇರಿಸಿದರು ಮತ್ತು ಯಾರ ಸೂಚನೆಯ ಮೇರೆಗೆ ಇದನ್ನು ಮಾಡಲಾಯಿತು ಎಂಬುದನ್ನು ಪತ್ತೆ ಮಾಡಬೇಕಿದೆ ಎಂದರು. ಈ ಮೂಲ ಪ್ರಶ್ನೆಗಳನ್ನು ಮರೆಯಬಾರದು. ಇಲ್ಲದಿದ್ದರೆ ಈ ಪ್ರಕರಣವೂ ನಟ ಸುಶಾಂತ್ ಸಿಂಗ್ ರಜಪೂತ್ ಅವರ (ಸಾವು) ಪ್ರಕರಣದಂತೆಯೇ ಸಾಗುತ್ತದೆ ಎಂದು ಅವರು ಹೇಳಿದರು.

ತನಿಖಾ ಸಂಸ್ಥೆಗಳ ಒತ್ತಡಕ್ಕೆ ಒಳಗಾಗಿರಬಹುದು: ಕಾಂಗ್ರೆಸ್

ಮುಂಬೈ (ಪಿಟಿಐ): ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವ ಹಿರಿಯ ಪೊಲೀಸ್ ಅಧಿಕಾರಿ ಪರಮ್ ಬೀರ್ ಸಿಂಗ್ ಕೇಂದ್ರದ ತನಿಖಾ ಸಂಸ್ಥೆಗಳ ಒತ್ತಡಕ್ಕೆ ಒಳಗಾಗಿರಬಹುದು ಎಂದು ಕಾಂಗ್ರೆಸ್ ಭಾನುವಾರ ಹೇಳಿದೆ.

‘ಸೇವೆಯಲ್ಲಿರುವ ಅಧಿಕಾರಿಯೊಬ್ಬರು ಸಚಿವರ ವಿರುದ್ಧ ಆರೋಪ ಮಾಡುತ್ತಿರುವುದು ಇದೇ ಮೊದಲಲ್ಲ. ದೇಶದಲ್ಲಿ ಇಂಥ ಅನೇಕ ನಿದರ್ಶನಗಳಿವೆ’ ಎಂದು ಪಕ್ಷದ ವಕ್ತಾರ ಸಚಿನ್ ಸಾವಂತ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಇದು ವ್ಯವಸ್ಥಿತ ಪಿತೂರಿ. ಸಿಂಗ್ ಅವರು ಮುಖ್ಯಮಂತ್ರಿಗೆ ಬರೆದಿದ್ದು ಎನ್ನಲಾದ ಪತ್ರ ಬಹಿರಂಗಗೊಂಡ ಕೆಲವೇ ನಿಮಿಷಗಳಲ್ಲಿ ಬಿಜೆಪಿ ಮುಖಂಡರು ಟಿ.ವಿ ಚಾನಲ್‌ಗಳಲ್ಲಿ ಪ್ರತಿಕ್ರಿಯೆ ನೀಡಲು ಸಾಧ್ಯವಾಯಿತು? ಮಹಾರಾಷ್ಟ್ರ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸುತ್ತಿರುವುದನ್ನು ಇದು ತೋರುತ್ತದೆ’ ಎಂದೂ ಆರೋಪಿಸಿದರು.

ಸುದ್ದಿ 2 ನಿಮಿಷ

ರೈತರ ಭವಿಷ್ಯ ಕಸಿಯುವ ಯತ್ನ: ರಾಹುಲ್ ಗಾಂಧಿ ಆರೋಪ

ರಾಯಪುರ (ಪಿಟಿಐ): ‘ದೇಶದ ಕೆಲವು ಪ್ರಖ್ಯಾತ ಉದ್ಯಮಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ರೈತರ ಆದಾಯ ಮತ್ತು ಭವಿಷ್ಯವನ್ನು ಕಸಿದುಕೊಳ್ಳಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭಾನುವಾರ ಹೇಳಿದರು.

ರಾಜ್ಯ ಸರ್ಕಾರದ ಎರಡು ಯೋಜನೆಗಳ ಅಡಿಯಲ್ಲಿ ಜಾನುವಾರು ಸಾಕಣೆದಾರರು ಮತ್ತು ರೈತರಿಗೆ ನಗದು ವಿತರಿಸುವ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ರೈತರಿಗೆ ನೀಡಿದ ಭರವಸೆಯನ್ನು ನಾವು ಪೂರೈಸಿದ್ದೇವೆ. ಕೇಂದ್ರ ಸರ್ಕಾರ ಬೇರೆಯದೇ ಹಾದಿಯಲ್ಲಿ ಸಾಗುತ್ತಿದೆ ಎಂಬುದು ನಿಮಗೆ ತಿಳಿದಿದೆ. ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಸರ್ಕಾರ ಜಾರಿಗೊಳಿಸಿದೆ. ರೈತರ ಆದಾಯ ಮತ್ತು ಭವಿಷ್ಯವನ್ನು ಕಸಿದುಕೊಂಡು ಅದನ್ನು ಎರಡು-ಮೂರು ದೊಡ್ಡ ಉದ್ಯಮಿಗಳಿಗೆ ಹಸ್ತಾಂತರಿಸಲು ಬಯಸಿದೆ’ ಎಂದು ಅವರು ಸರ್ಕಾರದ ವಿರುದ್ಧ ಹರಿಹಾಯ್ದರು.

‘ಮಳೆ ನೀರು ಹಿಡಿಯಿರಿ’ ಅಭಿಯಾನಕ್ಕೆ ಇಂದು ಚಾಲನೆ

ನವದೆಹಲಿ (ಪಿಟಿಐ): ವಿಶ್ವ ಜಲ ದಿನದ ಅಂಗವಾಗಿ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರು ‘ಕ್ಯಾಚ್ ದಿ ರೈನ್’ (ಮಳೆ ನೀರು ಹಿಡಿಯಿರಿ) ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ದೇಶದಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗುವುದು. ‘ಬಿದ್ದ ಜಾಗದಲ್ಲೇ, ಬಿದ್ದ ಸಮಯದಲ್ಲೇ ಮಳೆ ನೀರನ್ನು ಹಿಡಿದು ಸಂಗ್ರಹಿಸಬೇಕು‘ ಎಂಬುದನ್ನು ತಿಳಿಸುವುದು ಅಭಿಯಾನದ ಉದ್ದೇಶವಾಗಿದೆ‘ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಮಾರ್ಚ್ 22ರಿಂದ ನವೆಂಬರ್ 30ರವರೆಗೆ ಈ ಅಭಿಯಾನ ನಡೆಯಲಿದೆ. ನೀರು ಸಂರಕ್ಷಿಸುವ ಈ ಕಾರ್ಯದಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವ ಮೂಲಕ ಈ ಅಭಿಯಾನವು ಜನಾಂದೋಲನವಾಗಲಿದೆ ಎಂದು ತಿಳಿಸಿದೆ.

ಈ ಕಾರ್ಯಕ್ರಮದ ಬಳಿಕ ಚುನಾವಣೆ ನಡೆಯುವ ರಾಜ್ಯಗಳನ್ನು ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿನ ಎಲ್ಲ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಜಲ ಸಂರಕ್ಷಣೆ ಬಗ್ಗೆ ಗ್ರಾಮಸಭೆಗಳು ನಡೆಯಲಿವೆ. ಇದೇ ಸಂದರ್ಭದಲ್ಲಿ ಜನರು ’ಜಲ ಪ್ರಮಾಣ ವಚನ’ವನ್ನು ಕೈಗೊಳ್ಳಲಿದ್ದಾರೆ ಎಂದು ತಿಳಿಸಿದೆ.

ದೇಶದ ಸಾರಿಗೆ ಕ್ಷೇತ್ರದ ಮೇಲೆ ಸೈಬರ್ ದಾಳಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಡಿ ಬರುವ ವಿವಿಧ ಇಲಾಖೆಗಳು, ರಾಜ್ಯಗಳ ಲೋಕೋಪಯೋಗಿ ಇಲಾಖೆಗಳ ಮೇಲೆ ಸೈಬರ್ ದಾಳಿ ನಡೆಯುವ ಸಾಧ್ಯತೆ ಕುರಿತು ಎಚ್ಚರಿಕೆ ನೀಡಿರುವ ಸಚಿವಾಲಯ, ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಭಾನುವಾರ ಸೂಚಿಸಿದೆ.

‘ದೇಶದ ಸಾರಿಗೆ ಕ್ಷೇತ್ರd ಚಟುವಟಿಕೆಗಳಿಗೆ ಅಡಚಣೆ ಉಂಟು ಮಾಡುವ ದುರುದ್ದೇಶದಿಂದ ಸೈಬರ್ ದಾಳಿ ನಡೆಯುವ ಸಾಧ್ಯತೆ ಬಗ್ಗೆ ಸಿಇಆರ್‌ಟಿ–ಇನ್ ಎಚ್ಚರಿಕೆ ನೀಡಿದೆ’ ಎಂದು ಸಚಿವಾಲಯ ಹೇಳಿದೆ.

‘ಎನ್‌ಐಸಿ, ಎನ್‌ಎಚ್‌ಎಐ, ಎನ್‌ಎಚ್‌ಐಡಿಸಿಎಲ್, ಐಆರ್‌ಸಿ, ಐಎಎಚ್‌ಇ, ರಾಜ್ಯಗಳ ಪಿಡಬ್ಲ್ಯುಡಿಗಳು, ಟೆಸ್ಟಿಂಗ್ ಏಜೆನ್ಸಿಗಳು ಹಾಗೂ ಆಟೊಮೊಬೈಲ್ ಉತ್ಪಾದಕರು ತಮ್ಮ ಸಂಸ್ಥೆಗಳಲ್ಲಿನ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಸುರಕ್ಷತೆ ಕುರಿತು ಆಡಿಟ್ ಕೈಗೊಳ್ಳಬೇಕು. ಸಿಇಆರ್‌ಟಿ–ಇನ್ ಪ್ರಮಾಣಿತ ಸಂಸ್ಥೆಗಳಿಂದ ಈ ಆಡಿಟ್ ನಡೆಸಬೇಕು’ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಸೈಬರ್ ಸುರಕ್ಷತೆಯ ನೋಡಲ್ ಏಜೆನ್ಸಿಯಾಗಿರುವ ಸಿಇಆರ್‌ಟಿ–ಇನ್, ಸಂಭಾವ್ಯ ಸೈಬರ್ ದಾಳಿ ಕುರಿತು ಎಲ್ಲ ಇಲಾಖೆಗಳಿಗೆ ಸೂಚನೆ ನೀಡುತ್ತದೆ.

ಮೆಹ್ತಾ, ಅರವಿಂದ್ ಸುಬ್ರಮಣಿಯನ್ ರಾಜೀನಾಮೆ ಪ್ರಕರಣ

ತಪ್ಪೊಪ್ಪಿಕೊಂಡ ಅಶೋಕ ವಿವಿ

ನವದೆಹಲಿ (ಪಿಟಿಐ): ರಾಜಕೀಯ ವಿಶ್ಲೇಷಕ ಪ್ರತಾಪ್ ಭಾನು ಮೆಹ್ತಾ ಮತ್ತು ಆರ್ಥಿಕ ತಜ್ಞ ಅರವಿಂದ್ ಸುಬ್ರಮಣಿಯನ್ ಅವರು ಪ್ರಾಧ್ಯಾಪಕ ಹುದ್ದೆಗಳಿಗೆ ರಾಜೀನಾಮೆ ನೀಡಿರುವ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿರುವ ಅಶೋಕ ವಿಶ್ವವಿದ್ಯಾಲಯ, ‘ಸಾಂಸ್ಥಿಕ ಪ್ರಕ್ರಿಯೆಯಲ್ಲಿ ಲೋಪಗಳಾಗಿವೆ’ ಎಂದು ಒಪ್ಪಿಕೊಂಡಿದೆ.

‘ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪ್ರಮುಖರ ಜತೆ ಚರ್ಚಿಸಿ ಲೋಪಗಳನ್ನು ಸರಿಪಡಿಸಿಕೊಳ್ಳಲಾಗುವುದು. ಈ ಮೂಲಕ ಶೈಕ್ಷಣಿಕ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಬದ್ಧರಾಗಿದ್ದೇವೆ ಎನ್ನುವುದನ್ನು ಸ್ಪಷ್ಟಪಡಿಸುತ್ತೇವೆ. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಅಶೋಕ ವಿಶ್ವವಿದ್ಯಾಲಯದ ಸಿದ್ಧಾಂತದ ಭಾಗವಾಗಿವೆ’ ಎಂದು ಭಾನುವಾರ ನೀಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

‘ಮೆಹ್ತಾ ಅವರು ಮೊದಲು ಕುಲಪತಿಯಾಗಿ ಹಾಗೂ ಹಿರಿಯ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ವಿಶ್ವವಿದ್ಯಾಲಯದ ಪ್ರಗತಿಗೆ ಮಾರ್ಗದರ್ಶನ ಮಾಡಿದ್ದಾರೆ. ಅದೇ ರೀತಿ, ಸುಬ್ರಮಣಿಯನ್ ಅವರು ವಿಶ್ವವಿದ್ಯಾಲಯದಲ್ಲಿ ಹೊಸ ಕಲ್ಪನೆಗಳನ್ನು ಬಿತ್ತಿ ಶಕ್ತಿ ತುಂಬಿದ್ದಾರೆ. ಜತೆಗೆ ವಿಶ್ವವಿದ್ಯಾಲಯ ತನ್ನ ಹಿರಿಮೆ ಸಾಧಿಸಿ, ಸ್ಥಾನಮಾನ ಹೆಚ್ಚಿಸಿಕೊಳ್ಳಲು ಕಾರಣರಾಗಿದ್ದಾರೆ’ ಎಂದು ತಿಳಿಸಿದೆ.

ವಿಶ್ವವಿದ್ಯಾಲಯದ ಕುಲಾಧಿಪತಿ, ಕುಲಪತಿ ಮತ್ತು ಟ್ರಸ್ಟಿಗಳ ಮಂಡಳಿಯ ಅಧ್ಯಕ್ಷರು ಜಂಟಿಯಾಗಿ ಈ ಹೇಳಿಕೆ ನೀಡಿದ್ದಾರೆ.

‘ವಿಶ್ವವಿದ್ಯಾಲಯವನ್ನು ತೊರೆದಿರುವ ಬಗ್ಗೆ ಪ್ರತಾಪ್ ಮತ್ತು ಅರವಿಂದ್ ಅವರಿಗೆ ದುಃಖವಾಗಿದೆ. ದೇಶದ ಉನ್ನತ ಶಿಕ್ಷಣದಲ್ಲಿ ಮಹತ್ವದ ಯೋಜನೆಯಾಗಿರುವ ಅಶೋಕ ವಿಶ್ವವಿದ್ಯಾಲಯ ಉದಾರ ದೂರದೃಷ್ಟಿ ಮತ್ತು ಶೈಕ್ಷಣಿಕ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆ ಹೊಂದಿರಬೇಕು ಎಂದು ಅವರು ಪ್ರತಿಪಾದಿಸಿದ್ದರು. ಈ ಇಬ್ಬರೂ ವಿಶ್ವವಿದ್ಯಾಲಯದ ಹಿತೈಷಿಯಾಗಿ ತಮ್ಮ ಜೀವನದುದ್ದಕ್ಕೂ ಇರುತ್ತಾರೆ’ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ತರಗತಿಗೆ ಬಹಿಷ್ಕಾರ: ಸೋಮವಾರದಿಂದ ಎರಡು ದಿನಗಳ ಕಾಲ ತರಗತಿಗಳಿಗೆ ಬಹಿಷ್ಕಾರ ಹಾಕುವುದಾಗಿ ವಿದ್ಯಾರ್ಥಿಗಳು ತಿಳಿಸಿದ್ದಾರೆ

ಆದರೆ, ಈ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಮೆಹ್ತಾ ಅವರು ವಿದ್ಯಾರ್ಥಿಗಳಿಗೆ ಕೋರಿದ್ದಾರೆ.

ವಿದ್ಯಾರ್ಥಿಗಳಿಗೆ ಪತ್ರ ಬರೆದಿರುವ ಮೆಹ್ತಾ, ‘ವಿಶ್ವವಿದ್ಯಾಲಯಕ್ಕೆ ಮತ್ತೆ ಮರಳುವಂತೆ ಒತ್ತಾಯಿಸಬಾರದು. ರಾಜೀನಾಮೆ ನೀಡಲು ಉಂಟಾದ ಸಂದರ್ಭಗಳು ಭವಿಷ್ಯದಲ್ಲಿಯೂ ಬದಲಾಗುವುದಿಲ್ಲ. ಹೀಗಾಗಿ, ಒತ್ತಡ ಹೇರಬಾರದು. ಇಬ್ಬರೂ ಪ್ರಾಧ್ಯಾಪಕರಿಗಿಂತ ನಿಮ್ಮ ಗುರಿ ದೊಡ್ಡದು’ ಎಂದು ಎಂದು ಹೇಳಿದ್ದಾರೆ.

ಮಹದಾಯಿ ಕಾಮಗಾರಿ ಸ್ಥಳಕ್ಕೆ ಭೇಟಿ: ಅನುಮತಿ ಕೋರಿದ ಜಿಎಫ್‌ಪಿ

ಪಣಜಿ (ಪಿಟಿಐ): ಮಹದಾಯಿ ನದಿಗೆ ಅಣೆಕಟ್ಟು ನಿರ್ಮಾಣವಾಗುತ್ತಿರುವ ಸ್ಥಳಕ್ಕೆ ರಾಜ್ಯದ ಪ್ರತಿನಿಧಿಗಳಿರುವ ತಂಡ ಭೇಟಿ ನೀಡಲು ಅನುಮತಿ ನೀಡುವಂತೆ ಕೋರಿ ಗೋವಾ ಫಾರ್ವರ್ಡ್ ಪಾರ್ಟಿ (ಜಿಎಫ್‌ಪಿ) ಶಾಸಕ ವಿಜಯ್ ಸರ್ದೇಸಾಯಿ ಅವರು ಕರ್ನಾಟಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಭಾನುವಾರ ಪತ್ರ ಬರೆದಿದ್ದಾರೆ.

‘ಮಹದಾಯಿ ನದಿ ನೀರು ಹಂಚಿಕೆಗೆ ಸಂಬಂಧಿಸಿದ ವಿವಾದ ಕುರಿತ ಪ್ರಕರಣದ ವಿಚಾರಣೆ ಇನ್ನೂ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವಾಗ ಕರ್ನಾಟಕ ಅಣೆಕಟ್ಟು ನಿರ್ಮಿಸುವ ಕಾರ್ಯ ಕೈಗೆತ್ತಿಕೊಂಡಿದೆ’ ಎಂದು ಗೋವಾ ಇತ್ತೀಚೆಗೆ ಆರೋಪಿಸಿತ್ತು.

‘ಸುಪ್ರೀಂಕೋರ್ಟ್‌ನ ಮಾರ್ಗಸೂಚಿ ಪ್ರಕಾರ ರಚಿತವಾದ ಜಂಟಿ ಪರಿಶೀಲನಾ ತಂಡ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಲು ಅನುಮತಿ ನೀಡಬೇಕು. ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಈ ಸಂಬಂಧ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಗೌರವಿಸಲಿದೆ ಎಂಬ ಭರವಸೆ ಹೊಂದಿದ್ದೇವೆ’ ಎಂದೂ ಅವರು ಪತ್ರದಲ್ಲಿ ವಿವರಿಸಿದ್ದಾರೆ.

ಆರೋಗ್ಯ ವಿಮೆ: ಇನ್ನಷ್ಟು ಪಾರದರ್ಶಕಕ್ಕೆ ಸೂಚನೆ

ಒಂದನೇ ಪುಟದಿಂದ

ಎಲ್ಲ ವಿಮಾ ಕಂಪನಿಗಳು ಕ್ಲೇಮ್ ಇತ್ಯರ್ಥಪಡಿಸುವ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಗ್ರಾಹಕರಿಗೆ ಸ್ಪಷ್ಟವಾದ ಹಾಗೂ ಪಾರದರ್ಶಕ ರೀತಿಯಲ್ಲಿ ಸಂದೇಶ ರವಾನೆ ಆಗುತ್ತಿರುವಂತೆ ಮಾಡುವುದು ಮುಖ್ಯ ಎಂದು ಪ್ರಾಧಿಕಾರವು ಸುತ್ತೋಲೆಯಲ್ಲಿ ಹೇಳಿದೆ.

‘ವಿಮೆಯ ಗ್ರಾಹಕರು ತಾವು ಸಲ್ಲಿಸುವ ಕ್ಲೇಮ್ ಅರ್ಜಿಗಳ ಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಳ್ಳುವಂತಾಗಲು ಎಲ್ಲ ವಿಮಾ ಕಂಪನಿಗಳು ವೆಬ್‌ಸೈಟ್, ಪೋರ್ಟಲ್ ಅಥವಾ ಆ್ಯಪ್‌ನ ವ್ಯವಸ್ಥೆ ಕಲ್ಪಿಸಬೇಕು. ಗ್ರಾಹಕರು ಸಲ್ಲಿಸಿದ ಅರ್ಜಿಯನ್ನು ಕಂಪನಿಗಳು ಸ್ವೀಕರಿಸಿದಾಗಿನಿಂದ ಆ ಅರ್ಜಿಯನ್ನು ಇತ್ಯರ್ಥಪಡಿಸುವವರೆಗಿನ ಹಂತಗಳನ್ನು ತಿಳಿದುಕೊಳ್ಳುವ ಸೌಲಭ್ಯ ಇರಬೇಕು’ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಕ್ಲೇಮ್ ಅರ್ಜಿಗಳನ್ನು ವಿಮಾ ಕಂಪನಿಗಳ ಪರವಾಗಿ ಮಧ್ಯವರ್ತಿಗಳು (ಟಿಪಿಎ) ಇತ್ಯರ್ಥಪಡಿಸುತ್ತಿದ್ದರೆ, ಕಂಪನಿಗಳಿಂದ ಬರುವ ಎಲ್ಲ ಸಂದೇಶಗಳು ವಿಮೆಯ ಪಾಲಿಸಿ ಹೊಂದಿರುವವರಿಗೆ ಕೂಡ ಸಿಗುವಂತೆ ಆಗಬೇಕು ಎಂದು ಹೇಳಲಾಗಿದೆ.

ಚಿನ್ನ ಆಮದು ಇಳಿಕೆ

ನವದೆಹಲಿ (ಪಿಟಿಐ): ಚಿನ್ನದ ಆಮದು 2020ರ ಏಪ್ರಿಲ್‌ನಿಂದ 2021ರ ಫೆಬ್ರುವರಿವರೆಗಿನ ಅವಧಿಯಲ್ಲಿ ಶೇಕಡ 3.3ರಷ್ಟು ಇಳಿಕೆ ಆಗಿದ್ದು ₹ 1.90 ಲಕ್ಷ ಕೋಟಿಗಳಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

2019–20ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಚಿನ್ನದ ಆಮದು ಮೌಲ್ಯ ₹ 1.97 ಲಕ್ಷ ಕೋಟಿಗಳಷ್ಟಾಗಿತ್ತು.

ಚಿನ್ನದ ಆಮದು ಇಳಿಕೆ ಆಗಿರುವುದರಿಂದ ದೇಶದ ವ್ಯಾಪಾರ ಕೊರತೆ ಅಂತರ ₹ 61.7 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 11.05 ಲಕ್ಷ ಕೋಟಿಗಳಷ್ಟಿತ್ತು.

ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಹರಳು ಮತ್ತು ಚಿನ್ನಾಭರಣ ರಫ್ತು ಶೇ 33.86ರಷ್ಟು ಇಳಿಕೆ ಆಗಿದೆ.

2020ರ ಫೆಬ್ರುವರಿಗೆ ಹೋಲಿಸಿದರೆ 2021ರ ಫೆಬ್ರುವರಿಯಲ್ಲಿ ಚಿನ್ನದ ಆಮದು ₹ 17,228 ಕೋಟಿಗಳಿಂದ ₹ 38,690 ಕೋಟಿಗಳಿಗೆ ಏರಿಕೆಯಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹385
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹388

ಆಲೂಗೆಡ್ಡೆ ಸಗಟು ದರ ಶೇ 50ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಹಲವೆಡೆ ಆಲೂಗೆಡ್ಡೆ ಸಗಟು ದರವು ಶೇಕಡ 50ರಷ್ಟು ಇಳಿಕೆ ಆಗಿದ್ದು ಕೆ.ಜಿ.ಗೆ ₹ 5ರಿಂದ ₹ 6ರ ಆಸುಪಾಸಿಗೆ ಬಂದಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಕೃಷಿ ಮಾರುಕಟ್ಟೆ ವಾಹಿನಿಯಲ್ಲಿ ಇರುವ ಮಾಹಿತಿಯ ಪ್ರಕಾರ ಬೆಂಗಳೂರಿನಲ್ಲಿ ಶನಿವಾರ ಪ್ರತಿ ಕೆ.ಜಿ. ದರ ಕನಿಷ್ಠ ₹ 13ರಿಂದ ಗರಿಷ್ಠ ₹ 15ರವರೆಗೆ ಇತ್ತು.

ಗ್ರಾಹಕರಿಗೆ ಅತ್ಯಂತ ಕಡಿಮೆ ಬೆಲೆಗೆ ಆಲೂಗೆಡ್ಡೆ ಸಿಗುತ್ತಿದೆ. ಆದರೆ, ರೈತರಿಗೆ ಉತ್ಪಾದನಾ ವೆಚ್ಚವೂ ಸಿಗದಂತಾಗಿದೆ.

ಆಹಾರ ಸಂಸ್ಕರಣಾ ಸಚಿವಾಲಯದ ದರಪಟ್ಟಿಯ ಪ್ರಕಾರ, ಆಲೂಗೆಡ್ಡೆ ಬೆಳೆಯುವ ಪ್ರಮುಖ 60 ಪ್ರದೇಶಗಳ ಪೈಕಿ ಕರ್ನಾಟಕ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತು ಬಿಹಾರ ರಾಜ್ಯಗಳ 25 ಪ್ರದೇಶಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಮಾರ್ಚ್ 20ರಂದು (ಶನಿವಾರ) ಸಗಟು ದರವು ಶೇ 50ರಷ್ಟು ಕಡಿಮೆ ಇದೆ.



ಉತ್ತರ ಪ್ರದೇಶದ ಸಂಭಾಲ ಮತ್ತು ಗುಜರಾತ್‌ನ ದೀಷಾದಲ್ಲಿ ಸಗಟು ದರವು ಶನಿವಾರ ಮೂರು ವರ್ಷಗಳ ಸರಾಸರಿಗಿಂತ ಕಡಿಮೆಯಾಗಿ, ಪ್ರತಿ ಕೆ.ಜಿ.ಗೆ ₹ 6ಕ್ಕೆ ಇಳಿದಿದೆ.

ಪಂಜಾಬ್‌ನ ಅಮೃತಸರ ಹಾಗೂ ದೆಹಲಿಯಲ್ಲಿ ಆಲೂಗೆಡ್ಡೆ ದರವು ಶನಿವಾರ ಕೆ.ಜಿ.ಗೆ ₹ 5ರಷ್ಟಿತ್ತು. ಗರಿಷ್ಠ ದರ ಚೆನ್ನೈನಲ್ಲಿ ಕೆ.ಜಿಗೆ ₹ 17ರಷ್ಟಿತ್ತು.

ಗ್ರಾಹಕ ವ್ಯವಹಾರಗಳ ಸಚಿವಾಲಯದ ಮಾಹಿತಿಯ ಪ್ರಕಾರ, ಸರಾಸರಿ ರಿಟೇಲ್ ದರವು ಶನಿವಾರ ಕೆ.ಜಿಗೆ ₹ 10ರಷ್ಟಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕೆ.ಜಿಗೆ ₹ 20ರಷ್ಟಿತ್ತು.

‘ಈ ಬಾರಿ ಆಲೂಗೆಡ್ಡೆ ಇಳುವರಿ ಉತ್ತಮವಾಗಿದೆ. ಮಂಡಿಗೆ ಆವಕ ಹೆಚ್ಚಾಗಿದ್ದು, ಗ್ರಾಹಕರು ಪಾವತಿಸಬೇಕಿರುವ ದರ ಕಡಿಮೆ ಮಟ್ಟದಲ್ಲಿದೆ’ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ಲೀನಾ ನಂದನ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಭಾಗೀಯ ಪೀಠದ ಮೊರೆಹೋದ ‘ಫ್ಯೂಚರ್’

ನವದೆಹಲಿ (ಪಿಟಿಐ): ಫ್ಯೂಚರ್ ಸಮೂಹವು ತನ್ನ ರಿಟೇಲ್ ಹಾಗೂ ಸಗಟು ವಹಿವಾಟು ವಿಭಾಗಗಳನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಮಾರಾಟ ಮಾಡುವುದಕ್ಕೆ ತಡೆ ನೀಡಿರುವ ದೆಹಲಿ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ.

ಫ್ಯೂಚರ್–ರಿಲಯನ್ಸ್ ನಡುವಿನ ಒಪ್ಪಂದದ ಬಗ್ಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಕೂಡ ವಿಚಾರಣೆ ನಡೆಸುತ್ತಿದೆ.

ಹೈಕೋರ್ಟ್‌ನ ಏಕಸದಸ್ಯ ಪೀಠ ನೀಡಿದ ಆದೇಶದಿಂದ ಎನ್‌ಸಿಎಲ್‌ಟಿ ವಿಚಾರಣೆಗೆ ಯಾವುದೇ ಬಾಧಕ ಇಲ್ಲ ಎಂದು ಫ್ಯೂಚರ್ ಶುಕ್ರವಾರ ಹೇಳಿತ್ತು. ಒಪ್ಪಂದದ ಕುರಿತ ಆದೇಶವನ್ನು ಎನ್‌ಸಿಎಲ್‌ಟಿ ಕಾಯ್ದಿರಿಸಿದೆ.

ಫ್ಯೂಚರ್–ರಿಲಯನ್ಸ್ ಒಪ್ಪಂದವನ್ನು ಅಮೆಜಾನ್ ವಿರೋಧಿಸಿದೆ. ಆದರೆ, ಈ ಒಪ್ಪಂದಕ್ಕೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ), ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ ಹಾಗೂ ಷೇರುಪೇಟೆಗಳ ಅನುಮೋದನೆ ಈಗಾಗಲೇ ದೊರೆತಿದೆ. ಎನ್‌ಸಿಎಲ್‌ಟಿ ಆದೇಶ ಹಾಗೂ ಕಂಪನಿಯ ಷೇರುದಾರರ ಅನುಮತಿ ಸಿಗಬೇಕಿದೆ.

ರಿಟೇಲ್ ಹಾಗೂ ಸಗಟು ಮಾರಾಟ ವಿಭಾಗವನ್ನು ರಿಲಯನ್ಸ್‌ಗೆ ₹ 24,713 ಕೋಟಿ ಮೊತ್ತಕ್ಕೆ ಮಾರುವುದಾಗಿ ಫ್ಯೂಚರ್ ಸಮೂಹವು 2020ರ ಆಗಸ್ಟ್ ಕೊನೆಯಲ್ಲಿ ಪ್ರಕಟಿಸಿತ್ತು.

ಸೌದಿ ಆರಾಮ್ಕೊ ಲಾಭ ಇಳಿಕೆ

ದುಬೈ (ಎಪಿ): ಸೌದಿ ಅರೇಬಿಯಾದ ಪ್ರಮುಖ ತೈಲ ಕಂಪನಿ ಆರಾಮ್ಕೊದ ಲಾಭವು 2020ರಲ್ಲಿ ಕೋವಿಡ್–19 ಸಾಂಕ್ರಾಮಿಕದಿಂದಾಗಿ ಸರಿಸುಮಾರು ಶೇಕಡ 50ರಷ್ಟು ಇಳಿಕೆ ಆಗಿದೆ. 2020ರಲ್ಲಿ ಕಂಪನಿಯ ಲಾಭ ₹ 3.57 ಲಕ್ಷ ಕೋಟಿ ಆಗಿದೆ. 2019ರಲ್ಲಿ ಕಂಪನಿಯು ₹ 6.43 ಲಕ್ಷ ಕೋಟಿಗಳಷ್ಟು ಲಾಭ ಗಳಿಸಿತ್ತು.


ಆರಾಮ್ಕೊ ಘಟಕ

ಏನಿದು ಬಾಂಡ್, ಡಿಬೆಂಚರ್ ಹೂಡಿಕೆ?

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಅದು ಸಣ್ಣ ಉದ್ಯಮವಿರಬಹುದು, ದೊಡ್ಡ ಕಂಪನಿ ಇರಬಹುದು ಅಥವಾ ಒಂದು ಸರ್ಕಾರವೇ ಇರಬಹುದು; ಕೆಲಸ ಸಾಗಬೇಕು ಅಂದರೆ ಹಣದ ಅಗತ್ಯ ಇದ್ದೇ ಇರುತ್ತದೆ. ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಲ ಮಾಡುವುದು ಒಂದು ಮಾರ್ಗ. ಸಾಲ ಪಡೆಯಲು ಹಲವು ಮಾರ್ಗಗಳಿದ್ದರೂ ಅವುಗಳಲ್ಲಿ ಬಾಂಡ್ ಮತ್ತು ಡಿಬೆಂಚರ್‌ಗಳು ಪ್ರಮುಖ ಸಾಧನಗಳು. ಬಹಳಷ್ಟು ಹೂಡಿಕೆದಾರರು ಬಾಂಡ್ ಮತ್ತು ಡಿಬೆಂಚರ್‌ಗಳಲ್ಲಿನ ಹೂಡಿಕೆಯಲ್ಲಿ ಹೆಚ್ಚು ಅಪಾಯ (ರಿಸ್ಕ್) ಇಲ್ಲ ಎಂದು ಭಾವಿಸಿ ಹೂಡಿಕೆ ಮಾಡಿದ ನಂತರ ಪರಿತಪಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬಾಂಡ್ ಮತ್ತು ಡಿಬೆಂಚರ್ ಹೂಡಿಕೆ ಬಗ್ಗೆ ಅರಿವು ಹೆಚ್ಚಿಸುವ ವಿವರ ಇಲ್ಲಿದೆ.

ಏನಿದು ಬಾಂಡ್, ಡಿಬೆಂಚರ್?: ಬಾಂಡ್ ಅಥವಾ ಡಿಬೆಂಚರ್‌ಗಳು ಸರ್ಕಾರ ಅಥವಾ ಕಂಪನಿಗಳು ನೀಡುವ ಸಾಲಪತ್ರಗಳು (Debt Instruments). ಈ ಎರಡೂ ಮಾದರಿಗಳು ಬಂಡವಾಳ ಸಂಗ್ರಹಕ್ಕೆ ಇರುವ ಸಾಧನಗಳು. ಬಾಂಡ್‌ಗಳನ್ನು ಸಾಮಾನ್ಯವಾಗಿ ಸರ್ಕಾರ, ಸರ್ಕಾರದ ಸಂಸ್ಥೆಗಳು ನೀಡಿದರೆ ಡಿಬೆಂಚರ್‌ಗಳನ್ನು ದೊಡ್ಡ ಕಂಪನಿಗಳು ನೀಡುತ್ತವೆ. ಬಹುತೇಕ ಸಂದರ್ಭಗಳಲ್ಲಿ ಬಾಂಡ್ ಮತ್ತು ಡಿಬೆಂಚರ್ ಪದಗಳನ್ನು ಒಂದಕ್ಕೊಂದು ಪರ್ಯಾಯ ಎಂಬಂತೆ ಬಳಸಲಾಗುತ್ತದೆ. ಬಾಂಡ್ ಮತ್ತು ಡಿಬೆಂಚರ್‌ಗೆ ಒಂದಿಷ್ಟು ವ್ಯತ್ಯಾಸಗಳಿದ್ದರೂ ಅಷ್ಟಾಗಿ ಪ್ರತ್ಯೇಕಿಸಿ ನೋಡುವ ಅಗತ್ಯವಿಲ್ಲ. ಉದಾಹರಣೆಗೆ ‘ಆರ್’ ಎಂಬ ಕಂಪನಿಗೆ ಈಗ ಬಂಡವಾಳ ಅಗತ್ಯವಿದೆ ಎಂದು ಭಾವಿಸೋಣ. ಅದು ಶೇಕಡ 7, ಶೇ 8 ಅಥವಾ ಶೇ 9ರ ಬಡ್ಡಿ ದರದ ಡಿಬೆಂಚರ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತದೆ. ಇದರಲ್ಲಿ ಹೂಡಿಕೆ ಮಾಡಿದರೆ ನಿಮಗೆ ಪೂರ್ವ ನಿಗದಿತ ಬಡ್ಡಿಯ ಲಾಭ ಸಿಗುತ್ತದೆ.

ಬಾಂಡ್/ಡಿಬೆಂಚರ್ ಮಾದರಿಗಳು: ಡಿಬೆಂಚರ್‌ಗಳಲ್ಲಿ ಎರಡು ಮಾದರಿಗಳಿವೆ. ಒಂದು, ಹೂಡಿಕೆ ಹಣಕ್ಕೆ ಖಾತರಿ ಇರುವ ಡಿಬೆಂಚರ್. ಮತ್ತೊಂದು, ಹೂಡಿಕೆ ಹಣಕ್ಕೆ ಖಾತರಿ ಇಲ್ಲದಿರುವ ಡಿಬೆಂಚರ್. ಖಾತರಿ ಇರುವ ಡಿಬೆಂಚರ್‌ನಲ್ಲಿ ಬಡ್ಡಿ ಲಾಭ ಕಡಿಮೆ ಇರುತ್ತದೆ. ಆದರೆ ಖಾತರಿ ಇಲ್ಲದಿರುವ ಡಿಬೆಂಚರ್‌ನಲ್ಲಿ ಬಡ್ಡಿ ಲಾಭ ಹೆಚ್ಚಿಗೆ ಇರುತ್ತದೆ. ಖಾತರಿ ಇರುವ ಡಿಬೆಂಚರ್‌ನಲ್ಲಿ ಕಂಪನಿ ದಿವಾಳಿಯಾದರೂ ನಿಮ್ಮ ಹೂಡಿಕೆ ಹಣ ಸಿಗುತ್ತದೆ. ಆದರೆ, ಕಂಪನಿ ದಿವಾಳಿಯಾದ ಬಳಿಕ ಅದರ ಆಸ್ತಿಗಳನ್ನೆಲ್ಲಾ ಮಾರಾಟ ಮಾಡಿ ನಂತರದಲ್ಲಿ ಹಣ ನೀಡುವ ಹೊತ್ತಿಗೆ ಸಾಕಷ್ಟು ಸಮಯ ಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಹಣ ಹಂಚಿಕೆಯಲ್ಲಿ ವಿಳಂಬವಾಗಿರುವ ಬಹಳಷ್ಟು ಉದಾಹರಣೆಗಳು ಕಣ್ಣ ಮುಂದೆ ಇವೆ.

ಮಾರ್ಪಡಿಸಲಾಗದ ಡಿಬೆಂಚರ್‌ಗಳು (Non Convertible Debentures): ಹೂಡಿಕೆಯ ಮಾದರಿಯಲ್ಲಿ ಯಾವುದೇ ಬದಲಾವಣೆ ಮಾಡಲು ಸಾಧ್ಯವಾಗದ ಡಿಬೆಂಚರ್‌ಗಳನ್ನು ಮಾರ್ಪಡಿಸಲಾಗದ ಡಿಬೆಂಚರ್‌ಗಳು ಎಂದು ಕರೆಯಬಹುದು. ಸಾಲ ಪಡೆದ ಕಂಪನಿ ಅಥವಾ ಸಾಲ ನೀಡಿದ ವ್ಯಕ್ತಿಯ ಇಚ್ಛೆಯ ಮೇರೆಗೆ ಇಲ್ಲಿ ಡಿಬೆಂಚರ್‌ಗಳನ್ನು ಷೇರು ಹೂಡಿಕೆಗಳಾಗಿ ಮಾರ್ಪಡಿಸಲು ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಬಡ್ಡಿ ಆದಾಯ ಬೇಕು ಎನ್ನುವವರಿಗೆ ಇದೊಂದು ಒಳ್ಳೆಯ ಆಯ್ಕೆ.

ಬಾಂಡ್/ಡಿಬೆಂಚರ್ ಹೂಡಿಕೆ ಬೇಕೇ?: ಡಿಬೆಂಚರ್‌ಗಳಲ್ಲಿ ಸಾಮಾನ್ಯವಾಗಿ ನಿಶ್ಚಿತ ಠೇವಣಿಗಳಲ್ಲಿ ಸಿಗುವ ಬಡ್ಡಿಗಿಂತ ಹೆಚ್ಚಿಗೆ ಲಾಭ ಸಿಗುತ್ತದೆ. ಉದಾಹರಣೆಗೆ ನಿಶ್ಚಿತ ಠೇವಣಿಗಳಲ್ಲಿ ಶೇ 6ರ ಬಡ್ಡಿ ಲಾಭ ಸಿಕ್ಕಿದರೆ ಡಿಬೆಂಚರ್‌ನಲ್ಲಿ ಶೇ 8ರಿಂದ ಶೇ 9ರಷ್ಟು ಬಡ್ಡಿ ಲಾಭ ಲಭಿಸುತ್ತದೆ. ಆದರೆ ಇಲ್ಲಿ ಕೊಂಚ ರಿಸ್ಕ್ ಇರುತ್ತದೆ. ಖಾತರಿ ಇರುವ ಡಿಬೆಂಚರ್‌ಗಳಲ್ಲಿ ರಿಸ್ಕ್ ಕಡಿಮೆ, ಖಾತರಿ ಇಲ್ಲದ ಡಿಬೆಂಚರ್‌ಗಳಲ್ಲಿ ರಿಸ್ಕ್ ಜಾಸ್ತಿ ಇರುತ್ತದೆ. ಇನ್ನು, ಡಿಬೆಂಚರ್‌ಗಳು ಷೇರು ಮಾರುಕಟ್ಟೆಗೆ ಸೇರ್ಪಡೆಯಾಗಿರುತ್ತವೆ. ಹಾಗಾಗಿ ನಗದೀಕರಣ ಕಷ್ಟವಿಲ್ಲ. ಮಾರಾಟ ಮಾಡಿದ ಮೂರು ದಿನಗಳಲ್ಲಿ ಹಣ ನಿಮಗೆ ಸಂದಾಯವಾಗುತ್ತದೆ. ಹೀಗಾಗಿ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದ ನಂತರದಲ್ಲಷ್ಟೇ ಡಿಬೆಂಚರ್ ಹೂಡಿಕೆ ತೀರ್ಮಾನಕ್ಕೆ ಬರಬೇಕು.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಮಾರಾಟದ ಒತ್ತಡಕ್ಕೆ ಸಿಲುಕಿದ ಸೂಚ್ಯಂಕ

ಷೇರುಪೇಟೆ ಸೂಚ್ಯಂಕಗಳು ಮಾರಾಟದ ಒತ್ತಡಕ್ಕೆ ಸಿಲುಕಿವೆ. ಬಾಂಡ್‌ಗಳ ಮೇಲಿನ ಗಳಿಕೆ ಹೆಚ್ಚಳ, ಹಣದುಬ್ಬರ ಪ್ರಮಾಣದಲ್ಲಿ ಏರಿಕೆ, ಕೋವಿಡ್ ಎರಡನೆಯ ಅಲೆಯ ಆತಂಕ ಸೇರಿ ಹಲವು ಅಂಶಗಳು ಮಾರುಕಟ್ಟೆಯನ್ನು ಮಂಕಾಗಿಸಿವೆ.

ಮಾರ್ಚ್ 19ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿದಿವೆ. 49,858 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 1.83ರಷ್ಟು ಇಳಿಕೆ ಕಂಡಿದ್ದರೆ, 14,744 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.9ರಷ್ಟು ಕುಸಿತ ಕಂಡಿದೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.4ರಷ್ಟು ಕುಸಿದಿದೆ. ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 2.6ರಷ್ಟು ಮತ್ತು ಶೇ 2ರಷ್ಟು ತಗ್ಗಿವೆ.

ವಾರದ ಅವಧಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,893 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಹೂಡಿಕೆದಾರರು ₹ 3,037 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಮಾರ್ಚ್‌ನಲ್ಲಿ ಈವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 9,221.24 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರೆ, ದೇಶಿಯ ಹೂಡಿಕೆದಾರರು ₹ 4,433.48 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 5.8ರಷ್ಟು, ಫಾರ್ಮಾ ವಲಯ ಶೇ 4.2ರಷ್ಟು ಮತ್ತು ಬ್ಯಾಂಕ್ ಸೂಚ್ಯಂಕ ಶೇ 3.7ರಷ್ಟು ಕುಸಿದಿವೆ. ಎಫ್‌ಎಂಸಿಜಿ ವಲಯ ಶೇ 2.9ರಷ್ಟು ಏರಿಕೆ ದಾಖಲಿಸಿದೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಐಟಿಸಿ ಶೇ 9ರಷ್ಟು, ಹಿಂದುಸ್ಥಾನ್ ಯುನಿಲಿವರ್ ಶೇ 5ರಷ್ಟು, ಬ್ರಿಟಾನಿಯಾ ಶೇ 1ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 5ರಷ್ಟು, ಗ್ರಾಸಿಮ್ ಶೇ 2ರಷ್ಟು, ಟಾಟಾ ಸ್ಟೀಲ್ ಶೇ 2ರಷ್ಟು, ಹಿಂಡಾಲ್ಕೋ ಶೇ 2ರಷ್ಟು ಗಳಿಸಿವೆ. ಹೀರೊ ಮೋಟೊಕಾರ್ಪ್ ಶೇ 7ರಷ್ಟು, ಎಲ್‌ಆ್ಯಂಡ್‌ಟಿ ಶೇ 7ರಷ್ಟು, ಸನ್ ಫಾರ್ಮಾ ಶೇ 6ರಷ್ಟು, ಅದಾನಿ ಪೋರ್ಟ್ಸ್ ಶೇ 6ರಷ್ಟು, ಸಿಪ್ಲಾ ಶೇ 5ರಷ್ಟು, ಬಿಪಿಸಿಎಲ್ ಶೇ 5ರಷ್ಟು ಕುಸಿದಿವೆ.

ಐಪಿಒ: ಮಾರ್ಚ್ 24ರಿಂದ ಬಾರ್ಬಿಕ್ಯೂ ನೇಷನ್ ಐಪಿಒ ಮುಕ್ತವಾಗಲಿದೆ.

ಮುನ್ನೋಟ: ಅಮೆರಿಕದಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಎತ್ತ ಸಾಗುತ್ತದೆ ಎನ್ನುವುದು ಮುಖ್ಯವಾಗುತ್ತದೆ. ತೈಲ ಬೆಲೆ ಇಳಿಕೆ ಕಾಣವುದೋ ಅಥವಾ ಮತ್ತೆ ಏರಿಕೆಯ ಹಾದಿ ತುಳಿಯುವುದೋ ನೋಡಬೇಕಿದೆ. ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದು ಷೇರುಪೇಟೆ ಮೇಲೆ ಪರಿಣಾಮ ಬೀರಲಿದೆ. ಮಾರ್ಚ್‌ನ ತ್ರೈಮಾಸಿಕ ಗಳಿಕೆಯು ಡಿಸೆಂಬರ್ ತ್ರೈಮಾಸಿಕಕ್ಕಿಂತ ಹಿನ್ನಡೆ ಕಾಣಬಹುದು ಎಂಬ ಅಂದಾಜು ಸಹ ಹೂಡಿಕೆದಾರರು ಅಳೆದು ತೂಗಿ ನಿರ್ಧಾರ ಕೈಗೊಳ್ಳುವಂತೆ ಮಾಡಿದೆ. ಸದ್ಯ ಅನಿಶ್ಚಿತ ವಾತಾವರಣ ಮುಂದುವರಿಯುವ ಸಾಧ್ಯತೆ ಹೆಚ್ಚಿದೆ.

ಕೌಟುಂಬಿಕ ಸಾಲ ಹೆಚ್ಚಳ: ಆರ್‌ಬಿಐ ವರದಿ

ಮುಂಬೈ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದಿಂದಾಗಿ 2020-21ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕೌಟುಂಬಿಕ ಸಾಲದ ಪ್ರಮಾಣವು ದೇಶದ ಜಿಡಿಪಿಯ ಶೇಕಡ 37.1ಕ್ಕೆ ಏರಿಕೆ ಆಗಿದೆ ಎಂದು ಆರ್‌ಬಿಐ ವರದಿ ತಿಳಿಸಿದೆ.

ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ 21ರಷ್ಟಿದ್ದ ಕೌಟುಂಬಿಕ ಉಳಿತಾಯವು ಎರಡನೇ ತ್ರೈಮಾಸಿಕದಲ್ಲಿ ಶೇ 10.4ಕ್ಕೆ ಇಳಿಕೆಯಾಗಿದೆ. ಹೀಗಿದ್ದರೂ 2019–20ರ ಎರಡನೇ ತ್ರೈಮಾಸಿಕದಲ್ಲಿದ್ದ ಶೇ 9.8ರಷ್ಟಕ್ಕಿಂತಲೂ ಹೆಚ್ಚಿಗೆ ಇದೆ.

ಕೋವಿಡ್–19 ಸಾಂಕ್ರಾಮಿಕದಿಂದಾಗಿ ಉದ್ಯೋಗ ನಷ್ಟ ಉಂಟಾಗಿದೆ. ಬಹುತೇಕ ಎಲ್ಲ ವಲಯಗಳ ನೌಕರರ ವೇತನದಲ್ಲಿ ಕಡಿತ ಆಗಿದೆ. ಇದರಿಂದಾಗಿ ಹೆಚ್ಚು ಸಾಲ ಪಡೆಯುವಂತೆ ಅಥವಾ ವೆಚ್ಚಗಳನ್ನು ಪೂರೈಸಲು ಉಳಿತಾಯ ಮಾಡಿದ್ದನ್ನು ಖರ್ಚು ಮಾಡುವಂತೆ ಆಗಿದೆ ಎಂದು ವರದಿ ಹೇಳಿದೆ.

ಮೂರನೇ ತ್ರೈಮಾಸಿಕದಲ್ಲಿ ಕೌಟುಂಬಿಕ ಉಳಿತಾಯದ ಪ್ರಮಾಣವು ಇನ್ನಷ್ಟು ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ವರದಿ ಎಚ್ಚರಿಕೆ ನೀಡಿದೆ.

ಜೀವನ್ ಪ್ರಮಾಣ್‌ಗೆ ಆಧಾರ್ ಕಡ್ಡಾಯವಲ್ಲ

ನವದೆಹಲಿ (ಪಿಟಿಐ): ಪಿಂಚಣಿ ಪಡೆಯುತ್ತಿರುವವರು ಜೀವಿತ ಪ್ರಮಾಣಪತ್ರವನ್ನು (ಜೀವನ್ ಪ್ರಮಾಣ್) ಡಿಜಿಟಲ್ ಸ್ವರೂಪದಲ್ಲಿ ಪಡೆದುಕೊಳ್ಳಲು ಇನ್ನು ಮುಂದೆ ಆಧಾರ್ ಕಡ್ಡಾಯವಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ಅಲ್ಲದೆ ಕೇಂದ್ರ ಸರ್ಕಾರವು ತಾನು ರೂಪಿಸಿರುವ ‘ಸಂದೇಶ್’ ಆ್ಯಪ್ ಬಳಕೆಗೆ ಆಧಾರ್ ಸಂಖ್ಯೆ ನೀಡುವುದನ್ನು ಐಚ್ಛಿಕಗೊಳಿಸಿದೆ.

ಸರ್ಕಾರಿ ಕಚೇರಿಗಳಲ್ಲಿ ಹಾಜರಿ ನಿರ್ವಹಣಾ ವ್ಯವಸ್ಥೆಯ ಅಡಿಯೂ ಆಧಾರ್ ಬಳಕೆಯನ್ನು ಐಚ್ಛಿಕಗೊಳಿಸಲಾಗಿದೆ.

ಒಡಿಸ್ಸಿ ನೃತ್ಯ ಕಲಾವಿದೆ ಲಕ್ಷ್ಮಿಪ್ರಿಯಾ ಮೊಹಾಪಾತ್ರ ನಿಧನ

ಭುವನೇಶ್ವರ (ಪಿಟಿಐ): ಒಡಿಸ್ಸಿ ನೃತ್ಯದ ದಂತಕತೆ ಕೇಳುಚರಣ ಮೊಹಾಪಾತ್ರ ಅವರ ಪತ್ನಿ ಹಾಗೂ ಒಡಿಸ್ಸಿ ನೃತ್ಯ ಕಲಾವಿದೆ ಲಕ್ಷ್ಮಿಪ್ರಿಯಾ ಮೊಹಾಪಾತ್ರ (86) ಶನಿವಾರ ಮಧ್ಯರಾತ್ರಿ ಇಲ್ಲಿನ ತಮ್ಮ ಮನೆಯಲ್ಲಿ ನಿಧನರಾದರು.

ಅವರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ಅವರಿಗೆ ಪುತ್ರ ರತಿಕಾಂತ್ ಮೊಹಾಪಾತ್ರ ಹಾಗೂ ಸೊಸೆ ಸುಜಾತಾ ಮೊಹಾಪಾತ್ರ ಇದ್ದಾರೆ. ಇಬ್ಬರೂ ಒಡಿಸ್ಸಿ ನೃತ್ಯಗುರುಗಳಾಗಿದ್ದಾರೆ.

ಪುರಿಯ ಅನ್ನಪೂರ್ಣ ಥಿಯೇಟರ್‌ನಲ್ಲಿ ಚಿಕ್ಕ ವಯಸ್ಸಿನಲ್ಲಿ ನೃತ್ಯಜೀವನವನ್ನು ಆರಂಭಿಸಿದ ಲಕ್ಷ್ಮಿಪ್ರಿಯಾ ಅವರು, ಕಟಕ್‌ನಲ್ಲಿರುವ ಅನ್ನಪೂರ್ಣ ಥಿಯೇಟರ್–ಬಿನಲ್ಲಿ ಕೇಳುಚರಣ ಮೊಹಾಪಾತ್ರ ಅವರ ಸಂಪರ್ಕಕ್ಕೆ ಬಂದರು.

ಕೇಳುಚರಣ ಅವರು ಒಡಿಸ್ಸಿ ಮತ್ತು ಗೋಟಿಪುವಾ ನೃತ್ಯಪ್ರಕಾರಗಳಲ್ಲಿ ಪರಿಣತಿ ಸಾಧಿಸಿದ್ದರೂ ಥಿಯೇಟರ್‌ನಲ್ಲಿ ತಬಲಾ ವಾದಕರಾಗಿದ್ದರು. 1947ರಲ್ಲಿ ಕೇಳುಚರಣ ಅವರನ್ನು ವಿವಾಹವಾದ ನಂತರ ಲಕ್ಷ್ಮಿಪ್ರಿಯಾ ತಮ್ಮ ನೃತ್ಯಜೀವನವನ್ನು ತೊರೆದರು. ಒರಿಯಾ ಭಾಷೆಯ ನಾಲ್ಕು ಚಿತ್ರಗಳಲ್ಲೂ ಲಕ್ಷ್ಮಿಪ್ರಿಯಾ ನಟಿಸಿದ್ದಾರೆ.

ಮಹಿಳೆಯರ 10 ಮೀ. ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಚಿನ್ನ ಗೆದ್ದ ಯಶಸ್ವಿನಿ ಸಿಂಗ್ ದೇಸ್ವಾಲ್, ಶ್ರೀ ನಿವೇದಾ ಹಾಗೂ ಮನು ಭಾಕರ್

10 ಮೀ ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಅಭಿಷೇಕ್ ವರ್ಮಾ, ಸೌರಭ್ ಚೌಧರಿ ಹಾಗೂ ಶಹಜಾರ್ ರಿಜ್ವಿ

ಐಎಸ್‌ಎಸ್‌ಎಫ್ ವಿಶ್ವಕಪ್: 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಪಾರಮ್ಯ

ಚಿನ್ನಕ್ಕೆ ಗುರಿಯಿಟ್ಟ ಭಾರತದ ಶೂಟರ್‌ಗಳು

ನವದೆಹಲಿ (ಪಿಟಿಐ): ನಿಖರ ಗುರಿಯಿಂದ ಗಮನಸೆಳೆದ ಭಾರತದ ಪುರುಷ ಹಾಗೂ ಮಹಿಳಾ ತಂಡಗಳು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯಲ್ಲಿ ಪಾರಮ್ಯ ಮೆರೆದವು. ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮೂರನೇ ದಿನವಾದ ಭಾನುವಾರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡವು.

ಯೂತ್ ಒಲಿಂಪಿಕ್ಸ್ ಹಾಗೂ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಸೌರಭ್ ಚೌಧರಿ, ಅಭಿಷೇಕ್ ವರ್ಮಾ ಹಾಗೂ ಶಹಜಾರ್ ರಿಜ್ವಿ ಅವರನ್ನೊಳಗೊಂಡ ಭಾರತದ ಪುರುಷರ ತಂಡವು 17–11ರಿಂದ ವಿಯೆಟ್ನಾಂ ತಂಡವನ್ನು ಮಣಿಸಿ ಚಿನ್ನದ ಪದಕಕ್ಕೆ ಕೊರಳೊಡ್ಡಿತು.

ಮಹಿಳಾ ತಂಡದ ಯಶಸ್ವಿನಿ ಸಿಂಗ್ ದೇಸ್ವಾಲ್, ಮನು ಭಾಕರ್ ಹಾಗೂ ಶ್ರೀ ನಿವೇದಾ ಅವರು 16–8ರಿಂದ ಪೋಲೆಂಡ್‌ನ ಜುಲಿಟಾ ಬೊರೆಕ್, ಜೊವಾನ್ನಾ ಇವೊನಾ ವಾರ್ಜೊನೊಸ್ಕಾ ಹಾಗೂ ಅಗ್ನಿಸ್ಕಾ ಕೊರೆಜ್ವೊ ಅವರ ಸವಾಲು ಮೀರಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಭಾರತ ಪುರುಷರ ತಂಡವು ಮೊದಲ ಅರ್ಹತಾ ಸುತ್ತಿನಲ್ಲಿ ವಿಯೆಟ್ನಾಂನ ದಿನ್ ಥಾನ್ ಎನ್‌ಗುಯೆನ್, ಕ್ವೂಕ್ ಕ್ಯೂಂಗ್ ತ್ರಾನ್ ಹಾಗೂ ಜುವಾನ್ ಚುಯೆನ್ ಪ್ವಾನ್ ಎದುರು 1750 ಪಾಯಿಂಟ್ಸ್ ಕಲೆಹಾಕಿತು. ವಿಯೆಟ್ನಾಂ ಶೂಟರ್‌ಗಳಿಗೆ 1708 ಪಾಯಿಂಟ್ಸ್ ಗಳಿಸಲು ಮಾತ್ರ ಸಾಧ್ಯವಾಯಿತು. ಎರಡನೇ ಸುತ್ತಿನಲ್ಲಿ ಭಾರತ ಹಾಗೂ ವಿಯೆಟ್ನಾಂ ಕ್ರಮವಾಗಿ 579 ಹಾಗೂ 565 ಪಾಯಿಂಟ್ಸ್ ಸಂಗ್ರಹಿಸಿದವು.

ಭಾರತದ ಮಹಿಳೆಯರು ಮೊದಲ ಅರ್ಹತಾ ಸುತ್ತಿನಲ್ಲಿ 1731 ಪಾಯಿಂಟ್ಸ್ ಗಳಿಸಿದರೆ, ಪೋಲೆಂಡ್ ಶೂಟರ್‌ಗಳು ಕಲೆಹಾಕಿದ್ದು 1701. ಎರಡನೇ ಅರ್ಹತಾ ಸುತ್ತಿನಲ್ಲಿ ಭಾರತ 576 ಹಾಗೂ ಪೋಲೆಂಡ್ 567 ಪಾಯಿಂಟ್ಸ್ ಗಳಿಸಲು ಶಕ್ತವಾದವು.

ಏರ್ ರೈಫಲ್‌ನಲ್ಲಿ ಬೆಳ್ಳಿ: ಐಶ್ವರಿ ಪ್ರತಾಪ್ ಸಿಂಗ್ ತೋಮರ್, ದೀಪಕ್ ಕುಮಾರ್ ಹಾಗೂ ಪಂಕಜ್ ಕುಮಾರ್ ಅವರನ್ನೊಳಗೊಂಡ ಭಾರತದ ಪುರುಷರ ತಂಡವು ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು. ಭಾರತ 14 ಪಾಯಿಂಟ್ಸ್ ಗಳಿಸಿದರೆ, ಚಿನ್ನದ ಗೆದ್ದ ಅಮೆರಿಕ ಶೂಟರ್‌ಗಳು 16 ಪಾಯಿಂಟ್ಸ್ ಕಲೆಹಾಕಿದರು.

ಮಹಿಳೆಯರ ಏರ್ ರೈಫಲ್ ಸ್ಪರ್ಧೆಯಲ್ಲಿ ನಿಶಾ ಕನ್ವರ್, ಶ್ರೀಯಾಂಕಾ ಶಾದಂಗಿ ಹಾಗೂ ಅಪೂರ್ವಿ ಚಾಂಡೇಲ ಅವರನ್ನೊಳಗೊಂಡ ತಂಡ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಅಮೆರಿಕ, ಡೆನ್ಮಾರ್ಕ್ ಹಾಗೂ ಪೋಲೆಂಡ್ ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದವು.

23 ವರ್ಷದ ಯಶಸ್ವಿನಿ ಸಿಂಗ್ ದೇಸ್ವಾಲ್ ಅವರು ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಶನಿವಾರ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದರು. ಮನು ಭಾಕರ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

ಕೊರಿಯಾ, ಸಿಂಗಪುರ, ಅಮೆರಿಕ, ಇಂಗ್ಲೆಂಡ್, ಇರಾನ್, ಫ್ರಾನ್ಸ್, ಹಂಗರಿ, ಇಟಲಿ ಸೇರಿದಂತೆ 53 ದೇಶಗಳ ಒಟ್ಟು 294 ಶೂಟಿಂಗ್ ಪಟುಗಳು ಟೂರ್ನಿಯಲ್ಲಿ ಭಾಗವಹಿಸಿದ್ದಾರೆ.

ಗಣೆಮತ್ ಐತಿಹಾಸಿಕ ಸಾಧನೆ

ಭಾರತದ ಯುವ ಶೂಟಿಂಗ್ ಸ್ಪರ್ಧಿ ಗಣೆಮತ್ ಶೆಕೋನ್ ಅವರು ಐಎಸ್‌ಎಫ್ ವಿಶ್ವಕಪ್‌ನಲ್ಲಿ ಮೊದಲ ಬಾರಿ ಪದಕವೊಂದನ್ನು ಗೆದ್ದ ಖುಷಿ ಅನುಭವಿಸಿದರು. ಮಹಿಳೆಯರ ಸ್ಕೀಟ್ ವಿಭಾಗದಲ್ಲಿ ಅವರಿಗೆ ಕಂಚಿನ ಪದಕ ಒಲಿಯಿತು. ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯ ಸ್ಕೀಟ್ ವಿಭಾಗದಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳೆ ಎಂಬ ಶ್ರೇಯವೂ ಅವರದಾಯಿತು.

ಆರು ಸ್ಪರ್ಧಿಗಳಿದ್ದ ಫೈನಲ್ಸ್‌ನಲ್ಲಿ ಕಾರ್ತಿಕಿ ಸಿಂಗ್ ಶಕ್ತಾವತ್ ನಾಲ್ಕನೇ ಸ್ಥಾನ ಪಡೆದರು. ಈ ವಿಭಾಗದಲ್ಲಿ ಗ್ರೇಟ್ ಬ್ರಿಟನ್‌ನ ಅಂಬರ್ ಹಿಲ್ ಚಿನ್ನ ಹಾಗೂ ಕಜಕಸ್ತಾನದ ಜೋಯಾ ಕ್ರಾವ್‌ಚೆಂಕೊ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಪುರುಷರ ಸ್ಕೀಟ್ ವಿಭಾಗದ ಫೈನಲ್ಸ್‌ನಲ್ಲಿ ಭಾರತದ ಗುರ್ಜಾವತ್ ಖಂಗುರ ಆರನೇ ಸ್ಥಾನ ಗಳಿಸಿದರು. ಡೆನ್ಮಾರ್ಕ್‌ನ ಜೆಸ್ಪರ್ ಹನ್ಸೆನ್ ಹಾಗೂ ಯುಎಇಯ ಬಿನ್ ಫುತಾಯಿಸ್ ಸೈಫ್ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕಗಳಿಗೆ ಗುರಿಯಿಟ್ಟರು. ಕತಾರ್‌ನ ನಾಸೆರ್ ಸಲೇಹ್ ಅಲ್–ಅತಿಯಾ ಕಂಚು ಗೆದ್ದರು.

ಮಹಿಳಾ ಟಿ20: ದಕ್ಷಿಣ ಆಫ್ರಿಕಾಕ್ಕೆ ಸರಣಿ

ಲಖನೌ (ಪಿಟಿಐ): ರೋಚಕ ಹಣಾಹಣಿಯಲ್ಲಿ ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡವು ಭಾರತ ಮಹಿಳಾ ತಂಡವನ್ನು ಮಣಿಸಿತು. ಭಾನುವಾರ ಇಲ್ಲಿ ನಡೆದ ಎರಡನೇ ಟಿ20 ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಗೆದ್ದ ಪ್ರವಾಸಿ ತಂಡ ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು.

ಲಿಜೆಲಿ ಲೀ (70, 45 ಎಸೆತ, 11 ಬೌಂಡರಿ, 1 ಸಿಕ್ಸರ್) ಹಾಗೂ ಲೌರಾ ವೊಲ್ವಾರ್ಟ್ (ಔಟಾಗದೆ 53, 39 ಎಸೆತ, 7 ಬೌಂಡರಿ) ಅರ್ಧಶತಕ ಗಳಿಸಿ ದಕ್ಷಿಣ ಆಫ್ರಿಕಾ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು ಶೆಫಾಲಿ ವರ್ಮಾ (47) ಹಾಗೂ ರಿಚಾ ಘೋಷ್ (ಔಟಾಗದೆ 44) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ನಾಲ್ಕು ವಿಕೆಟ್ ಕಳೆದುಕೊಂಡು 158 ರನ್ ಗಳಿಸಿತ್ತು. ಶೆಫಾಲಿ ಹಾಗೂ ಹರ್ಲೀನ್ ಡಿಯೊಲ್ (31) ಎರಡನೇ ವಿಕೆಟ್‌ಗೆ 79 ರನ್‌ಗಳ ಜೊತೆಯಾಟವಾಡಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 158 (ಶೆಫಾಲಿ ವರ್ಮಾ 47, ರಿಚಾ ಘೋಷ್ ಔಟಾಗದೆ 44, ಹರ್ಲೀನ್ ಡಿಯೊಲ್ 31; ಜೆಮಿಮಾ ರಾಡ್ರಿಗಸ್ 16; ಅನ್ನೆಕ್ ಬಾಶ್ 26ಕ್ಕೆ 1, ನಾದಿನ್ ಡಿ ಕ್ಲರ್ಕ್ 28ಕ್ಕೆ 1, ನೊಂಕುಲಿಲೆಕೊ ಮಾಬ 27ಕ್ಕೆ 1, ಶಬ್ನಿಮ್ ಇಸ್ಮಾಯಿಲ್ 31ಕ್ಕೆ 1). **ದಕ್ಷಿಣ ಆಫ್ರಿಕಾ:** 20 ಓವರ್‌ಗಳಲ್ಲಿ 4 ವಿಕೆಟ್‌ಗೆ 159 (ಲಿಜೆಲಿ ಲೀ 70, ಸುನೆ ಲೂಸ್ 20, ಲೌರಾ ವೊಲ್ವಾರ್ಟ್ ಔಟಾಗದೆ 53; ರಾಜೇಶ್ವರಿ ಗಾಯಕವಾಡ್ 29ಕ್ಕೆ 1, ರಾಧಾ ಯಾದವ್ 25ಕ್ಕೆ 1, ಹರ್ಲೀನ್ ಡಿಯೋಲ್ 32ಕ್ಕೆ 1) **ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ ಆರು ವಿಕೆಟ್‌ಗಳ ಜಯ; ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ.

ಪ್ಯಾರಾ ಟಿಟಿ: ರಾಜ್ಯ ತಂಡದಲ್ಲಿ 16 ಮಂದಿ

ಬೆಂಗಳೂರು: ಇಂದೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಪ್ಯಾರಾ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದ 16 ಮಂದಿ ಪಾಲ್ಗೊಳ್ಳುತ್ತಿದ್ದಾರೆ ಎಂದು ಪ್ಯಾರಾ ಟೇಬಲ್ ಟೆನಿಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ದಿನೇಶ್ ಬಾಲಕೃಷ್ಣನ್ ತಿಳಿಸಿದ್ದಾರೆ. ಕಳೆದ ಬಾರಿ ರಾಜ್ಯ ತಲಾ ಎರಡು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದಿತ್ತು.

ಪ್ಯಾರಾ ಶೂಟಿಂಗ್: ಸಿಂಗರಾಜ್‌ಗೆ ಚಿನ್ನ

ಅಲ್ ಐನ್, ಯುಎಇ (ಪಿಟಿಐ): ಭಾರತದ ಸಿಂಗರಾಜ್ ಇಲ್ಲಿ ನಡೆ ಯುತ್ತಿರುವ ವಿಶ್ವ ಪ್ಯಾರಾ ಸ್ಪೋರ್ಟ್ ಶೂಟಿಂಗ್ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಪಿ1 ಪುರುಷರ 10 ಮೀಟರ್ ಏರ್ ಪಿಸ್ತೂಲ್ ಎಸ್‌ಎಚ್1 ಫೈನಲ್ಸ್‌ನಲ್ಲಿ ಅವರು ಅಗ್ರಸ್ಥಾನ ಗಳಿಸಿದರು. ಫೈನಲ್‌ನಲ್ಲಿ ಅವರು (236.8) 2.8 ಪಾಯಿಂಟ್ಸ್ ಅಂತರದಿಂದ ಉಜ್ಬೆಕಿಸ್ತಾನದ ಸರ್ವರ್ ಇಬ್ರಾಗಿಮೊವ್ (234) ಸವಾಲು ಮೀರಿದರು.

ಮಾಜಿ ಪ್ಯಾರಾಲಿಂಪಿಕ್ ಚಾಂಪಿಯನ್, ಟರ್ಕಿಯ ಮುಹರ್ರೆಮ್ ಕೊರಾನ್ ಯಮಾಕ್ (214.4) ಅವರಿಗೆ ಕಂಚಿನ ಪದಕ ಒಲಿಯಿತು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಮನೀಷ್ ನರ್ವಾಲ್ 194.3 ಪಾಯಿಂಟ್ಸ್ ಕಲೆಹಾಕಿ ನಾಲ್ಕನೇ ಸ್ಥಾನ ಗಳಿಸಿದರು.ರಾಹುಲ್ ಜಾಕಡ್ ಎಂಟನೇ ಸ್ಥಾನ ಗಳಿಸಿದರು. ರಾಹುಲ್ ಪಿ3 25 ಮೀ. ಮಿಶ್ರ ಏರ್ ಪಿಸ್ತೂಲ್ ಎಸ್‌ಎಚ್1 ವಿಭಾಗದಲ್ಲಿ ಈಗಾಗಲೇ ಕಂಚು ಗೆದ್ದುಕೊಂಡಿದ್ದಾರೆ. ಸಿಂಗರಾಜ್ ಅವರು ಚಿನ್ನದ ಪದಕ ಗೆಲ್ಲುವುದರೊಂದಿಗೆ ಭಾರತವು (ತಲಾ ಒಂದು ಚಿನ್ನ, ಕಂಚು) ಟೂರ್ನಿಯ ಪದಕಗಳ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿದೆ.

ಆಸ್ಟ್ರೇಲಿಯಾದ ನ್ಯೂಸೌತ್‌ವೇಲ್ಸ್ ರಾಜ್ಯದ ಪೋರ್ಟ್ ಮ್ಯಾಕ್ವೇರಿಯಲ್ಲಿ ಪ್ರವಾಹದಿಂದ ಉಂಟಾಗಿರುವ ಸ್ಥಳದ ವೈಮಾನಿಕ ನೋಟ –ರಾಯಿಟರ್ಸ್ ಚಿತ್ರ

ಮಸಾಜ್ ಪಾರ್ಲರ್ ಮೇಲೆ ಗುಂಡಿನ ದಾಳಿ: ಅಟ್ಲಾಂಟಾದಲ್ಲಿ ಪ್ರತಿಭಟನೆ

ಅಟ್ಲಾಂಟಾ (ಅಮೆರಿಕ, ಎಪಿ): ಮಸಾಜ್ ಪಾರ್ಲರ್ ಮೇಲೆ ಇತ್ತೀಚೆಗೆ ನಡೆದ ದಾಳಿಯನ್ನು ಖಂಡಿಸಿ ಶನಿವಾರ ಅಟ್ಲಾಂಟಾದ ಹಲವೆಡೆ ಪ್ರತಿಭಟನೆಗಳು ನಡೆದವು.

'ಜಾರ್ಜಿಯಾ ಸ್ಟೇಟ್ ಕ್ಯಾಪಿಟಲ್ ಬಳಿ ಸೇರಿದ ವಿವಿಧ ಸಮುದಾಯದ ಜನರು ವರ್ಣ ಮತ್ತು ಜನಾಂಗೀಯ ಬೇಧದ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಲಿಬರ್ಟಿ ಪ್ಲಾಜಾದ ಬಳಿಯೂ ನೂರಾರು ಪ್ರತಿಭಟನಕಾರರು ಸೇರಿದ್ದರು.

ಶನಿವಾರ ಅಟ್ಲಾಂಟಾದೆಲ್ಲೆಡೆ ಈ ರೀತಿಯ ಹಲವು ರ್‍ಯಾಲಿಗಳು ನಡೆದಿದ್ದು, ಈ ವೇಳೆ ಜನರು ಜನಾಂಗೀಯ ದೌರ್ಜನ್ಯದ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಂಸದರಾದ ರಾಫೆಲ್ ವಾರ್ನಾಕ್, ಜಾನ್ ಒಸಾಫ್ ಮತ್ತು ಜಾರ್ಜಿಯಾದ ಪ್ರತಿನಿಧಿ ವಿಯೆಟ್ನಾಮೀಸ್ ಅಮೆರಿಕನ್ ಬೀ ನ್ಗುಯೆನ್‌ಗೆ ಬೆಂಬಲ ವ್ಯಕ್ತಪಡಿಸಿದರು.

ಆಸ್ಟ್ರೇಲಿಯಾ: ಭಾರಿ ಮಳೆ, ಪ್ರವಾಹ–ಜನಜೀವನ ತತ್ತರ

ಸಿಡ್ನಿ (ಎಪಿ): ಆಸ್ಟ್ರೇಲಿಯಾದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ನ್ಯೂಸೌತ್ ವೇಲ್ಸ್ ರಾಜ್ಯದಲ್ಲಿ ಭೀಕರ ಪ್ರವಾಹ ತಲೆದೋರಿರುವ ಕಾರಣ ಪ್ರವಾಹಪೀಡಿತ ಪ್ರದೇಶಗಳಲ್ಲಿನ ಜನರನ್ನು ಬೇರೆಡೆಗೆ ಸ್ಥಳಾಂತರಿಸುವ ಕಾರ್ಯ ಆರಂಭವಾಗಿದೆ.

ರಾಜ್ಯದ ತುರ್ತು ರಕ್ಷಣಾ ಸೇವಾ ಸಹಾಯವಾಣಿಗೆ ಸಹಾಯ ಯಾಚಿಸಿ ಶನಿವಾರ ರಾತ್ರಿ 640ಕ್ಕೂ ಹೆಚ್ಚಿನ ಕರೆಗಳು ಬಂದಿದ್ದವು. ಅದರಲ್ಲಿ 66 ಕರೆಗಳು ಪ್ರವಾಹದಲ್ಲಿ ರಕ್ಷಣೆ ಕೋರಿ ಬಂದ ಕರೆಗಳಾಗಿದ್ದವು.

'ಪ್ರವಾಹದಲ್ಲಿ ಸಿಲುಕಿದ್ದ 100ಕ್ಕೂ ಹೆಚ್ಚಿನ ಜನರನ್ನು ರಕ್ಷಿಸಲಾಗಿದೆ' ಎಂದು ನ್ಯೂಸೌತ್ ವೆಲ್ಸ್ ರಾಜ್ಯದ ಮುಖ್ಯಸ್ಥ ಗ್ಲಾಡಿಸ್ ಬೆರೆಜಿಕ್ಲಿಯನ್ ತಿಳಿಸಿದ್ದಾರೆ.

'ರಾಜ್ಯದ ಈಶಾನ್ಯಭಾಗದ ಉತ್ತರ ಕರಾವಳಿಯ ಹಲವೆಡೆ ಪ್ರವಾಹದಲ್ಲಿ ಸಿಲುಕಿರುವ ಜನರ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಪ್ರತಿ 100 ವರ್ಷಗಳಿಗೊಮ್ಮೆ ಆಸ್ಟ್ರೇಲಿಯಾ ಇಂಥ ಭೀಕರ ಪ್ರವಾಹಕ್ಕೆ ಸಾಕ್ಷಿಯಾಗುತ್ತದೆ. ಉತ್ತರ ಕರಾವಳಿಯಲ್ಲಿ ಮಳೆ ನಿಲ್ಲುವ ಸೂಚನೆ ಸದ್ಯಕ್ಕೆ ಕಾಣುತ್ತಿಲ್ಲ. ಈಗಾಗಲೇ ಪ್ರವಾಹದಿಂದ ಹಾನಿಗೀಡಾಗಿರುವ ಪ್ರದೇಶಗಳಲ್ಲೂ ಮಳೆ ಮುಂದುವರಿಯುವ ಸಾಧ್ಯತೆ ಇದೆ' ಎಂದು ಗ್ಲಾಡಿಸ್ ಅಭಿಪ್ರಾಯಪಟ್ಟಿದ್ದಾರೆ.

'ಪಶ್ಚಿಮ ಸಿಡ್ನಿಯ ಕೆಲವು ಭಾಗಗಳಲ್ಲಿ ಪ್ರತಿ 50 ವರ್ಷಗಳಿಗೊಮ್ಮೆ ಹವಾಮಾನದಲ್ಲಿ ಏರುಪೇರುಗಳಾಗುತ್ತಿದೆ. ಇಲ್ಲಿನ ಕೆಲವು ಸ್ಥಳಗಳಲ್ಲಿ ಶುಕ್ರವಾರ 300 ಮಿಲಿ ಲೀಟರ್‌ನಷ್ಟು ಮಳೆಯಾಗಿದ್ದು, ಇದು ಹಲವು ದಾಖಲೆಗಳನ್ನು ಮುರಿದಿದೆ' ಎಂದು ಗ್ಲಾಡಿಸ್ ಹೇಳಿದ್ದಾರೆ.

ಪಶ್ಚಿಮ ಸಿಡ್ನಿಯಲ್ಲಿರುವ ವರ್ರಗಂಬಾ ಅಣೆಕಟ್ಟು ತುಂಬಿ ಹರಿದಿದ್ದು, ಇದುವರೆಗೆ 13 ಕಡೆಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ತೆರೆಯ ಲಾಗಿದೆ. ಮಳೆ ಮತ್ತು ಪ್ರವಾಹದ ವಾತಾವರಣ ಇನ್ನೂ ಕೆಲವು ದಿನ ಮುಂದುವರಿಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಪಾಕಿಸ್ತಾನ: 12 ದೇಶಗಳ ಮೇಲೆ ಪ್ರಯಾಣ ನಿರ್ಬಂಧ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನವು ದಕ್ಷಿಣ ಆಫ್ರಿಕಾ, ರವಾಂಡಾ ಮತ್ತು ತಾಂಜೇನಿಯಾ ಸೇರಿದಂತೆ ಒಟ್ಟು 12 ರಾಷ್ಟ್ರಗಳ ಮೇಲೆ ಪ್ರಯಾಣ ನಿರ್ಬಂಧವನ್ನು ಹೇರಿದೆ.

ದಕ್ಷಿಣ ಆಫ್ರಿಕಾ ಮತ್ತು ಬ್ರೆಜಿಲ್‌ನಲ್ಲಿ ರೂಪಾಂತರಗೊಂಡ ವೈರಸ್ ಪತ್ತೆಯಾದ ಬಳಿಕ ಪಾಕಿಸ್ತಾನದ ನಾಗರಿಕ ವಿಮಾನಯಾನ ಪ್ರಾಧಿಕಾರವು(ಸಿಎಎ) ದೇಶಗಳನ್ನು 'ಎ', 'ಬಿ' ಮತ್ತು 'ಸಿ' ವರ್ಗಗಳಾಗಿ ವಿಂಗಡಿಸಿತ್ತು. ಇದೀಗ ಈ ವರ್ಗಗಳನ್ನು ನವೀಕರಿಸಿರುವ ಪ್ರಾಧಿಕಾರವು 'ಸಿ' ವರ್ಗದ 12 ರಾಷ್ಟ್ರಗಳ ಮೇಲೆ ಪ್ರಯಾಣ ನಿರ್ಬಂಧ ಹೇರಿದೆ.

12 ದೇಶಗಳಿಂದ ಪಾಕಿಸ್ತಾನಕ್ಕೆ ಬರುವ ಪ್ರಯಾಣಿಕರ ಮೇಲೆ ಪ್ರಯಾಣ ನಿರ್ಬಂಧ ಹೇರಲಾಗಿದ್ದು, ಈ ನಿರ್ಬಂಧವು ಮಾರ್ಚ್ 23 ರಿಂದ ಏಪ್ರಿಲ್ 5ರ ತನಕ ಜಾರಿಯಲ್ಲಿ ಇರಲಿದೆ.

'ಸಿ' ವರ್ಗದಲ್ಲಿ ಬೋತ್ಸ್ವಾನ, ಬ್ರೆಜಿಲ್, ಕೊಲಂಬಿಯಾ, ಕಮರೊಸ್, ಘಾನಾ, ಕಿನ್ಯಾ, ಮೊಜಾಂಬಿಕ್, ಪೆರು, ರವಾಂಡಾ, ದಕ್ಷಿಣ ಆಫ್ರಿಕಾ, ತಾಂಜೇನಿಯಾ ಮತ್ತು ಜಾಂಬಿಯಾ ದೇಶಗಳಿವೆ.

ಈ ಹಿಂದೆ 'ಸಿ' ವರ್ಗದ ರಾಷ್ಟ್ರಗಳಿಗೆ ನೀಡಲಾಗಿದ್ದ ವಿನಾಯಿತಿಗಳನ್ನು ಕೂಡ ಸಿಎಎ ಹಿಂಪಡೆದಿದೆ.

ಪಾಕಿಸ್ತಾನದಲ್ಲಿ ಭಾನುವಾರ 3,667 ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಪಾಕಿಸ್ತಾನದ ಒಟ್ಟು ಪ್ರಕರಣಗಳ ಸಂಖ್ಯೆ 626,802ಕ್ಕೆ ಏರಿಕೆಯಾಗಿದೆ. ಮೃತರ ಸಂಖ್ಯೆಯು 13,843ಕ್ಕೆ ಹೆಚ್ಚಿದೆ. 581,852 ಸೋಂಕಿತರು ಗುಣಮುಖರಾಗಿದ್ದಾರೆ. ಆದರೆ 2,900 ಮಂದಿಯ ಪರಿಸ್ಥಿತಿ ಗಂಭೀರವಾಗಿದೆ.



ಗಾಹುಂಜೆಯ ಎಂಸಿಎ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಗ್ಲೆಂಡ್ ಎದುರಿನ ಏಕದಿನ ಸರಣಿ

ಪುಣೆಗೆ ಬಂದಿಳಿದ ಭಾರತ ಕ್ರಿಕೆಟ್ ತಂಡ

ಪುಣೆ (ಪಿಟಿಐ): ಟೆಸ್ಟ್ ಮತ್ತು ಟಿ20 ಸರಣಿಗಳಲ್ಲಿ ಅಮೋಘ ಸಾಮರ್ಥ್ಯ ತೋರಿರುವ ಭಾರತ ಕ್ರಿಕೆಟ್ ತಂಡ ಇಂಗ್ಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಆಡುವುದಕ್ಕಾಗಿ ಇಲ್ಲಿಗೆ ಬಂದಿಳಿದಿದೆ. ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಇದೇ 23ರಂದು ನಡೆಯಲಿದೆ.

ನಾಲ್ಕು ಟೆಸ್ಟ್ ಪಂದ್ಯಗಳ ಮೊದಲ ಎರಡು ಪಂದ್ಯಗಳು ಚೆನ್ನೈನಲ್ಲಿ ನಡೆದಿದ್ದವು. ಉಳಿದೆರಡು ಪಂದ್ಯಗಳಿಗೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಆತಿಥ್ಯ ವಹಿಸಿತ್ತು. ಸರಣಿಯಲ್ಲಿ ಭಾರತ 3–1ರ ಜಯ ಸಾಧಿಸಿತ್ತು. ಟಿ20 ಸರಣಿಯ ಎಲ್ಲ ಐದು ಪಂದ್ಯಗಳು ಅಹಮದಾಬಾದ್‌ನಲ್ಲಿ ನಡೆದಿದ್ದವು. ಭಾರತ 3–2ರಲ್ಲಿ ಗೆಲುವು ಪಡೆದಿತ್ತು.

ಅಹಮದಾಬಾದ್‌ನಿಂದ ವಿಶೇಷ ವಿಮಾನದಲ್ಲಿ ಸಂಜೆ 4.45ರ ವೇಳೆ ಪುಣೆ ತಲುಪಿದ ವಿರಾಟ್ ಕೊಹ್ಲಿ ನಾಯಕತ್ವದ ತಂಡದಲ್ಲಿ ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ, ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಇದ್ದಾರೆ. ಪಂದ್ಯಗಳು ಗಾಹುಂಜೆಯಲ್ಲಿರುವ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆಯಲಿದ್ದು ಪ್ರೇಕ್ಷಕರಿಗೆ ಅವಕಾಶ ಇಲ್ಲ.

ಮುಖ್ಯಾಂಶಗಳು

- ಟೆಸ್ಟ್ ಮತ್ತು ಟಿ20 ಸರಣಿ ಗದ್ದಿರುವ ವಿರಾಟ್ ಬಳಗ
- ಏಕದಿನ ತಂಡದಲ್ಲಿ ಕರ್ನಾಟಕದ ಪ್ರಸಿದ್ಧ ಕೃಷ್ಣ
- ಮೂರು ಪಂದ್ಯಗಳ ಸರಣಿಗೆ ಪ್ರೇಕ್ಷಕರಿಗೆ ಪ್ರವೇಶವಿಲ್ಲ

18 ಮಂದಿಯ ತಂಡದಲ್ಲಿ ರೋಹಿತ್ ಶರ್ಮಾ, ಶಿಖರ್ ಧವನ್, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ಭುವನೇಶ್ವರ್ ಕುಮಾರ್ ಅವರೂ ಇದ್ದಾರೆ. ಭಾರತ ಕಳೆದ ವರ್ಷ ಕೊನೆಯದಾಗಿ ಏಕದಿನ ಸರಣಿ ಆಡಿದ್ದು ಆಸ್ಟ್ರೇಲಿಯಾ ವಿರುದ್ಧ 1–2ರಲ್ಲಿ ಸೋತಿತ್ತು.



ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಟಿ20 ಪಂದ್ಯದಲ್ಲಿ ನಿಧಾನಗತಿಯ ಬೌಲಿಂಗ್: ಕೊಹ್ಲಿ ಬಳಗಕ್ಕೆ ದಂಡ

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ಶನಿವಾರ ಮುಕ್ತಾಯಗೊಂಡ ಟಿ20 ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಬೌಲಿಂಗ್ ಮಾಡಿ ಮುಗಿಸದ ಭಾರತ ತಂಡಕ್ಕೆ ದಂಡ ವಿಧಿಸಲಾಗಿದೆ. ಪಂದ್ಯದ ಸಂಭಾವನೆಯ ಶೇಕಡಾ 40 ಭಾಗವನ್ನು ದಂಡದ ರೂಪದಲ್ಲಿ ನೀಡಬೇಕಾಗಿದೆ.

ನಿಗದಿ ಮಾಡಿದ ಅವಧಿ ಮುಕ್ತಾಯಗೊಂಡಾಗ ಭಾರತ ತಂಡ ಇನ್ನೂ ಎರಡು ಓವರ್ ಮಾಡುವುದು ಬಾಕಿ ಇತ್ತು ಎಂದು ಪಂದ್ಯದ ಅಂಪೈರ್‌ಗಳಾಗಿದ್ದ ಅನಿಲ್ ಚೌಧರಿ, ನಿತಿನ್ ಮೆನನ್ ಮತ್ತು ಕೆ.ಎನ್.ಅನಂತಪದ್ಮನಾಭನ್ ವರದಿ ನೀಡಿದ್ದರು. ಇದರ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ರೆಫರಿ ಜಾವಗಲ್ ಶ್ರೀನಾಥ್ ಮುಂದಾದರು.

ಆಟಗಾರರು ಮತ್ತು ನೆರವು ಸಿಬ್ಬಂದಿಯ ಕರ್ತವ್ಯಗಳಿಗೆ ಸಂಬಂಧಿಸಿದ ಐಸಿಸಿಯ ನಿಯಮ 2.22ರ ಅಡಿಯಲ್ಲಿ ದಂಡ ವಿಧಿಸಲಾಗಿದೆ. ತಪ್ಪನ್ನು ನಾಯಕ ಕೊಹ್ಲಿ ಒಪ್ಪಿಕೊಂಡಿದ್ದು ಸಮರ್ಪಕ ಕಾರಣವನ್ನೂ ನೀಡಿದ್ದಾರೆ. ಹೀಗಾಗಿ ಈ ಸಂಬಂಧ ವಿಚಾರಣೆ ನಡೆಸುವ ಅಗತ್ಯವಿಲ್ಲ ಎಂದು ರೆಫರಿ ತಿಳಿಸಿದ್ದಾರೆ. ಪಂದ್ಯದಲ್ಲಿ ಭಾರತ 36 ರನ್‌ಗಳಿಂದ ಜಯ ಗಳಿಸಿತ್ತು.

ಇಂಗ್ಲೆಂಡ್ ತಂಡಕ್ಕೆ ಆರ್ಚರ್ ಅಲಭ್ಯ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದ ವೇಗದ ಬೌಲರ್ ಜೋಫ್ರಾ ಆರ್ಚರ್ ಅವರ ಮೊಣಕೈ ನೋವಿನಿಂದಾಗಿ ಭಾರತ ಎದುರಿನ ಏಕದಿನ ಸರಣಿಗೆ ಅಲಭ್ಯರಾಗಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಆರಂಭದ ಕೆಲವು ಪಂದ್ಯಗಳನ್ನೂ ಅವರು ಕಳೆದುಕೊಳ್ಳಲಿದ್ದಾರೆ.

ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಭಾನುವಾರ ಈ ವಿಷಯ ತಿಳಿಸಿದೆ. ಶನಿವಾರ ಕೊನೆಗೊಂಡ ಟಿ20 ಸರಣಿಯ ಎಲ್ಲ ಐದು ಪಂದ್ಯಗಳಲ್ಲೂ ನೋವು ಸಹಿಸುತ್ತಲೇ ಅವರು ಬೌಲಿಂಗ್ ಮಾಡಿದ್ದಾರೆ ಎಂದು ವಿವರಿಸಿದೆ.

ಟಿ20 ಸರಣಿಯ ಪ್ರತಿ ಪಂದ್ಯದಲ್ಲೂ ಅವರು ತಮ್ಮ ಪಾಲಿನ ತಲಾ ನಾಲ್ಕು ಓವರ್‌ಗಳನ್ನು ಬೌಲಿಂಗ್ ಮಾಡಿದ್ದಾರೆ. ಮೂರು ಪಂದ್ಯಗಳ ಏಕದಿನ ಸರಣಿ ಇದೇ 23ರಿಂದ ಪುಣೆಯಲ್ಲಿ ನಡೆಯಲಿದೆ.

ಏಪ್ರಿಲ್ ಒಂಬತ್ತರಂದು ಐಪಿಎಲ್ ಆರಂಭಗೊಳ್ಳಲಿದೆ.

ಭಾರತ ಎದುರಿನ ಟೆಸ್ಟ್ ಸರಣಿಯ ಆರಂಭದಲ್ಲೂ ಆರ್ಚರ್‌ಗೆ ಮೊಣಕೈ ನೋವು ಕಾಣಿಸಿಕೊಂಡಿತ್ತು. ಹೀಗಾಗಿ ಮೊದಲ ಎರಡು ಪಂದ್ಯಗಳಲ್ಲಿ ಅವರು ಆಡಿರಲಿಲ್ಲ. ಇದೀಗ ಹೆಚ್ಚಿನ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ಇಂಗ್ಲೆಂಡ್‌ಗೆ ಕರೆಸಿಕೊಳ್ಳಲಾಗಿದೆ ಎಂದು ಕ್ರಿಕೆಟ್ ಮಂಡಳಿ ತಿಳಿಸಿದೆ.

ಜೊಫ್ರಾ ಆರ್ಚರ್ –ರಾಯಿಟರ್ಸ್ ಚಿತ್ರ

ಟಿ20 ವಿಶ್ವಕಪ್: ಭಾರತವೇ ನೆಚ್ಚಿನ ತಂಡ – ಆಥರ್ಟನ್

ಲಂಡನ್ (ಪಿಟಿಐ): ಉತ್ತಮ ಆಟಗಾರರು ಇರುವ ಭಾರತ ತಂಡವೇ ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸುವ ನೆಚ್ಚಿನ ತಂಡವಾಗಿದೆ. ಆತಿಥೇಯ ತಂಡವೂ ಆಗಿರುವುದರಿಂದ ಅವಕಾಶ ಹೆಚ್ಚು ಎಂದು ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕ್ ಆಥರ್ಟನ್ ಅಭಿಪ್ರಾಯ ಪಟ್ಟಿದ್ದಾರೆ.

ಆಲ್‌ರೌಂಡರ್ ರವೀಂದ್ರ ಜಡೇಜ, ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅವರಿಲ್ಲದಿದ್ದರೂ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಟಿ20 ಸರಣಿ 3–2ರಿಂದ ಜಯಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಆಥರ್ಟನ್, 'ಐಪಿಎಲ್ ಮತ್ತು ಟಿ20 ಕ್ರಿಕೆಟ್‌ನಲ್ಲಿ ಹೆಚ್ಚು ಆಡುವುದರಿಂದ ಭಾರತ ತಂಡದಲ್ಲಿ ಪ್ರತಿಭಾವಂತ ಆಟಗಾರರ ದೊಡ್ಡ ಪಡೆಯೇ ಇದೆ. ಕೇವಲ ಮೂವರು ಬೌಲರ್‌ಗಳ ನೆರವಿನಿಂದಲೇ ಇಂಗ್ಲೆಂಡ್ ತಂಡವನ್ನು ಸೋಲಿಸಿರುವುದು ಇದಕ್ಕೆ ಉದಾಹರಣೆ' ಎಂದಿದ್ದಾರೆ.

'ಇದೆಲ್ಲದರ ಜೊತೆಗೆ ವಿಶ್ವಕಪ್ ಟೂರ್ನಿಯು ಭಾರತದಲ್ಲಿಯೇ ನಡೆಯಲಿದೆ. ತಮ್ಮದೇ ಅಂಗಳ ಮತ್ತು ವಾತಾವರಣವೂ ತಂಡದ ಗೆಲುವಿನ ಅವಕಾಶವನ್ನು ಮತ್ತಷ್ಟು ಹೆಚ್ಚಿಸುತ್ತದೆ' ಎಂದರು.

'ವಿಶ್ವಕಪ್ ಟೂರ್ನಿಯಲ್ಲಿ ಭಾರತಕ್ಕೆ ದಿಟ್ಟ ಪೈಪೋಟಿ ನೀಡುವ ತಂಡಗಳು ಇವೆ. ಆದ್ದರಿಂದ ಸುಲಭದ ಹಾದಿಯಾಗಲಾರದು. ಇಂಗ್ಲೆಂಡ್, ವೆಸ್ಟ್ ಇಂಡೀಸ್ ತಂಡಗಳು ಉತ್ತಮವಾಗಿ ಆಡಬಲ್ಲ ಸಮರ್ಥ ತಂಡಗಳಾಗಿವೆ' ಎಂದರು.

ಇಂಡಿಯಾ ಲೆಜೆಂಡ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಯೂಸುಫ್ ಪಠಾಣ್ ಹಾಗೂ ಯುವರಾಜ್ ಸಿಂಗ್ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಇಂಡಿಯಾ ಲೆಜೆಂಡ್ಸ್ ತಂಡವು ರಸ್ತೆ ಸುರಕ್ಷತಾ ವಿಶ್ವ ಟಿ20 ಕ್ರಿಕೆಟ್ ಸರಣಿಯ ಪ್ರಶಸ್ತಿ ಗೆದ್ದುಕೊಂಡಿತು. ಛತ್ತೀಸಗಡದ ರಾಯಪುರದಲ್ಲಿ ನಡೆದ ಫೈನಲ್‌ನಲ್ಲಿ ಸಚಿನ್ ತೆಂಡೂಲ್ಕರ್ ನೇತೃತ್ವದ ಇಂಡಿಯಾ ಲೆಜೆಂಡ್ಸ್ 14 ರನ್‌ಗಳಿಂದ ಶ್ರೀಲಂಕಾ ಲೆಜೆಂಡ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಇಂಡಿಯಾ ಲೆಜೆಂಡ್ಸ್ ಪರ ತೆಂಡೂಲ್ಕರ್ 30 ರನ್ ಗಳಿಸಿದರು. ಯುವರಾಜ್ ಸಿಂಗ್ (60, 41 ಎಸೆತ, 4 ಬೌಂಡರಿ, 4 ಸಿಕ್ಸರ್) ಹಾಗೂ ಯೂಸುಫ್ (ಔಟಾಗದೆ 62, 36 ಎಸೆತ, 4 ಬೌಂಡರಿ, 5 ಸಿಕ್ಸರ್) ನಾಲ್ಕನೇ ವಿಕೆಟ್‌ಗೆ 85 ರನ್ ಸೇರಿಸಿದರು.

ಗುರಿ ಬೆನ್ನತ್ತಿದ ತಿಲಕರತ್ನೆ ದಿಲ್‌ಶಾನ್ ಸಾರಥ್ಯದ ಲಂಕಾ ಏಳು ವಿಕೆಟ್ ಕಳೆದುಕೊಂಡು 167 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಸಂಕ್ಷಿಪ್ತ ಸ್ಕೋರ್: ಇಂಡಿಯಾ ಲೆಜೆಂಡ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 181 (ಯುವರಾಜ್ ಸಿಂಗ್ 60, ಯೂಸುಫ್ ಪಠಾಣ್ ಔಟಾಗದೆ 62, ಸಚಿನ್ ತೆಂಡೂಲ್ಕರ್ 30; ಫರ್ವೇಜ್ ಮೆಹರೂಫ್ 16ಕ್ಕೆ 1, ರಂಗನ ಹೆರಾತ್ 11ಕ್ಕೆ 1, ಸನತ್ ಜಯಸೂರ್ಯ 17ಕ್ಕೆ 1). **ಲಂಕಾ ಲೆಜೆಂಡ್ಸ್:** 20 ಓವರ್‌ಗಳಲ್ಲಿ 7ಕ್ಕೆ 167 (ತಿಲಕರತ್ನೆ ದಿಲ್‌ಶಾನ್ 21, ಸನತ್ ಜಯಸೂರ್ಯ 43, ಚಿಂಥಕ ಜಯಸಿಂಗೆ 40, ಕೌಶಲ್ಯ ವೀರರತ್ನೆ 38; ಯೂಸುಫ್ ಪಠಾಣ್ 26ಕ್ಕೆ 2, ಇರ್ಫಾನ್ ಪಠಾಣ್ 29ಕ್ಕೆ 2, ಮನ್‌ಪ್ರೀತ್ ಗೋನಿ 24ಕ್ಕೆ 1, ಮುನಾಫ್ ಪಟೇಲ್ 46ಕ್ಕೆ 1). **ಫಲಿತಾಂಶ:** ಇಂಡಿಯಾ ಲೆಜೆಂಡ್ಸ್‌ಗೆ 14 ರನ್‌ಗಳ ಜಯ ಮತ್ತು ಪ್ರಶಸ್ತಿ. **ಪಂದ್ಯಶ್ರೇಷ್ಠ:** ಯೂಸುಫ್ ಪಠಾಣ್, **ಸರಣಿ ಶ್ರೇಷ್ಠ:** ತಿಲಕರತ್ನೆ ದಿಲ್‌ಶಾನ್.

ಟೆನಿಸ್: ಜ್ವೆರೆವ್ ಚಾಂಪಿಯನ್

ಮೆಕ್ಸಿಕೊ ಸಿಟಿ (ರಾಯಿಟರ್ಸ್): ರೋಚಕ ಹಣಾಹಣಿಯಲ್ಲಿ ಸ್ಟೆಫನೋಸ್ ಸಿಸಿಪಸ್‌ಗೆ ಸೋಲುಣಿಸಿದ ಅಲೆಕ್ಸಾಂಡರ್ ಜ್ವೆರೆವ್ ಮೆಕ್ಸಿಕನ್ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಜಯಿಸಿದರು.

ಅಕಪಲ್ಕೊದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಜರ್ಮನಿಯ ಜ್ವೆರೆವ್ 6–4, 7–6ರಿಂದ ಗ್ರೀಸ್ ಆಟಗಾರನ ಸವಾಲು ಮೀರಿದರು. ಇದು ಜ್ವೆರೆವ್ ಗೆದ್ದ 14ನೇ ಎಟಿಪಿ ಪ್ರಶಸ್ತಿಯಾಗಿದೆ.

ಟೂರ್ನಿಯ 2019ರ ಆವೃತ್ತಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೋಸ್‌ಗೆ ಜ್ವೆರೆವ್ ಮಣಿದಿದ್ದರು.

ಈ ಬಾರಿಯ ಪ್ರಶಸ್ತಿ ಸುತ್ತಿನ ಹಣಾಹಣಿಯ ಮೊದಲ ಸೆಟ್‌ನ ಆರಂಭದಲ್ಲಿ ಜ್ವೆರೆವ್ 1–4 ಗೇಮ್‌ಗಳ ಹಿನ್ನಡೆ ಅನುಭವಿಸಿದ್ದರು. ಆದರೆ ಎರಡನೇ ಶ್ರೇಯಾಂಕದ ಜರ್ಮನಿ ಆಟಗಾರ, ಐದು ಗೇಮ್ ಗೆದ್ದುಕೊಳ್ಳುವ ಮೂಲಕ ಪುಟಿದೆದ್ದು ಸೆಟ್ ವಶಪಡಿಸಿಕೊಂಡರು. ಎರಡನೇ ಸೆಟ್‌ನಲ್ಲೂ ಜಿದ್ದಾಜಿದ್ದಿ ಪೈಪೋಟಿ ಕಂಡುಬಂತು. ಟೈಬ್ರೇಕ್‌ವರೆಗೂ ಸಾಗಿದ ಈ ಸೆಟ್, ದೀರ್ಘ ರ್‍ಯಾಲಿಗಳಿಗೆ ಸಾಕ್ಷಿಯಾಯಿತು. ಆದರೆ ಅಂತಿಮವಾಗಿ ಜ್ವೆರೆವ್ ಸೆಟ್‌ನೊಂದಿಗೆ ಪಂದ್ಯ ಹಾಗೂ ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾದರು.

ಅಲೆಕ್ಸಾಂಡರ್ ಜ್ವೆರೆವ್– ಎಎಫ್‌ಪಿ ಚಿತ್ರ

ಕಬಡ್ಡಿ: ಚಂದ್ರ, ಅರ್ಚನಾಗೆ ರಾಜ್ಯ ತಂಡಗಳ ನಾಯಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರ ನಾಯಕ್ ಮತ್ತು ಅರ್ಚನಾ, ತೆಲಂಗಾಣದಲ್ಲಿ ಸೋಮವಾರ ಆರಂಭವಾಗಲಿರುವ ರಾಷ್ಟ್ರೀಯ ಜೂನಿಯರ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ರಾಜ್ಯದ ಬಾಲಕ ಮತ್ತು ಬಾಲಕಿಯರ ತಂಡಗಳನ್ನು ಮುನ್ನಡೆಸಲಿದ್ದಾರೆ.

ತಂಡಗಳು: ಬಾಲಕರು: ಚಂದ್ರ ನಾಯಕ್ (ನಾಯಕ), ಶ್ರವಣ್ ಗೌಡ, ಕೆ.ಸುಮತ್, ಕಾರ್ತಿಕ್ ನಾಯಕ್, ವರುಣ ಎಸ್, ಸುಶಾಂತ್, ಜೇಮ್ಸ್ ರೋಷನ್, ಮನೋಜ್, ಡಿ.ಪಿ.ಚಂದ್ರನ್, ಮೌನೇಶ್ ಕಮ್ಮಾರ್, ರಾಮಕೃಷ್ಣ, ಮಹೇಂದ್ರ; ಬಾಲಕಿಯರು: ಅರ್ಚನಾ (ನಾಯಕಿ), ವಿನುಶ್ರೀ, ಮಧುಮಿತಾ, ವೈಶಾಲಿ, ಪ್ರೀತಿ, ಮೇಘಾ ಸಹನಾ, ಕಾವೇರಿ, ನಿಶ್ಚಿತಾ, ದೀಪಾ ಬ್ಯಾಕೋಡ, ಲಕ್ಷ್ಮಿ, ಶೀಬಾ.